ಅಡ್ನಾಟ್ಟಿ ಮ್ಯಾಸಬೇಡರು
ಒಂದು ಸಮುದಾಯ ಅಧ್ಯಯನ

ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು

ಕಲ್ಲಪ್ಪ ಎನ್.

ಮಾರ್ಗದರ್ಶಕರು

ಗಂಗಾಧರ ದೈವಜ್ಞ

ಅಧ್ಯಾಪಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬುಡಕಟ್ಟು ಅಧ್ಯಯನ ವಿಭಾಗ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

16A

16

ಅಡ್ನಟ್ಟಿ ಮ್ಯಾಸಬೇಡರು
ಒಂದು ಸಮುದಾಯ ಅಧ್ಯಯನ

ಎಂ.ಫಿಲ್ ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು

ಕಲ್ಲಪ್ಪ ಎನ್.

ಮಾರ್ಗದರ್ಶಕರು

ಗಂಗಾಧರ ದೈವಜ್ಞ

ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

ಧೃಢೀಕರಣ ಪತ್ರ

ಶ್ರೀ ಕಲ್ಲಪ್ಪ ಎನ್. ಇವರು 'ಅಡ್ಲಟ್ಟಿ ವ್ಯಾಸಬೇಡರು : ಒಂದು ಸಮುದಾಯ ಅಧ್ಯಯನ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

ದಿನಾಂಕ : ೨೦ ಏಪ್ರಿಲ್ ೨೦೦೩
ಸ್ಥಳ : ವಿದ್ಯಾರಣ್ಯ

(ಗಂಗಾಧರ ದೈವಜ್ಞ)
ಮಾರ್ಗದರ್ಶಕರು
ಅಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಅಡ್ಲಟ್ಟಿ ವ್ಯಾಸಬೇಡರು : ಒಂದು ಸಮುದಾಯ ಅಧ್ಯಯನ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಶ್ರೀ ಗಂಗಾಧರ ದೈವಜ್ಞ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

N. Kallappa
(ಕಲ್ಲಪ್ಪ ಎನ್)
ಸಂಶೋಧಕರು

ದಿನಾಂಕ : ೨೦ ಏಪ್ರಿಲ್ ೨೦೦೩

ಸ್ಥಳ : ವಿದ್ಯಾರಣ್ಯ

ಅರಿಕೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎಚ್ .ಜೆ.ಲಕ್ಕಪ್ಪಗೌಡ ಅವರಿಗೆ, ಮಾನ್ಯ ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಅವರಿಗೆ, ಅಧ್ಯಯನಾಂಗದ ನಿರ್ದೇಶಕರು ಹಾಗೂ ವಿಭಾಗದ ಮುಖ್ಯಸ್ಥರು ಆದ ಡಾ.ಕೆ.ಎಂ. ಮೈತ್ರಿ ಅವರಿಗೆ

ನನಗೆ ಅಡ್ನಲಟ್ಟಿ ಮ್ಯಾಸಬೇಡರ ಸಮುದಾಯದ ಬಗ್ಗೆ ಆಸಕ್ತಿ ಮೂಡಿಸಿ, ಮಾರ್ಗದರ್ಶನ ಮಾಡಿದ ಶ್ರೀ ಗಂಗಾಧರ ದೈವಜ್ಞ ಅವರಿಗೆ

ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಪ್ರೊ.ಹಿ.ಚಿ.ಬೋರಲಿಂಗಯ್ಯ, ಡಾ.ಕೇಶವನ್ ಪ್ರಸಾದ್, ಎ.ಎಸ್.ಪ್ರಭಾಕರ್, ಚೆಲುವರಾಜು ಹಾಗೂ ಸಿಬ್ಬಂದಿ ವರ್ಗದವರಿಗೂ

ಎಂ.ಫಿಲ್.ಅಧ್ಯಯನಕ್ಕೆ ಶಕ್ತಿಯಾಗಿ ಬೆನ್ನು ತಟ್ಟಿ ಕಳುಹಿಸಿದ ಪೂಜ್ಯ ನನ್ನ ತಂದೆ - ತಾಯಿಗಳಾದ ಶ್ರೀಮತಿ ಹನುಮಕ್ಕ, ಶ್ರೀ ಎನ್.ಕೊತ್ಲಪ್ಪ ಅವರಿಗೆ ಹಾಗೂ ಪ್ರೀತಿಯ ತಮ್ಮನಾದ ಅಜ್ಜಣ್ಣ, ಅಣ್ಣಂದಿರಾದ ಶ್ರೀ ಎಸ್ .ನಿಂಗಪ್ಪ, ಶ್ರೀ ಹನುಮಂತಪ್ಪ, ಶ್ರೀ ತಿಂದಪ್ಪ ಮತ್ತು ಸಹೋದರಿಯರಾದ ಶ್ರೀಮತಿ ಹುಲೆಮ್ಮ, ಶ್ರೀಮತಿ ಸೊಲ್ಲಮ್ಮ, ಶ್ರೀಮತಿ ವಿಜಯ, ಅತ್ತಿಗೆಯರುಗಳಾದ ಶ್ರೀಮತಿ ಶಿವಮ್ಮ, ಶ್ರೀಮತಿ ಕರಿಬಸಮ್ಮ, ಶ್ರೀಮತಿ ಸುಜಾತ ಹಾಗೂ ಮಾವಂದಿರಾದ ಶ್ರೀ ಎನ್.ನಾಗಭೂಷಣ, ಕೆ.ವೆಂಕಟೇಶ್, ಬಿ.ಬಾಲರಾಜು ಇವರಿಗೂ

ನನ್ನ ವಿದ್ಯಾಭ್ಯಾಸದಿಂದ ಎಂ.ಫಿಲ್. ಅಧ್ಯಯನದವರೆಗೆ ಸೂಕ್ತ ಸಲಹೆ ನೀಡಿದ ನನ್ನ ಸಂಬಂಧಿಕರುಗಳಾದ ಎನ್.ಕರಿಬಸಮ್ಮ, ವಿ.ಉಮಾ, ಕರಿಬಸಮ್ಮ, ನಾಗರತ್ನ, ನಿರ್ಮಲ, ರೇಣುಕ, ಶಿಲ್ಪ, ನಾಗಜ್ಜ, ಅಜ್ಜಯ್ಯ, ನಿರಕಲ್ಲಪ್ಪ, ರವಿ, ರಾಘು ಹಾಗೂ ಚಿಕ್ಕಪ್ಪ - ಚಿಕ್ಕಮ್ಮರಾದ ಶ್ರೀ ಎನ್.ನಾಗಪ್ಪ, ಶ್ರೀಮತಿ ಯಲ್ಲಮ್ಮ, ಶ್ರೀ ಹುಲಿಕುಂಟೆಪ್ಪ, ಶ್ರೀಮತಿ ಶರಣಮ್ಮ, ಶ್ರೀ ಸಣ್ಣ ಹುಲಿಕುಂಟೆಪ್ಪ, ಶ್ರೀಮತಿ ಗಂಗಮ್ಮ, ಶ್ರೀಮತಿ ಬಸಮ್ಮ, ಶ್ರೀ ನಿಂಗಪ್ಪ ಅವರಿಗೆ

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಅಧ್ಯಾಪಕರುಗಳಾದ ಪ್ರೊ.ಎಸ್.ಎಲ್.ಹಿರೇಮಠ, ಡಾ. ಮೇಟಿ ಶೇಷನ್, ಡಾ.ನುಷರತ್ ಫಾತೀಮ ಬೇಗಂ, ಸಿಂದ್ಯೆ ಜಗನ್ನಾಥ, ಶ್ರೀ ಡಿ.ವಿ.ನಯನೂರು, ಶ್ರೀ ಅಕ್ಬರ್ ಭಾಷಾ ಮತ್ತು ಗ್ರಂಥಪಾಲಕರಾದ ಪಂಚಾಕ್ಷರಯ್ಯ, ಶ್ರೀ ಕೆ.ನಾಗರಾಜ, ದೊಡ್ಡಮನಿ ಲೋಕರಾಜ ಎ.ಕೆ. ಅವರಿಗೆ

ಸರ್ವರೀತಿಯಲ್ಲಿ ಈ ಪ್ರಬಂಧದ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಸ್ನೇಹಿತರುಗಳಾದ ಎನ್.ನಾಗರಾಜ, ಜಿ.ನಾರಾಯಣ, ಕಾಶಿ, ಕೊಟ್ರೇಶ್, ವಿನಾಯಕ, ಎರ್ರಿಸ್ವಾಮಿ, ಸೋಮಶೇಖರ್, ಬೊಮ್ಮಯ್ಯ, ಈಶ, ನಾಗರಾಜ, ನಿಂಗಪ್ಪ, ಗೌರೀಶ್, ಕೆ.ನಾಗರಾಜ, ರಾಘು, ರಾಜ, ಆಯುಬ್ ಖಾನ್ ಮತ್ತು ಶ್ರೀಮತಿ ಬಿ.ಜ್ಯೋತಿ, ಎಸ್.ಶೋಭ, ಗೀತಕ್ಕ, ಎಂ.ಮಂಗಳಗೌರಿ, ಜ್ಯೋತಿಬಾಯಿ, ಅವರಿಗೆ

ಅಡ್ನಲಟ್ಟಿ ಮ್ಯಾಸಬೇಡರು : ಒಂದು ಸಮುದಾಯ ಅಧ್ಯಯನ ಎಂಬ ವಿಷಯ ಆಯ್ಕೆ ಮಾಡಿಕೊಳ್ಳಲು ಹಾಗೂ ಕ್ಷೇತ್ರಕಾರ್ಯದಲ್ಲಿ ಮಾರ್ಗದರ್ಶನ ಮಾಡಿದ ಸಾಹಿತಿ ಮತ್ತು ಸಂಶೋಧಕರಾದ ಪ್ರೊ.ಸಾಣೇಕೆರೆ ಸಣ್ಣೋಬಯ್ಯ ಅವರಿಗೆ, ಅದೇ ರೀತಿ ಅಡ್ನಲಟ್ಟಿ ಸಮುದಾಯವರೇ ಆದ ವಡೇರಹಳ್ಳಿ ಎಸ್.ಕೆಂಗೋಬಯ್ಯ ಬಡಗರಂಗಾಪುರ ಓಬಣ್ಣ, ರಾಘು, ಬೆಂಗಳೂರು ಜಿ.ಓಬಣ್ಣ, ನರಸಿಂಹ, ಕೃಷಿ ಇಲಾಖೆ ಎನ್.ಓಬಣ್ಣ ಹಾಗೂ ದೇವರ ಮರಿಕುಂಟೆ ಓಬಳನರಸಿಂಹಸ್ವಾಮಿ ಗುಡಿಕಟ್ಟೆ ಯಜಮಾನ, ಪೂಜಾರಿ, ದಾಸಯ್ಯ, ಅಣ್ಣ ತಮ್ಮಗಳು ಗ್ರಾಮಸ್ಥರಿಗೆ, ಸಹಾಯ - ಸಹಕಾರ ಕೊಟ್ಟು ಪ್ರೋತ್ಸಾಹಿಸಿದ ಸಮಸ್ತ ಅಡ್ನಲಟ್ಟಿ ಮ್ಯಾಸಬೇಡ ಸಮುದಾಯದವರಿಗೆ


ಈ ಪ್ರಬಂಧವನ್ನು ನನ್ನ ಒತ್ತಡಕ್ಕೆ ಮಣಿದು ಅಂದವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀ ಸೋಮನಾಥ ಕುಡುತಿನಿ ಅವರಿಗೆ

ನನ್ನ ತುಂಬು ಹೃದಯ ಕೃತಜ್ಞತೆಗಳು

ಎನ್. ಕಲ್ಲಪ್ಪ

ಪರಿವಿಡಿ





ಚಿತ್ರದುರ್ಗ ಜಿಲ್ಲೆ





೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಾನವ ಚರಿತ್ರೆ ತುಂಬಾ ದೀರ್ಘವಾದುದು. ಒಂದು ಕಾಲದ ಅನಾಗರಿಕ ಮಾನವ ಸಮುದಾಯ ಬೆಳೆದು ಆಧುನೀಕರಣಗೊಂಡಿದೆ. ನಾಗರೀಕತೆಯನ್ನು ಹೊಂದಿದೆ ಎಂದು ಹೇಳಬಹುದು. ಆದರೆ ಸೂಕ್ಷ್ಮವಾಗಿ ನೋಡಿದಾಗ ಈ ಮಾತು ಅರ್ಧ ಸತ್ಯವೆಂಬಂತೆ ಗೋಚರಿಸಲಾರಂಭಿಸುತ್ತದೆ. ಮಾನವರೆಲ್ಲಾ ಈ ದೇಶದಲ್ಲಿ ಗೆರೆ ಕೊರೆದಂತೆ ಬದಲಾಗಿಲ್ಲ. ಜನ ಸಮುದಾಯಗಳು ಹರಿಯುವ ನೀರಿನಂತೆ ಪ್ರಧಾನ ಧಾರೆ - ಕಿರುಧಾರೆಗಳಾಗಿವೆ.

''ಒಂದೆಡೆ ಬೆಳೆದು ನಿಂತ ಮಾನವರ ಚರಿತ್ರೆಯನ್ನು ನಾಗರೀಕ ಚರಿತ್ರೆಯೆಂದೂ, ಮತ್ತೊಂದೆಡೆ ಮೂಲ ಸ್ಥಿತಿಯನ್ನು ಉಳಿಸಿಕೊಂಡು ಮಾನವ ಚರಿತ್ರೆಯನ್ನು ಮೂಲನಿವಾಸಿಗಳ ಚರಿತ್ರೆ ಅಥವಾ ಬುಡಕಟ್ಟು ಸಮುದಾಯಗಳ ಚರಿತ್ರೆ ಎಂದು ಕರೆಯಬಹುದು. ಬುಡಕಟ್ಟು ಸಮುದಾಯಗಳು ಇಂದಿನ ಅತ್ಯಾಧುನಿಕ ನಾಗರೀಕ ಪರಿಸರದಲ್ಲೂ ತಮ್ಮ ಮೂಲ ಸಂಸ್ಕೃತಿಯ ಅಂಶಗಳನ್ನು ಇನ್ನೂ ಉಳಿಸಿಕೊಂಡಿವೆ. ಕೆಲವು ಅಪ್ರತ್ಯಕ್ಷವಾಗಿ ಅನುಸರಿಸುತ್ತಿವೆ. ಹೀಗಾಗಿ ಚರಿತ್ರೆ ಎಂದೊಡನೆ ಅಭಿವೃದ್ಧಿಯಾಗದ ಗುಂಪನ್ನು ಅಲಕ್ಷಿಸುವುದಲ್ಲ, ಅಲಕ್ಷಿತ ಪರಂಪರೆಗಳನ್ನು ದಾಖಲಿಸುವುದು ಮತ್ತು ಅಧ್ಯಯನ ಮಾಡುವುದು ಆಗಿದೆ. ಬುಡಕಟ್ಟು ಸಮುದಾಯಗಳ ಮೂಲ ಸಂಸ್ಕೃತಿಯನ್ನು ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿದ್ದಾರೆ. ನಾಗರೀಕ ಸಮುದಾಯಗಳ ತೀವ್ರ ಪ್ರಭಾವದಿಂದ ಹೊಸ ತಲೆಮಾರಿನಲ್ಲಿ ಅವು ನಿಧಾನವಾಗಿ ಮರೆಯಾಗುವ ಮೊದಲು ಅವುಗಳನ್ನು

ದಾಖಲಿಸುವ, ವಿಶ್ಲೇಷಿಸುವ ಕಾರ್ಯ ನಡೆಯಬೇಕು ಅಂದಾಗ ಮಾತ್ರ ಮಾನವನ ಸಮುದಾಯಗಳ ಅಧ್ಯಯನ ಅರ್ಥಪೂರ್ಣವಾದಿತು.''[೮]

ಬುಡಕಟ್ಟು ಸಮುದಾಯಗಳಲ್ಲಿ ನಿಸರ್ಗದೊಂದಿಗೆ ಬೆಳೆಯುತ್ತಾ ತಮ್ಮದೇ ಆದ ಆರಾಧನೆ, ಆಚರಣೆ ಹಾಗೂ ನಿಯಮಗಳನ್ನು ಹೊಂದಿದೆ. ಕರ್ನಾಟಕದಲ್ಲಿ ೪೯ ಪರಿಶಿಷ್ಟ ಬುಡಕಟ್ಟುಗಳಿವೆ ಎಂದು ಸರಕಾರ ದಾಖಲಿಸಿದೆ. ಇನ್ನೂ ಅನೇಕ ಬುಡಕಟ್ಟುಗಳು ಇವೆ ಎಂಬುದನ್ನು ಸರ್ಕಾರ ಗಮನಿಸಬೇಕಾಗಿದೆ. ಇಂತಹ ಬುಡಕಟ್ಟುಗಳಲ್ಲಿ ಬೇಡ ಸಮುದಾಯದಲ್ಲಿ ಉಪಪಂಗಡವಾದ ಅಡ್ಲಟ್ಟಿ ಮ್ಯಾಸಬೇಡರು ಕರ್ನಾಟಕದ ಬಹುಮುಖ್ಯವಾದ ಪಶುಪಾಲಕ ಬುಡಕಟ್ಟುಗಳಲ್ಲೊಂದು. ಪಶುಪಾಲಕ ಸಂಸ್ಕೃತಿಯ ದಟ್ಟ ಆಚರಣೆಗಳಿಂದ ಕೂಡಿದ ಇಂತಹ ಬುಡಕಟ್ಟು ಬೇರೊಂದಿರಲಾರದು. ಇದೇ ಪಶುಪಾಲಕ ಸಂಸ್ಕೃತಿಗೆ ಸೇರಿದ ಮೂಲದಲ್ಲಿ ಮ್ಯಾಸಬೇಡರ ಸಹೋದರರೇ ಆಗಿದ್ದ ಕಾಡುಗೊಲ್ಲರಲ್ಲಿ ಇರುವಂತಹ ಸಾಹಿತ್ಯ ಸಮೃದ್ಧಿ ಬೆರಗುಗೊಳಿಸುವಂತದ್ದು. ಇಂಥಹ ಬುಡಕಟ್ಟಿನ ಅಧ್ಯಯನ ಹಾಗೂ ಸಂಶೋಧನೆ ನಡೆಯಬೇಕಾದುದು ಅಗತ್ಯವಾಗಿದೆ. ಪ್ರಸ್ತುತ 'ಚಳ್ಳಕೆರೆ ತಾಲೂಕು'ನಲ್ಲಿ ನೆಲೆಸಿರುವಂತಹ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದ ಅಧ್ಯಯನ ನನ್ನ ವಿಷಯವಾಗಿದೆ. ಈ ಸಮುದಾಯದ ಸ್ಥಿತಿಗತಿ, ಇವರ ಆಚರಣೆ, ಚರಿತ್ರೆ, ಸಾಮಾಜಿಕ ಸ್ಥಿತಿಗತಿ ಮತ್ತು ಸಾಹಿತ್ಯಿಕವಾಗಿ ಇವರ ಕೊಡುಗೆ ಮತ್ತು ವಿಶೇಷತೆಗಳನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಅಧ್ಯಯನ ಉದ್ದೇಶ

ಎಲ್ಲಾ ಅಧ್ಯಯನಗಳಿಗಿಂತ ಇಂದು ಸಂಸ್ಕೃತಿ ಅಧ್ಯಯನಗಳು ಹೆಚ್ಚು ಮಹತ್ವ ಪಡೆಯುತ್ತಿವೆ. ನಮ್ಮ ಬದುಕನ್ನು ಆಮದು, ಮಾನದಂಡೆಗಳಿಂದ ಗ್ರಹಿಸುವುದಕ್ಕಿಂತ ನಮ್ಮ ಒಳಗಿನ ಆಯಾಮಗಳ ಮೂಲಕವೇ ಗ್ರಹಿಸುವುದು ಹೆಚ್ಚು ಸೂಕ್ತ. ಆದ್ದರಿಂದ ಇಂದು ದೇಶವನ್ನು ಮತ್ತು ದೇಶಿಯ ಬದುಕನ್ನು ಪಾಶ್ಚತ್ಯ ಮಾನದಂಡೆಗಳಿಂದ ಗ್ರಹಿಸುವುದಕ್ಕಿಂತ ದೇಶಿಯ ನೆಲದಲ್ಲಿಯೇ ಗ್ರಹಿಸುವುದು ಹೆಚ್ಚು ಸೂಕ್ತ. ನಮ್ಮ ದೇಶ, ನಮ್ಮ ಸಂಸ್ಕೃತಿ ಎಂಬ ಮಾತುಗಳು ಮೇಲ್ನೋಟಕ್ಕೆ ಒಂದೇ ಅನ್ನಿಸಿದರೂ ಸೂಕ್ಷ್ಮವಾಗಿ ನೋಡಿದಾಗ ಅವು ಒಂದೇ ಅಲ್ಲ. ಹಗ್ಗದ ರಚನೆಯಂತೆ ಹಲವು ಎಳೆಗಳಿಂದ ಅವು ಒಂದೇ ಅನ್ನಿಸುತ್ತದೆ. ಹಾಗೆ ನೋಡಿದರೆ ಪ್ರಧಾನ ಧಾರೆಯ ಅಧ್ಯಯನವೇ ಬಹುಮುಖ್ಯವಾಗಿದ್ದ ಈ ನೆಲದಲ್ಲಿ ಉಪಧಾರೆಗಳ ಕುರಿತು ಅಧ್ಯಯನಗಳು ನಡೆದಿರಲಿಲ್ಲ. ಅಲಕ್ಷಿತ ಗುಂಪುಗಳು, ಬುಡಕಟ್ಟುಗಳು ಅಕ್ಷರ ಲೋಕದಿಂದ ಬಹುದೂರ ಉಳಿದಿದ್ದ ಕಾಲ ಒಂದಿತ್ತು. ಆದರೆ ಈಗ ಈ ಸ್ಥಿತಿ ಬದಲಾಗಿ ಅಲ್ಲಿನ ಲೋಕಗಳು ಶ್ರೇಷ್ಠ ಅನ್ನಿಸಿಕೊಂಡ ಸಮಾಜಗಳಿಗೆ ಸವಾಲಾಗತೊಡಗಿದೆ. ಉಪಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರತಿಸಂಸ್ಕೃತಿ ಎಂದೆಲ್ಲಾ ಕರೆಸಿಕೊಂಡ ಈ ಬದುಕುಗಳು ಕೂಡ ಹತ್ತು ಹಲವು ದೃಷ್ಟಿಗಳಿಂದ ಮಹತ್ವ ಪಡೆದಿವೆ.

"ಮಾನವನ ಹುಟ್ಟಿನೊಂದಿಗೆ ಜನಾಂಗದ ಚರಿತ್ರೆ ಆರಂಭವಾಗುತ್ತದೆ. ಆದಿಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಪ್ರದೇಶದಲ್ಲಿ ನೆಲೆನಿಂತು ನಾಗರೀಕ ಹಂತವನ್ನು ತಲುಪಿದಾಗ ಇವನಲ್ಲಿ ದೈಹಿಕ

ಬದಲಾವಣೆ ಜೊತೆಗೆ ಆಂತರಿಕ ಬದಲಾವಣೆ (ಸಂಸ್ಕೃತಿಗಳು) ಕಂಡುಬರುತ್ತವೆ. ಇಂಥ ವಿಕಾಸಗಳನ್ನು ಆದಿಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಮತ್ತು ನಗರ ಸಂಸ್ಕೃತಿ ಎಂಬ ಮೂರು ಹಂತಗಳಲ್ಲಿ ಗುರಿತಿಸಲಾಗಿದೆ.'' (ತಿ.ನಂ.ಶಂಕರನಾಯರಾಣ, ೧೯೮೨, ಪು. ೧)

ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ದೂರವಾಗಿ ಅಡವಿ ಅಥವಾ ಅದರ ಅಂಚಿನಲ್ಲಿ ವಾಸಮಾಡುತ್ತಿರುವ ತನ್ನದೇ ಆದ ರೂಢಿ - ಸಂಪ್ರದಾಯ, ಆಚಾರ - ವಿಚಾರಗಳನ್ನು, ನಡವಳಿಕೆಗಳನ್ನು ಮೈಗೂಡಿಸಿಕೊಂಡಿರುವ ಬೇಡರ ಸಮುದಾಯದ ಉಪಪಂಗಡವಾದ ಅಡ್ಡಟ್ಟಿ ಮ್ಯಾಸಬೇಡರ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಸರ್ಕಾರವು ಇವರನ್ನು ಪರಿಶಿಷ್ಟ ವರ್ಗವೆಂದು ಗುರಿತಿಸಿದೆ. ''ಒಂದು ನಿರ್ದಿಷ್ಟ ಭೂಪ್ರದೇಶವನ್ನು ಹೊಂದಿದ್ದು ತಮ್ಮದೇ ಆದ ಭಾಷೆಯನ್ನಾಡುವ ಒಂದೇ ಸಮಾಜ, ಸಂಸ್ಕೃತಿ ಹೊಂದಿರುವ ಒಂದೇ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಗುಂಪಿಗೆ ಬುಡಕಟ್ಟು ಎಂದು ಕರೆಯಬಹುದು. ರಕ್ತ ಸಂಬಂಧ ಬಹುಮುಖ್ಯವಾದ ಅಂಶವಾಗಿದೆ.''[೨] ಸರ್ಕಾರವು ಇವರನ್ನು ಬುಡಕಟ್ಟು ವರ್ಗಕ್ಕೆ ಸೇರಿಸಿದ್ದರೂ ಇವರಲ್ಲಿ ಇಂದು ಮಾರ್ಪಾಡುಗಳು ಕಂಡುಬರುತ್ತಿವೆ. ಈ ಪರಿವರ್ತನೆಯ ಕಾಲದಲ್ಲಿ ಈ ಸಮುದಾಯ ತಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲು ಯಾವರೀತಿಯಲ್ಲಿ ಪ್ರಯತ್ನಿಸುತ್ತಿವೆ ಎನ್ನುವುದನ್ನು ವಿಶ್ಲೇಷಿಸುವುದು ಅವಶ್ಯಕವಾಗಿದೆ. ತಮ್ಮ ಸಂಪ್ರದಾಯಗಳನ್ನು ಪೂರ್ತಿಯಾಗಿ ಬಿಟ್ಟುಕೊಡದೆ ಬೇರೆ ಸಮುದಾಯಗಳ ಸಂಸ್ಕೃತಿ ನಡವಳಿಕೆಗಳನ್ನು ಸ್ವೀಕರಿಸದೆ ತಮ್ಮದೇ ಆದ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಈ ಪ್ರಬಂಧದಲ್ಲಿ ಆಯ್ಕೆ ಮಡಿಕೊಂಡಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಅಡ್ಡಟ್ಟಿ ಮ್ಯಾಸಬೇಡರು ಆಧುನಿಕತೆಗೂ ಸ್ಪಂದಿಸುತ್ತಾ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಇಂದು ಅನೇಕ ಬುಡಕಟ್ಟುಗಳ ಬಗೆಗೆ ಪ್ರತ್ಯೇಕ ಅಧ್ಯಯನಗಳು ನಡೆದಿವೆ. ಬೇಡರ ಸಮುದಾಯಕ್ಕೆ ಸಂಬಂಧಿಸಿದಂತೆ ಆರ್.ರಾಜಣ್ಣರ 'ನಾಯಕ ಜನಾಂಗದ ಇತಿಹಾಸ (೧೯೮೨)ವು ಬೇಡರನ್ನು ಕುರಿತು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಮತ್ತು ಬೇಡರ ಪ್ರಮುಖ ಉಪಪಂಗಡವಾದ ಮ್ಯಾಸಬೇಡರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನಗಳು ನಡೆದಿವೆ. ಇವುಗಳಲ್ಲಿ ಎಂ.ಜಿ.ಈಶ್ವರಪ್ಪರವರ (ಮ್ಯಾಸಬೇಡರು, ೧೯೮೨), ಕೃಷ್ಣಮೂರ್ತಿ ಹನೂರು ಅವರ 'ಮ್ಯಾಸಬೇಡರ ಸಂಸ್ಕೃತಿ' (೧೯೮೬) ಮತ್ತು ಕೆ.ರುದ್ರಪ್ಪರವರು 'ಮ್ಯಾಸನಾಯಕರು: ಒಂದು ಜನಾಂಗೀಯ ಅಧ್ಯಯನ' (೧೯೯೫), ಎಂ.ಪಿ.ವೀಣಾ 'ಮನೆ, ಸಮಾಜ ಮತ್ತು ಸಂಸ್ಕೃತಿ' (೨೦೦೦) ಎಂಬ ಪುಸ್ತಕಗಳು ಪ್ರಮುಖವಾಗಿವೆ. ಈ ಅಧ್ಯಯನಗಳಲ್ಲಿ ಮ್ಯಾಸಬೇಡರ ಬಗ್ಗೆ ಸಮಗ್ರ ಅಧ್ಯಯನ ಕೈಗೊಂಡಿದ್ದಾರೆ. ಆದರೆ ಒಂದೇ ಬುಡಕಟ್ಟಿನ ಉಪಪಂಗಡಗಳನ್ನು ಕುರಿತು ಪ್ರತ್ಯೇಕವಾದ ಅಧ್ಯಯನ ಕೈಗೊಂಡಿಲ್ಲ.

ಈ ಅಧ್ಯಯನ ಹಿಂದೆ ನಡೆದಿರುವ ಅಧ್ಯಯನಕ್ಕಿಂತ ಭಿನ್ನವಾಗಿದೆ. ಏಕೆಂದರೆ ಇಂದಿನವರೆಗೂ ಬುಡಕಟ್ಟುಗಳ ಸಮಗ್ರ ಅಧ್ಯಯನಕ್ಕೆ ಪ್ರಾಮುಖ್ಯತೆ ಇದ್ದರೆ ಇಲ್ಲಿ ಬೇಡರ ಸಮುದಾಯದ ಉಪಪಂಗಡವಾದ ಅಡ್ಲಟ್ಟಿ ಮ್ಯಾಸಬೇಡರ ಬಗ್ಗೆ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ. ಈ ಅಡ್ಲಟ್ಟಿ ಮ್ಯಾಸಬೇಡರು ಬುಡಕಟ್ಟು ಸಮುದಾಯ ಆಗಿದ್ದರೂ ಇವರು ತಮ್ಮದೇ ಆದ ಪ್ರತ್ಯೇಕ ಮ್ಯಾಸಬೇಡರ ಸಮುದಾಯ ಏಕೆ ಮಾಡಿಕೊಂಡಿದ್ದಾರೆ? ಕಾಡುಗೊಲ್ಲ ಸಮುದಾಯಗಳಿಗೂ ಮತ್ತು ಅಡ್ಲಟ್ಟಿ ಮ್ಯಾಸಬೇಡರಿಗೂ ಯಾವ ರೀತಿ ಸಂಬಂಧಗಳಿವೆ? ಅಡ್ಲಟ್ಟಿ ಮ್ಯಾಸಬೇಡರು ಎಂದು ಏಕೆ ಕರೆಯುತ್ತಾರೆ? ಇವರ ಪರಂಪರೆ, ಅವರ ಬದುಕು, ನಾಗರಿಕ ಲೋಕದಲ್ಲಿ ಅವರಿಗೆ ಸಿಗುವಂತಹ ಸ್ಥಾನ ಮತ್ತು ಅವರ ರೂಢಿ - ಸಂಪ್ರದಾಯಗಳು, ಜನಸಂಖ್ಯೆ, ವೃತ್ತಿ, ಸ್ಥಿತ್ಯಾಂತರಗೊಳ್ಳುತ್ತಿರುವ ಅವರ ಸ್ಥಿತಿಗತಿಗಳು ಕುರಿತು ವಿವರಗಳನ್ನು ಒಂದೆಡೆ ಕಲೆಹಾಕಿ ಇಲ್ಲಿ ವ್ಯಾಖ್ಯಾನ ಒಡ್ಡುವುದು ನನ್ನ ಉದ್ದೇಶವಾಗಿದೆ.

ಈ ಕೆಳಗಿನಂತೆ ಪ್ರಸ್ತುತ ಅಧ್ಯಯನ ವಿಂಗಡಿಸಲಾಗಿದೆ.

- ಅಡ್ಲಟ್ಟಿ ಮ್ಯಾಸಬೇಡರು ಎಂದು ಏಕೆ ಕರೆಯುತ್ತಾರೆ
- ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಕಾಡುಗೊಲ್ಲರಿಗೂ ಇರುವ ಸಂಬಂಧ
- ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಮ್ಯಾಸಬೇಡರಿಗೂ ಇರುವ ಸಂಬಂಧ
- ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು
- ಇವರ ನೆಲೆಗಳು ಮತ್ತು ಜನಸಂಖ್ಯೆ
- ಸಾಹಿತ್ಯ, ಜನಪದ ಕಲೆ
- ಪ್ರಸ್ತುತ ಕಾಲಘಟ್ಟದಲ್ಲಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅಡ್ಲಟ್ಟಿ ಮ್ಯಾಸಬೇಡ ಬುಡಕಟ್ಟು ಸಮುದಾಯದ ಸಮಗ್ರ ಸಾಮಾಜಿಕ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೇವರಮರಿಕುಂಟೆ, ನಾಗ್ತಿಹಳ್ಳಿ, ಕಟ್ಟೆ, ಅಡ್ಲಟ್ಟಿ, ಸಾಣೇಕೆರೆ, ವಡೇರಹಳ್ಳಿ ಮತ್ತು ಹಿರಿಯೂರು ತಾಲೂಕಿನ ಹುಚ್ಚವ್ವನಹಳ್ಳಿ ಎಂಬ ಈ ಎರಡು ತಾಲ್ಲೂಕಿನ ಪ್ರದೇಶಗಳಲ್ಲಿ ನೆಲೆಸಿರುವ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದ ಸಮೀಕ್ಷೆ ಮಾಡುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ.

ಅಧ್ಯಯನದ ವಿಧಾನಗಳು

ಈ ಅಧ್ಯಯನದಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯದ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಕೆಲವು ಇತರೆ ಅಧ್ಯಯನ ವಿಧಾನಗಳನ್ನು ಅಗತ್ಯವಿದ್ದಲ್ಲಿ ಅನುಸರಿಸಲಾಗುವುದು ಮತ್ತು ಈ ಕೆಳಗಿನ ವಿಧಾನಗಳನ್ನು ಅನಸರಿಸಲಾಗಿದೆ.

೧. ಈ ಹಿಂದೆ ನಡೆದ ಅಧ್ಯಯನ ಸಮೀಕ್ಷೆ

ಚಿತ್ರದುರ್ಗ ವ್ಯಾಪ್ತಿಯಲ್ಲಿ ಬರುವ ಬೇಡ ಸಮುದಾಯದ ಬಗ್ಗೆ ಈ ಹಿಂದೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ.

೨. ಪ್ರಶ್ನಾವಳಿ ವಿಧಾನ

ಚಿತ್ರದುರ್ಗ ಜಿಲ್ಲೆಯ ಎರಡು ತಾಲೂಕುಗಳಲ್ಲಿ ಈ ಸಮುದಾಯದ ಜನರು ನೆಲೆಸಿರುವ ಹಳ್ಳಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡು ೩೫ ಮನೆಗಳಿಗೆ ಭೇಟಿನೀಡಿ ಪ್ರಶ್ನಾವಳಿಗಳನ್ನು ತುಂಬಿಕೊಂಡು ಅದರಿಂದ ಬಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೩. ಸಂದರ್ಶನ ವಿಧಾನ

ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿನ ಜನರ ಬಳಿ ಹೋಗಿ ಅವರನ್ನು ಸಂದರ್ಶನ ಮಾಡಿ ಅವರು ನೀಡಿದ ಮಾಹಿತಿಯನ್ನು ಧ್ವನಿಮುದ್ರಣ ಮಾಡಿಕೊಳ್ಳಲಾಗಿದೆ.

೪. ಅವಲೋಕನ ವಿಧಾನ

ನಮ್ಮ ವಿಷಯಕ್ಕನುಗುಣವಾಗಿ ಅಡ್ಡಟ್ಟಿ ಮ್ಯಾಸಬೇಡರ ಸಮುದಾಯದ ವಿವಿಧ ಆಚರಣೆ, ಸಂಪ್ರದಾಯಗಳನ್ನು ಅವಲೋಕಿಸಿ ಅಗತ್ಯವಿದ್ದಲ್ಲಿ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ.

೫. ಸಂಖ್ಯಾಶಾಸ್ತ್ರೀಯ ವಿಧಾನ

ಅಡ್ಡಟ್ಟಿ ಮ್ಯಾಸಬೇಡ ಸಮುದಾಯಕ್ಕೆ ಸಂಬಂಧಿಸಿದಂತೆ ಇತರೆ ನೆಲೆಗಳ ಕ್ಷೇತ್ರವಾರು ವಿಚಾರಣೆ, ಜನಸಂಖ್ಯೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತಹ ವಿವರಗಳನ್ನು ಒದಗಿಸಿಕೊಳ್ಳಲಾಗಿದೆ.

ಐತಿಹಾಸಿಕ ವಿಧಾನ

ಈ ಬುಡಕಟ್ಟು ಸಮುದಾಯಕ್ಕೆ ಅಗತ್ಯವಾದ ಆಧಾರ ಗ್ರಂಥಗಳು, ಮಾಸಪತ್ರಿಕೆಗಳು, ವರದಿಗಳು, ಪ್ರಕಟಣೆಗಳು, ಹಸ್ತಪ್ರತಿಗಳ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

ಈ ಮೇಲಿನ ಎಲ್ಲಾ ವಿಧಾನಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ ಹಾಗೂ ಅಗತ್ಯವಿರುವ ಛಾಯಾಚಿತ್ರಗಳನ್ನು ಸಂಗ್ರಹಿಸಿ ಸಂಪ್ರಬಂಧಕ್ಕೆ ಅಳವಡಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ದೊಡ್ಡಮನಿ ಲೋಕರಾಜ ಎ.ಕೆ. ಬಳ್ಳಾರಿ ಜಿಲ್ಲೆಯ ದುರುಗಮುರಿಗಿಯರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಪು. ೧

೨. ಎಂ.ಪಿ.ವೀಣಾ, ಮನೆ, ಸಮಾಜ ಮತ್ತು ಸಂಸ್ಕೃತಿ, ಪು. ೨

೨

ಅಡ್ಲಟ್ಟಿ ಮ್ಯಾಸಬೇಡರ ಪ್ರಾಚೀನತೆ ಮತ್ತು ಭೌಗೋಳಿಕ ನೆಲೆಗಳು

೨

ಅಡ್ಡಲಟ್ಟಿ ಮ್ಯಾಸಬೇಡರ ಪ್ರಾಚೀನತೆ ಮತ್ತು ಭೌಗೋಳಿಕ ನೆಲೆಗಳು

"ಕಾಡಿನಲ್ಲಿದ್ದಾಗ ಅಡ್ಡಲಟ್ಟಿ ಮ್ಯಾಸಬೇಡರು ತಮ್ಮ ವಾಸಕ್ಕಾಗಿ ಗಿಡಮರಗಳ ಸೊಪ್ಪು, ಸೆದೆಗಳಿಂದ ಹುಲ್ಲನ್ನು ತಂದು ಗುಡಿಸಲುಗಳನ್ನು ಹಾಕಿಕೊಂಡು, ಕಾಡಿನಲ್ಲಿ ದೊರೆಯುವ ಹಣ್ಣು-ಹಂಪಲ, ಗೆಡ್ಡೆಗಣಸು ಗಳನ್ನು ತಿನ್ನುತ್ತಾ, ಪ್ರಾಣಿಗಳ ಬೇಟೆಯಾಡುತ್ತಿದ್ದರು. ಜೊತೆಗೆ ಮುಖ್ಯ ಕಸುಬಾಗಿ ದನಕರು ಮೇಯಿಸುತ್ತ, ಅವುಗಳಿಗೆ ಮೇವು-ನೀರು ಎಲ್ಲೆಲ್ಲಿ ದೊರೆಯುತ್ತಿತ್ತೋ ಅಲ್ಲಲ್ಲಿಗೆ ಹೋಗುತ್ತಾ, ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತಾ, ಅಲೆಮಾರಿಗಳಾಗಿ ಜೀವನ ಮಾಡುತ್ತಿದ್ದರು."[೧] (ವಾಲ್ಮೀಕಿ ವಾಣಿ, ೧೯೯೯)

"ಪಶುಪಾಲನೆ ವೃತ್ತಿಯನ್ನು ಅವಲಂಬಿಸಿದ ಮ್ಯಾಸಬೇಡ ಬುಡಕಟ್ಟು ಸಮುದಾಯದಲ್ಲಿಯ ಒಂದು ಗುಂಪು ಪ್ರತ್ಯೇಕವಾಗಿ ತಮ್ಮ ಅಸ್ತಿತ್ವವನ್ನು ಪಡೆದುಕೊಳ್ಳಲು ತಾವು 'ಅಡ್ಡಲಟ್ಟಿ ಮ್ಯಾಸಬೇಡರು' ಎಂದು ಗುರುತಿಸಿಕೊಂಡರು. ಈ ಬುಡಕಟ್ಟು ಸಮುದಾಯವು ವಿಂಧ್ಯಾಪರ್ವತದ 'ಗಂಡಕಿ ನದಿ' ಬಯಲು ಪ್ರದೇಶದಿಂದ ಮಧ್ಯಪ್ರದೇಶದ ಗೊಂಡಾರಣ್ಯದಲ್ಲಿ ನೆಲೆಸಿ, ನಂತರ ಆಂಧ್ರಪ್ರದೇಶದ ಶ್ರೀಶೈಲ, ಅಹೋಬಲದಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ನಂತರ ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ನಿಡಗಲ್ಲು ಸಂಸ್ಥಾನದಲ್ಲಿ ನೆಲೆಸಿದರು. ಅಲ್ಲಿ ಭೌಗೋಳಿಕ ದುರಂತಗಳು ಸಂಭವಿಸಿದಾಗ ಈ ಬುಡಕಟ್ಟು ಸಮುದಾಯದವು

ಹಿರಿಯೂರು ತಾಲೂಕಿನ ಖಂಡೇನಹಳ್ಳಿಗೆ ಬಂದು ಕೆಲವು ಕಾಲ ನೆಲೆಸಿದರು. ಈ ಪ್ರದೇಶದಲ್ಲಿ ಕರಿಯಮ್ಮ ಎಂಬ ಹೆಣ್ಣುದೇವತೆ ಇದೆ. ಈಗಲೂ ಸಹ ಇವರು ಹಿಂದೆ ನೆಲೆಸಿರುವ ಸ್ಥಳಗಳ ಮೂಲ ದಾಖಲೆಗಳು ಸಿಗುತ್ತವೆ.'' ನಂತರ ಇವರು ಚಳ್ಳಕೆರೆ ತಾಲೂಕು ದೇವರ ಮರಿಕುಂಟೆ ಹತ್ತಿರ ನಾಗ್ತಿಹಳ್ಳಿಗೆ ಬಂದು ನೆಲೆಸಿದರು. ಇಲ್ಲಿ ಇವರಿಗೆ ಒಂಟಿಯಾಗಿ ನೆಲೆಸಲು ಸಾಧ್ಯವಾಗದೆ, ಅಲ್ಲಿಂದ ಗೋಪಹಳ್ಳಿ ಮಾರ್ಗವಾಗಿ ಕಮತ್ ಮರಿಕುಂಟೆ ಮುಮ್ಮಡಿಸಾಗರದ ಬಳಿ ಹಟ್ಟಿ ಕಟ್ಟಿಕೊಂಡು ವಾಸಮಾಡಲಿಕ್ಕೆ ಪ್ರಾರಂಭಿಸಿದರು. ಈ ಪ್ರದೇಶವನ್ನು ಅಡ್ಲಟ್ಟಿ ಎಂದು ಕರೆಯತೊಡಗಿದರು. ಕಪ್ಪು ಮಣ್ಣಿನ ಫಲವತ್ತಾದ ಭೂಮಿ ಮತ್ತು ಸುತ್ತಲೂ ಅರಣ್ಯ ಹಾಗೂ ನದಿಯಿಂದಲೂ ಕೂಡಿದ ಪ್ರದೇಶವಾಗಿತ್ತು. ಇವರು ಇಂತಹ ಪ್ರದೇಶದಲ್ಲಿ ನೆಲೆಸಲಿಕ್ಕೆ ಪ್ರಾರಂಭಿಸಿದರು. ಇವರ ಜೊತೆಯಲ್ಲಿ ನಾಲ್ಕುನೂರರಿಂದ ಐದುನೂರರವರೆಗೆ ದನ ಕರುಗಳು, ಕುರಿ ಮೇಕೆಗಳಿದ್ದವು. ಅವುಗಳ ಪಾಲನೆ ಪೋಷಣೆಯಲ್ಲಿ ತೊಡಗಿಸಿಕೊಂಡರು. ದನಕರು, ಕುರಿಗಳನ್ನು ಹಗ್ಗದಿಂದ ಕಟ್ಟುವ ಬದಲಿಗೆ ಕಳ್ಳೆ ಪೌಳಿಯನ್ನು ಸುತ್ತಲು ಹಾಕಿ ಅದರಲ್ಲಿ ಕೂಡುತ್ತಿದ್ದರು. ಅಂದು ಅಡ್ಲರ ಮನೆತನ ಬಹಳ ಪ್ರಭುದ್ಧಮಾನಕ್ಕೆ ಬೆಳೆದಿತ್ತು. ಈಗಿನಂತೆ ಹಿಂದೆ ಹಣದ ಚಲಾವಣೆ ಇದ್ದಿಲ್ಲ. ಬೆಳ್ಳಿರೂಪಾಯಿ ನಾಣ್ಯಗಳು ಚಲಾವಣೆಯಲ್ಲಿದ್ದವು.

ಈ ಅಡ್ಲಟ್ಟಿ ಮ್ಯಾಸಬೇಡರು ನೆಲೆಸಿದ ಪ್ರದೇಶದ ಪಕ್ಕದಲ್ಲಿ ಆಂಧ್ರಪದೇಶದ ರಡ್ಡಿ ಮನೆತನ ನೆಲೆಸಿತ್ತು. ಈ ರೆಡ್ಡಿ ಮನೆತನವು ಅಡ್ಲಟ್ಟಿಯ ಫಲವತ್ತಾದ ಪ್ರದೇಶದಿಂದ ಇವರನ್ನು ತೊಲಗಿಸಲು ಈ ಸಮುದಾಯಕ್ಕೆ ಅನೇಕ ಕಿರುಕುಳ ನೀಡತೊಡಗಿದರು. ಹಟ್ಟಿಗಳ ಮೇಲೆ ಕಲ್ಲುಗಳನ್ನು ಎಸೆಯುವುದು, ಬೆಂಕಿಯನ್ನು ಹಚ್ಚಿ ಕೊಳ್ಳಿದೆವ್ವ ಎಂದು ಹೆದರಿಸುವುದು. ಹೀಗೆ ನಾಲ್ಕು-ಐದು ತಿಂಗಳ ಕಾಲ ಅಡ್ಲಟ್ಲಿ ಬುಡಕಟ್ಟು ಸಮುದಾಯಕ್ಕೆ ಕಾಡಿಸಿದರು. ನಂತರ ಈ ಬುಡಕಟ್ಟು ಸಮುದಾಯವು ಕಿರುಕುಳ ತಾಳಲಾರದೆ ಅಡ್ಲಟ್ಟಿ ಪಕ್ಕದಲ್ಲಿಯೇ ಇದ್ದ ಕಮ್ಮತ್ ಮರಿಕುಂಟೆಯಲ್ಲಿ ವಾಸಿಸುತ್ತಿದ್ದ ಚಿಕ್ಕೀರಜ್ಜ ಎಂಬ ಲಿಂಗಾಯಿತ ವೃದ್ಧ ವ್ಯಾಪಾರ ಮಾಡುತ್ತಿದ್ದನು. ಅವರು ಈ ಸಮುದಾಯಕ್ಕೆ ಬಹಳ ಹತ್ತಿರವಾದ ವ್ಯಕ್ತಿಯಾಗಿದ್ದ. ಅವರು ಅಡ್ಲಟ್ಟಿ ಮ್ಯಾಸಬೇಡರಿಗೆ ಸಲಹೆಗಳನ್ನು ನೀಡಿ, ಸಾಣೀಕೆರೆಯಲ್ಲಿ ನಿಮ್ಮ ಜನಾಂಗದ ಸಂಬಂಧಿಕರೇ ಆದ ಬೇಡನಾಯಕರಿದ್ದಾರೆ ಅಲ್ಲಿಗೆ ಹೋಗಿ ಎಂದು ಹೇಳಿದರು. ನಂತರ ಈ ಸಮುದಾಯದವರು ಕ್ರಿ.ಶ. ೧೮೦೦ರಲ್ಲಿ ಈಗಿನ ಸಾಣೀಕೆರೆಯ ಹತ್ತಿರ ಗುಂಜಿಗುಂಟಮ್ಮನ ಹೊರಗಲು ಗುಡಿ ಕುಗಟೆ ಮರದ ಹತ್ತಿರ ಹಟ್ಟಿಯನ್ನು ಕಟ್ಟಿಕೊಂಡು ನೆಲೆಸಿದರು. ಇವರ ಹಟ್ಟಿಯ ಪಕ್ಕದಲ್ಲಿ ಖಂಡೇನಹಳ್ಳಿ ಗೊಲ್ಲರಹಟ್ಟಿಯ ಕಾಡುಗೊಲ್ಲರು ಸಹ ಹಟ್ಟಿಯನ್ನು ಕಟ್ಟಿಕೊಂಡು ನೆಲೆಸಿದ್ದರು. ಹಿಂದಿನಿಂದಲೂ ಕಾಡುಗೊಲ್ಲರಿಗೂ ಮತ್ತು ಅಡ್ಲಟ್ಟಿ ಮ್ಯಾಸಬೇಡರಿಗೂ ಒಂದು ರೀತಿಯ ಸಂಬಂಧ ಬೆಳೆದುಕೊಂಡು ಬಂದಿದೆ. ಇಂದಿಗೂ ಸಹ ಈ ಎರಡು ಸಮುದಾಯಗಳು ಒಂದೇ ಕಡೆ ನೆಲೆಸಿ ಜೀವನ ಸಾಗಿಸುತ್ತಿದ್ದಾರೆ.''[೨] ಅಡ್ಲಟ್ಲಿ ಮ್ಯಾಸಬೇಡರ ಕುಟುಂಬಗಳ ಸಂಖ್ಯೆ ಹೆಚ್ಚಿದಂತೆ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ನೆಲೆಸಲಿಕ್ಕೆ ಪ್ರಾರಂಭಿಸಿದರು.

ಇಂದು ಈ ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೇವರ ಮರಿಕುಂಟೆ, ವಡ್ಡೇರಹಳ್ಳಿ, ಸಾಣೀಕೆರೆ, ಹಿರಿಯೂರು ತಾಲೂಕಿನ ಹುಚ್ಚವ್ವನ ಹಳ್ಳಿಯ ಗ್ರಾಮದಲ್ಲಿ

ಇವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದಾರೆ. ಈ ಸಮುದಾಯಗಳು ನೆಲೆಸಿರುವ ಪ್ರದೇಶದಲ್ಲಿ ವೇದಾವತಿ ನದಿ ಮತ್ತು ಮಾರಿಕಣಿವೆಯ ನೀರು ಹರಿಯುತ್ತಿದ್ದುರಿಂದ ಕೃಷಿ ಮತ್ತು ದನಕರುಗಳನ್ನು ಮೇಯಿಸಲಿಕ್ಕೆ ನೀರು, ಹುಲ್ಲುಗಾವಲು ಈ ಪ್ರದೇಶದಲ್ಲಿದೆ. ಇಂತಹ ಸಮೃದ್ಧಿಯಾದ ಪ್ರದೇಶದಲ್ಲಿ ಅಡ್ಲಟ್ಟಿ ಮ್ಯಾಸಬೇಡರು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿದ್ದಾರೆ.

ಈ ಬುಡಕಟ್ಟು ಸಮುದಾಯಕ್ಕೆ 'ಅಡ್ಲರು' ಎಂದು ಹೆಸರು ಬರಲಿಕ್ಕೆ ಕಾರಣ 'ಅಡ್ಲು' ಎಂದರೆ ಫಲವತ್ತಾದ ಭೂಮಿ. ಕೃಷಿ ಮಾಡಲು ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದ್ದರಿಂದ ಬೆಳೆಯನ್ನು ಬೆಳೆಯಲು ಯೋಗ್ಯವಾದ ಭೂಮಿಯಾಗಿತ್ತು. ಇಂತಹ ಫಲವತ್ತಾದ ಭೂಮಿಯಲ್ಲಿ ನೆಲೆಸಿದ್ದರಿಂದ ಇವರಿಗೆ ಅಡ್ಲು - ಅಡ್ಲರು - ಅಡ್ಲಟ್ಟಿ ಮ್ಯಾಸಬೇಡರು ಎಂದು ಇಂದು ಕರೆಯುತ್ತಿದ್ದಾರೆ.

"ಶ್ರೀಮಾನ್ ರಾಜಣ್ಣನವರು 'ನಾಯಕ ಜನಾಂಗದ ಇತಿಹಾಸ' ಎಂಬ ಪುಸ್ತಕದಲ್ಲಿ ೧೫ನೇ ಶತಮಾನದ ಮಧ್ಯಭಾಗದಿಂದ ಆರಂಭವಾಗುವ ನಾಯಕ ವಂಶಸ್ಥರ ಇತಿಹಾಸ ಹದಿನೆಂಟನೆಯ ಶತಮಾನದ ಮಧ್ಯಭಾಗದವರೆಗೂ ಮುಂದುವರೆಯುತ್ತದೆ. ವಿಜಯನಗರದ ಪತನ ಕಾಲದವರೆಗೂ ದುರ್ಗದ ನಾಯಕರು ವಿಜಯನಗರದ ಅರಸರಿಗೆ ಸಾಮಂತರಾಗಿದ್ದರು. ತದನಂತರ ಸ್ವತಂತ್ರರಾಗಿ ಚಿತ್ರದುರ್ಗ ಸೀಮೆಯನ್ನಾಳಿದರು. ೧೭೭೯ರಲ್ಲಿ ಚಿತ್ರದುರ್ಗ ಸಂಸ್ಥಾನವು ಹೈದರಾಲಿಯ ವಶವಾಯಿತು. ನಂತರ ಬೇರೆ ಬೇರೆ ಕಡೆಗೆ ವಲಸೆ ಹೋದರೆಂದು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ."

ಕಾಡುಗೊಲ್ಲರಿಗೂ ಮತ್ತು ಅಡ್ಲಟ್ಟಿ ಮ್ಯಾಸಬೇಡರಿಗೂ ಇರುವ ಸಂಬಂಧಗಳು

ಕಾಡುಗೊಲ್ಲರು ಮತ್ತು ಅಡ್ಲಟ್ಟಿ ಮ್ಯಾಸಬೇಡರು ಹಿಂದಿನಿಂದಲೂ ಒಂದೇ ಕುಟುಂಬದ ಸದಸ್ಯರಂತೆ ವಾಸಿಸುತ್ತ ಬಂದಿದ್ದಾರೆ. ಸಾಮಾನ್ಯವಾಗಿ ಒಂದೇ ವೃತ್ತಿ ಮತ್ತು ಒಂದೇ ಬಗೆಯ ಸಂಪ್ರದಾಯಗಳು, ಆಚಾರ - ವಿಚಾರಗಳನ್ನು ಹೊಂದಿದ್ದಾರೆ. ಇಲ್ಲಿ ಗೊಲ್ಲ ಎಂದರೆ ಗೋವುಗಳನ್ನು ಕಾಯುವವನು ಎಂದೂ, ಕಾಡುಗೊಲ್ಲ ಎಂದರೆ ಕಾಡಿನಲ್ಲಿ ವಾಸಿಸುವ ಗೊಲ್ಲನೆಂದು ಅರ್ಥವಾಗುತ್ತದೆ. ಮ್ಯಾಸ ಎಂದರೆ ಮೇಷಗಳನ್ನು ಕಾಯುವವನು. ಫಲವತ್ತಾದ ಭೂಮಿಯಲ್ಲಿ ಮತ್ತು ಕಾಡಿನಲ್ಲಿ ವಾಸಿಸುವ ಇವರನ್ನು ಅಡ್ಲಟ್ಟಿ ಮ್ಯಾಸಬೇಡರೆಂದು ಗುರುತಿಸಬಹುದು. ಈ ಎರಡೂ ಸಮುದಾಯಗಳು ಕಾಡು ಮತ್ತು ಫಲವತ್ತಾದ ಪ್ರದೇಶಗಳಲ್ಲಿ 'ಹಟ್ಟಿಗಳನ್ನು' ಕಟ್ಟಿಕೊಂಡು ನೆಲೆಸಿವೆ. ಈ ಎರಡು ಸಮುದಾಯಗಳು ಒಂದೇ ಬಗೆಯ ಕೆಲವೊಂದು ಸಂಪ್ರದಾಯ, ಆಚಾರ, ರೂಢಿ ಪದ್ಧತಿಗಳನ್ನು ಹೊಂದಿದ್ದಾರ.

ಈ ಎರಡು ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ವಿವಾಹಗಳು ಐದು ದಿನಗಳ ಕಾಲ ನಡೆಯುತ್ತವೆ. ಈ ಸಮುದಾಯಗಳಲ್ಲಿ ಸಾಮಾನ್ಯವಾಗಿ ವಿವಾಹಗಳು ಹೆಣ್ಣಿನ ಮನೆಯಲ್ಲಿ ನಡೆಯುತ್ತವೆ. ಮದ್ಲಿಂಗನ ಶಾಸ್ತ್ರದಲ್ಲಿ ವಾದ್ಯದೊಡನೆ ಕುರಿಹಟ್ಟಿಯ ದೇವಸ್ಥಾನದ ಬಳಿಗೆ ಕರೆದುಕೊಂಡು ಹೋಗುತ್ತಾರೆ.

ಅಲ್ಲಿ ಮನೆಗೊಬ್ಬರಂತೆ ಗಂಡಿನ ತಲೆಗೆ ಹಾಲೊತ್ತುತ್ತಾರೆ. ಪೂಜಾರಿ ಮತ್ತು ದಾಸಯ್ಯ ಮೊದಲು ಗಂಡಿನ ತಲೆಗೆ ಹಾಲನ್ನು ಒತ್ತುವನು ನಂತರ ಉಳಿದವರ ಸರದಿ. ನಂತರ ಕರಿಕಂಬಳಿ ಗದ್ದಿಗೆ ಹಾಸಿ ಹಸೆ ಹಚ್ಚುತ್ತಾರೆ.

ಕಾಡುಗೊಲ್ಲರು ಮತ್ತು ಅಡ್ಲಟ್ಟಿ ಮ್ಯಸಬೇಡರಲ್ಲಿ ಮಗು ಜನಿಸಿದಾಗ ಆಚರಿಸುವ ಆಚರಣೆ ಸಂಪ್ರದಾಯಗಳು ತುಂಬ ಕಟ್ಟುನಿಟ್ಟಾಗಿರುತ್ತವೆ. ಬಸುರಿಗೆ ಹೆರಿಗೆ ನೋವು ಆರಂಭವಾದ ಕೂಡಲೇ ಹಟ್ಟಿಯಿಂದ ಹೊರಗೆ ಕಟ್ಟಿದ ಹುಲ್ಲಿನ ಗುಬ್ಬದಲ್ಲಿ ಅವಳನ್ನು ಬಿಡುತ್ತಾರೆ. ಅಲ್ಲಿಯೇ ಅವಳ ಹೆರಿಗೆಯನ್ನು ಹಟ್ಟಿಯ ಸೂಲಗಿತ್ತಿಯಿಂದ ಮಾಡಿಸುತ್ತಾರೆ.

ಈ ಎರಡು ಬುಡಕಟ್ಟುಗಳ ಉಡಿಗೆ - ತೊಡಿಗೆ ಒಂದೇ ರೀತಿ ಇರುವುದನ್ನು ಕಾಣಬಹುದಾಗಿದೆ. ಈ ಸಮುದಾಯದ ಜನರು ಮೊಳಕಾಲುವರೆಗೆ ಚಲ್ಲಣ ಮತ್ತು ವೋಟಂಗಿಯನ್ನು ತೊಡುತ್ತಾರೆ. ಒಂದೇ ರೀತಿಯ ಆಭರಣ ಪ್ರಿಯರಾಗಿದ್ದಾರೆ.

ಎಂ.ಜಿ.ಈಶ್ವರಪ್ಪರವರು 'ಮ್ಯಾಸಬೇಡರು' ಎಂಬ ತಮ್ಮ ಕಿರು ಪುಸ್ತಕದಲ್ಲಿ ಕಾಡುಗೊಲ್ಲರು ಮತ್ತು ಮ್ಯಾಸಬೇಡರ "ಕೆಲವು ಐತಿಹ್ಯಗಳ ಪ್ರಕಾರ ಇವರು ಪಶುಪಾಲನೆ ಮಾಡುತ್ತಿದ್ದರೆಂದು, ಇವರು ಶ್ರೀಶೈಲ ಕಡೆಯಿಂದ ಪಶುಗಳನ್ನು ಮೇಯಿಸಿಕೊಳ್ಳುತ್ತ ಕರ್ನಾಟಕ ಕಡೆಗೆ ಬಂದರೆಂದೂ ತಿಳಿಯುತ್ತದೆ. ಇವರು ಇಲ್ಲಿಗೆ ಬರುವಾಗ ಹಿಂದೆ ಒಬ್ಬ ಮುಂದೆ ಒಬ್ಬ ಬರುತ್ತಿದ್ದ. ಹಿಂದಿನವ ಆಕಳು ಕರುವಿನ ಕಾಲು ಮುರಿದು ತಿನ್ನಲು ಶುರುಮಾಡಿದನಂತೆ. ಅದಕ್ಕೆ ಮುಂದಿನವನು ನೀನು 'ಗೋಮಾಂಸ ತಿಂದೆ ನೀನು ಬ್ಯಾಡ' ಅಂತ ಅವನನ್ನು ಬಿಟ್ಟು ಮುಂದೆ ಬಂದನಂತೆ. ಮುಂದೆ ಬಂದವನು ಕಾಡುಗೊಲ್ಲನಾದ, ಹಿಂದೆ ಉಳಿದವನು ಮ್ಯಾಸಬೇಡ ನಾದನಂತೆ.

ಇವರ ಹೇಳಿಕೆಯನ್ನು ನೋಡಿದಾಗ ಹಿಂದೆ ಈ ಎರಡು ಬುಡಕಟ್ಟುಗಳು ಒಂದೇ ಕುಟುಂಬದ ಅಣ್ಣ - ತಮ್ಮಗಳಾಗಿರಬಹುದೆಂದು, ಹೀಗಾಗಿ ಅವರ ಕೆಲ ಆಚರಣೆ ಸಂಪ್ರದಾಯಗಳು ಒಂದೇ ಇರುವುದು ಕಂಡುಬರುತ್ತದೆ. ವಕ್ತೃಗಳ ಹೇಳಿಕೆ ಪ್ರಕಾರ "ಕಾಡುಗೊಲ್ಲರ ಪ್ರಮುಖದೇವತೆಗಳಾದ ಜುಂಜಪ್ಪ, ಚಿತ್ತಯ್ಯ, ಕಾಟಂದೇವರು, ಕೇತೇದೇವರು, ಓಬಳನರಸಿಂಹ, ಎತ್ತಪ್ಪ. ಇವುಗಳಲ್ಲಿ ಓಬಳ ನರಸಿಂಹ ದೇವರು ಅಡ್ಲಟ್ಟಿ ಮ್ಯಾಸಬೇಡರ ಮನೆದೇವರಾಗಿದೆ ಮತ್ತು ಕಾಡುಗೊಲ್ಲರಿಗೂ ಮನೆದೇವರಾಗಿದೆ. ಆದ್ದರಿಂದ ಈ ಎರಡು ಸಮುದಾಯಗಳು ಗುಗ್ಗರಿ ಹಬ್ಬದ ದಿನ ಓಬಳನರಸಿಂಹಸ್ವಾಮಿಗೆ ಹುರುಳಿಯನ್ನು ಮೀಸಲು ಕೊಡುತ್ತಾರೆ. ಓಬಳನರಸಿಂಹಸ್ವಾಮಿ ಗುಗ್ಗರಿ ಹಬ್ಬದಲ್ಲಿ ಸುತ್ತಲು ಕಳ್ಳೆಪೌಳಿಯನ್ನು ಕಾಡುಗೊಲ್ಲ ಸಮುದಾಯದವರೇ ಪ್ರತಿವರ್ಷ ಹಾಕುತ್ತಾರೆ. ಈ ಎರಡು ಬುಡಕಟ್ಟುಗಳು ಸೇರಿ ಗುಗ್ಗರಿ ಹಬ್ಬ ಆಚರಿಸುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಮ್ಯಾಸಬೇಡರಿಗೂ ಇರುವ ಸಂಬಂದ ಮತ್ತು ಭಿನ್ನತೆ

ಊರುನಾಯಕ, ಮ್ಯಾಸನಾಯಕ ಮತ್ತು ಅಡ್ಲಬ್ಬೆ ಮ್ಯಾಸಬೇಡ, ತಳವಾರ, ವಾಲ್ಮೀಕಿ ಈ ಎಲ್ಲಾ ಸಮುದಾಯಗಳು ಒಂದೇ ಮೂಲಕ್ಕೆ ಸೇರಿದವುಗಳು. ನಂತರ ಉಪಪಂಗಡಗಳಾಗಿವೆ. ``ಎಂ.ಜಿ.ಈಶ್ವರಪ್ಪ ಅವರು 'ಮ್ಯಾಸಬೇಡರು' ಎಂಬ ತಮ್ಮ ಕಿರು ಪುಸ್ತಕದಲ್ಲಿ ಮ್ಯಾಸನಾಯಕರು ಪಶುಪಾಲನೆಯನ್ನು ಮಾಡುತ್ತಿದ್ದರೆಂದೂ ಇವರು ಶ್ರೀಶೈಲದ ಕಡೆಯಿಂದ ಪಶುಗಳನ್ನು ಮೇಯಿಸುತ್ತ ಕರ್ನಾಟಕದ ಕಡೆಗೆ ಬಂದರೆಂದು ತಿಳಿಸಿದ್ದಾರೆ. ಇವರು ಆಂಧ್ರದ ಮೂಲದವರಾಗಿದ್ದರಿಂದ ಮ್ಯಾಸನಾಯಕರು ತೆಲುಗು ಮಾತನಾಡುತ್ತಾರೆ ಎಂದಿದ್ದಾರೆ.`` ಆದರೆ ಈ ಅಡ್ಲಟ್ಟಿ ಮ್ಯಾಸಬೇಡರು ಕರ್ನಾಟಕದ ನಿಡಗಲ್ಲು ಸಂಸ್ಥಾನದಲ್ಲಿ ನೆಲೆಸಿದ ನಂತರ ತಮ್ಮ ಪಶುಗಳನ್ನು ಮೇಯಿಸಲು ಮೇವು - ನೀರು ಇರುವ ಪ್ರದೇಶಗಳಿಗೆ ವಲಸೆ ಬಂದಿದ್ದಾರೆ ಎಂದು ಈ ಸಮುದಾಯದ ವ್ಯಕ್ತಿಗಳು ಹೇಳುತ್ತಾರೆ. ಆದ್ದರಿಂದ ಇವರು ಕರ್ನಾಟಕದವರಾಗಿದ್ದರಿಂದ ತೆಲುಗು ಮಾತನಾಡಲು ಬರುವುದಿಲ್ಲ. ಕನ್ನಡವನ್ನೇ ಮಾತನಾಡುತ್ತಾರೆ. ಕನ್ನಡವೇ ಅವರ ಮಾತೃಭಾಷೆಯಾಗಿದೆ. ತಮ್ಮದೇ ಆದ ಕುಲ ಬೆಡಗುಗಳನ್ನು ಹೊಂದಿ, ಮ್ಯಾಸನಾಯಕರ ಆಚಾರ-ಸಂಪ್ರದಾಯಗಳಿಗಿಂತಲೂ ಭಿನ್ನತೆಯನ್ನು ಹೊಂದಿದ್ದಾರೆ. ಆದರೆ ವೈವಾಹಿಕ ಸಂಬಂಧವನ್ನು ಬೇಡ ಸಮುದಾಯಗಳ ಜೊತೆಯಲ್ಲಿ ಮಾತ್ರ ಹೊಂದಿದ್ದಾರೆ.

ಎಂ.ಪಿ.ವೀಣಾ 'ಮನೆ, ಸಮಾಜ ಮತ್ತು ಸಂಸ್ಕೃತಿ' ಎಂಬ ಪುಸ್ತಕದಲ್ಲಿ ಊರುನಾಯಕರು ದನದ ಮಾಂಸವನ್ನು ತಿನ್ನುವುದಿಲ್ಲ. ಮ್ಯಾಸನಾಯಕರು ದನದ ಮಾಂಸವನ್ನು ತಿನ್ನುತ್ತಾರೆ ಎಂಬ ಎಂ.ಜಿ.ಈಶ್ವರಪ್ಪರವರ ಹೇಳಿಕೆಯನ್ನು `ಮ್ಯಾಸಬೇಡರು` ಎಂಬ ಪುಸ್ತಕದಲ್ಲಿ ತೆಗೆದುಕೊಂಡು ಹೇಳಿದ್ದಾರೆ. ಆದರೆ ಈ ಅಡ್ಲಟ್ಟಿ ಮ್ಯಾಸಬೇಡರು ಊರುನಾಯಕರಂತೆ ದನದ ಮಾಂಸವನ್ನು ಮತ್ತು ಕೋಳಿಯನ್ನು ತಿನ್ನುವುದಿಲ್ಲ. ಬಹಳ ಕಟ್ಟುನಿಟ್ಟಿನ ಸಂಪ್ರದಾಯವನ್ನು ಹೊಂದಿದ್ದಾರೆ. ಆದ್ದರಿಂದ ಅಡ್ಲಟ್ಟಿ ಮ್ಯಾಸಬೇಡರು ಮ್ಯಾಸನಾಯಕರಿಗಿಂತಲೂ ಹೆಚ್ಚು ಮಡಿವಂತಿಕೆಯುಳ್ಳವರು.

ಅಡ್ಲಟ್ಟಿ ಮ್ಯಾಸಬೇಡರು ವಾಸವಾಗಿರುವ ನೆಲೆಗಳು

ಕರ್ನಾಟಕದಲ್ಲಿ ಅಡ್ಲಟ್ಟಿ ಮ್ಯಾಸಬೇಡ ಸಮುದಾಯಗಳು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ವಡೇರಹಳ್ಳಿ, ಸಾಣೀಕೆರೆ, ದೇವರ ಮರುಕುಂಟೆ ಈ ಗ್ರಾಮಗಳಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಹಿರಿಯೂರು ತಾಲೂಕಿನ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಕಡಿಮೆ ಪ್ರಮಾಣದಲ್ಲಿ ನೆಲೆಸಿದ್ದಾರೆ. ಈ ಪ್ರದೇಶಗಳಲ್ಲಿ ವೇದಾವತಿ ನದಿ ಹರಿಯುತ್ತಿದ್ದರಿಂದ ತಮ್ಮ ಪಶುಗಳಿಗೆ ಮೇವು, ನೀರು ದೊರಕುತ್ತಿತ್ತು ಮತ್ತು ಕೃಷಿ ಮಾಡಲು ಯೋಗ್ಯ ಭೂಮಿಯಾಗಿದ್ದರಿಂದ ಅಲೆಮಾರಿತನವನ್ನು ಬಿಟ್ಟು ಹಟ್ಟಿಗಳನ್ನು ಕಟ್ಟಿಕೊಂಡು ನೆಲೆಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಎರಡು ತಾಲೂಕುಗಳಲ್ಲಿ ಅಡ್ಲಟ್ಟಿ ಸಮುದಾಯಗಳು ವಾಸಿಸುತ್ತಾರೆ. ಚಳ್ಳಕೆರೆ ತಾಲೂಕಿನ ಸಾಣೀಕೆರೆಯಲ್ಲಿ ೨೨ ಕುಟುಂಬಗಳು ವಾಸವಾಗಿದ್ದು, ೧೦೧ ಜನಸಂಖ್ಯೆ ಕಂಡುಬರುವುದು. ನಂತರ ದೇವರಮರಿಕುಂಟೆಯಲ್ಲಿ ೩ ಕುಂಟುಬಗಳು ವಾಸವಾಗಿದ್ದು, ೧೧ ಜನಸಂಖ್ಯೆ ಹೊಂದಿದೆ. ವಡೇರಳ್ಳಿಯಲ್ಲಿ ೨ ಕುಟುಂಬಗಳು ೧೨ ಜನಸಂಖ್ಯೆ ಕಂಡುಬರುವುದು. ಹಿರಿಯೂರು ತಾಲೂಕಿನ ಹುಚ್ಚವ್ವನಹಳ್ಳಿಯಲ್ಲಿ ೨ ಕುಟುಂಬಗಳಿದ್ದು, ೮ ಜನಸಂಖ್ಯೆ ಹೊಂದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ೨೯ ಕುಟುಂಬಗಳಿದ್ದು, ೧೩೨ ಜನಸಂಖ್ಯೆ ಅದರಲ್ಲಿ ೬೭ ಪುರುಷರು, ೬೫ ಜನ ಸ್ತ್ರೀಯರು ವಾಸಿಸುತ್ತಾರೆ. ಈ ಎಲ್ಲ ಕುಟುಂಬಗಳು ಚಿನಮೊಗಲವರ ಬೆಡಗಿನವರಾಗಿದ್ದಾರೆ. ಇವರ ಸಂಬಂಧಿಕರೇ ಆದ ಮ್ಯಾಸನಾಯಕರ ಜೊತೆಯಲ್ಲಿ ವೈವಾಹಿಕ ಸಂಬಂಧವನ್ನು ಹೊಂದಿದ್ದಾರೆ. ಇವರು ಹೆಚ್ಚಾಗಿ ಮಂದಲವರ ಬೆಡಗಿನ ಮ್ಯಾಸನಾಯಕರೊಂದಿಗೆ ವಿವಾದ ಸಂಬಂಧಗಳನ್ನು ಬೆಳೆಸುತ್ತಾರೆ.

ಅಡಿಟಿಪ್ಪಣಿ

೧. ವಕ್ತೃ ಎಂ. ನಿಂಗಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರು, ಸಾಣೀಕೆರೆ

೨. ಅವರೇ

೩

ಸಾಮಾಜಿಕ, ಆರ್ಥಿಕ, ಧಾರ್ಮಿಕ ವ್ಯವಸ್ಥೆ

೩

ಸಾಮಾಜಿಕ, ಆರ್ಥಿಕ, ಧಾರ್ಮಿಕ ವ್ಯವಸ್ಥೆ

ಸಾಮಾಜಿಕ ಜೀವನ

ಅಡ್ಲಟ್ಟಿ ಮ್ಯಾಸಬೇಡರು ಶತಮಾನಗಳಿಂದ ಒಂದು ಬಗೆಯ ಸಂಚಾರಿ ಜೀವನವನ್ನು ಕಳೆಯುತ್ತ ಬಂದಿದ್ದಾರೆ. ಸಾಮಾನ್ಯವಾಗಿ ಅಡ್ಲಟ್ಟಿ ಮ್ಯಾಸಬೇಡರು ಊರುಗಳಿಂದ ದೂರದಲ್ಲಿ, ಕಾಡುಮೇಡುಗಳಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದರು. ಇವರು ಪಶುಪಾಲಕರಾಗಿದ್ದರಿಂದ ತಮ್ಮ ಕುರಿ, ಮೇಕೆಗಳು ಹಾಗೂ ದನಕರುಗಳಿಗೆ ಗ್ರಾಮ ಸಮುದಾಯಗಳಿಂದ ಹುಲ್ಲು ನೀರಿನ ಸಮಸ್ಯೆ ಉಂಟಾಗದಿರಲೆಂದು ತಮ್ಮ ಬದುಕಿಗೆ ಗ್ರಾಮ ಸಮುದಾಯಗಳ ನಿರ್ಬಧನೆಗಳು, ಕಟ್ಟುಕಟ್ಟಳೆಗಳು ಅನ್ವಯವಾಗದಂತೆ ಸಾಮಾನ್ಯವಾಗಿ ಊರ ಹೊರಗೆ ಹಟ್ಟಿಗಳನ್ನು ಕಟ್ಟಿಕೊಂಡು ತಾವುಗಳು ನೆಲೆನಿಂತ ಪ್ರದೇಶಗಳಲ್ಲಿ ತಮ್ಮ ಪಶುಗಳಿಂದ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಆಹಾರ ಧಾನ್ಯಗಳನ್ನು ಬೆಳೆದು ಬದುಕುತ್ತಿರುವುದನ್ನು ಕಾಣುತ್ತೇವೆ.

ಇಂದು ಅಲ್ಲಲ್ಲಿ ತಂಡೋಪತಂಡವಾಗಿ ನೆಲೆನಿಂತು ಸಾವಿರಾರು ವರ್ಷಗಳಿಂದ ತಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ಈಗೀಗ ನವ ನಾಗರಿಕತೆಯ ಪ್ರಭಾವ ಅವರ ಮೇಲೆ ಆಗಿದ್ದರೂ ಸಹ ಅವರಲ್ಲಿ ಅಷ್ಟಾಗಿ ಬದಲಾವಣೆ ಕಂಡುಬರುವುದಿಲ್ಲ.

[illegible]

[illegible]

[illegible]

[illegible]

[illegible]

ಕೌಟುಂಬಿಕ ಜೀವನ

ಅಡ್ಲಟ್ಟಿ ಮ್ಯಾಸಬೇಡರು ಕಾಡುಗೊಲ್ಲರ ರೀತಿಯಂತೆ ಊರುಗಳಿಂದ ಹೊರಗೆ ಹಟ್ಟಿ ಕಟ್ಟಿಕೊಂಡು ವಾಸಿಸುತ್ತಿದ್ದರು. ಈ ಹಟ್ಟಿಗಳನ್ನು ಮ್ಯಾಸಬೇಡರ ಹಟ್ಟಿಗಳೆಂದು ಕರೆಯುತ್ತಾರೆ. ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಕಂಡುಬರುತ್ತದೆ. ವಿಭಕ್ತ ಕುಟುಂಬ ಪದ್ಧತಿ ಬಹಳ ಕಡಿಮೆ ಪ್ರಮಾಣದಲ್ಲಿದೆ. ಗಂಡುಮಕ್ಕಳು ಮದುವೆಯಾಗಿ ತಮ್ಮ ತಂದೆ - ತಾಯಿ, ಅಣ್ಣ - ತಮ್ಮ, ಅಜ್ಜ - ಅಜ್ಜಿ, ಅಕ್ಕ - ತಂಗಿ, ರಕ್ತಸಂಬಂಧಿಗಳ ಜೊತೆಯಲ್ಲಿ ಕೂಡಿಕೊಂಡು ಸಮಾನ ರೀತಿಯಲ್ಲಿ ಜೀವನ ಸಾಗಿಸುತ್ತಾರೆ. ಇವರಲ್ಲಿ ಮೇಲು - ಕೀಳು ಎಂಬ ಭಾವನೆ ಕಂಡುಬರುವುದಿಲ್ಲ. ಇವರ ಕುಟುಂಬಗಳ ಒಗ್ಗಟ್ಟು ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಪಿತೃಪ್ರಧಾನ ಕುಟುಂಬ ಪದ್ಧತಿ ಈ ಸಮುದಾಯದಲ್ಲಿದೆ.

ಒಂದು ಘಟ್ಟದಲ್ಲಿ ಕುಟುಂಬದ ಅತ್ಯಂತ ಹಿರಿಯ ತನ್ನ ಕುಟುಂಬದ ಸದಸ್ಯರ ಮೇಲೆ ನಿಯಂತ್ರಣ ಇಟ್ಟುಕೊಂಡಿದ್ದ. ಅನೇಕ ವಿಧಿ - ನಿಷೇಧಗಳನ್ನು ವಿಧಿಸುತ್ತಿದ್ದ. ಯಾರು ಯಾವುದೇ ದುಶ್ಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳುತ್ತಿದ್ದ. ಮತ್ತು ಇವರ ಜೀವನಕ್ಕೆ ಬೇಕಾದ ಅವಶ್ಯಕವಾದವುಗಳನ್ನು ಪೂರೈಸುತ್ತಾ ಕುಟುಂಬದ ಸದಸ್ಯರನ್ನು ಸಮಾನ ಭಾವನೆಯಿಂದ ನೋಡಿಕೊಳ್ಳುತ್ತಿದ್ದ. ಅದೇ ರೀತಿ ಕುಟುಂಬದ ಸದಸ್ಯರು ಸಹ ಪಿತೃವಿಗೆ ಗೌರವವನ್ನು ಕೊಡುತ್ತಿದ್ದರು. ಇಂದು ಕುಟುಂಬದ ಯಜಮಾನ ಈ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಅಡ್ಲಟ್ಟಿ ಮ್ಯಾಸಬೇಡರಲ್ಲಿ ಪುರುಷ ಪ್ರಧಾನ ಸಮಾಜವಿದೆ. ಮನೆಯ ಯಜಮಾನಿಕೆ ಗಂಡಸಿನ ಕೈಯಲ್ಲಿಯೇ ಇರುತ್ತದೆ. ತಂದೆಯ ನಂತರ ಹಿರಿಯ ಮಗನಿಗೆ ಅಧಿಕಾರ ಹಸ್ತಾಂತರಗೊಳ್ಳುತ್ತದೆ. ಇವರಲ್ಲಿ ತಂದೆಯ ಆಸ್ತಿ ಗಂಡುಮಕ್ಕಳಿಗೆ ಮಾತ್ರ, ಹೆಣ್ಣು ಮಕ್ಕಳಿಗಿಲ್ಲ.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಪಿತೃ ಇಲ್ಲದ ಪಕ್ಷದಲ್ಲಿ ಮಾತೃಪ್ರಧಾನ ವ್ಯವಸ್ಥೆ ಕಂಡುಬರುತ್ತದೆ. ಆದರೆ ಆಸ್ತಿ ಮಾತ್ರ ಹೆಣ್ಣುಮಕ್ಕಳಿಗೆ ಸೇರದೆ ಗಂಡುಮಕ್ಕಳಿಗೆ ಸೇರುತ್ತದೆ. ಕುಟುಂಬದಲ್ಲಿ ಸ್ತ್ರೀ ಕೇವಲ ನಾಮಮಾತ್ರ ಸದಸ್ಯೆಳಾಗಿರುತ್ತಾಳೆ. ಪ್ರತಿಯೊಂದು ಆಗು ಹೋಗುಗಳನ್ನು ಪುರುಷರೇ ನಿರ್ವಹಿಸುತ್ತಾರೆ. ವಂಶದ ಕುಟುಂಬ ಹಿರಿಯ ಮಗನೇ ಹಕ್ಕುದಾರ. ಈ ಹಕ್ಕು ತಂದೆಯಿಂದ ಮಗನಿಗೆ ಹಸ್ತಾಂತರವಾಗುತ್ತದೆ. ಕುಟುಂಬದಲ್ಲಿ ತಂದೆಯ ನಂತರ ಹಿರಿಯ ಮಗನಿಗೆ ಹೆಚ್ಚಿನ ಜವಾಬ್ದಾರಿ.

ಆದರೆ "ಮ್ಯಾಸನಾಯಕರ ಸಮುದಾಯದ ಕುಟುಂಬಗಳಲ್ಲಿ ಗಂಡುಸಂತಾನ ಇಲ್ಲದಿದ್ದರೆ, ಹೆಣ್ಣುಮಕ್ಕಳಿದ್ದರೆ ದೇವದಾಸಿಯನ್ನಾಗಿ ಬಿಡುತ್ತಾರೆ. ಇಂದು ಸಹ ಈ ಪದ್ಧತಿ ಜೀವಂತವಾಗಿದೆ. ತಂದೆ = ತಾಯಿಯ ಪೋಷಣೆಯನ್ನು ಗಂಡುಮಕ್ಕಳಿಗಿಂತ ಹೆಚ್ಚಾಗಿ ಇವರೇ ಮಾಡುತ್ತಾರೆ. ಈ ವ್ಯವಸ್ಥೆಯಲ್ಲಿ ಹೆಂಗಸರಿಗೂ ಆಸ್ತಿ ದೊರೆಯುತ್ತದೆ. ಗಂಡುಮಕ್ಕಳಷ್ಟೇ ಅಧಿಕಾರವನ್ನು ಇವರು ಪಡೆದಿರುತ್ತಾರೆ. ಎಷ್ಟೋ ಕುಟುಂಬಗಳಲ್ಲಿ ಮದುವೆಯ ನಂತರ ಗಂಡುಮಕ್ಕಳು ತಮ್ಮನ್ನು ರಕ್ಷಿಸುವುದಿಲ್ಲ. ಆದರೆ ಹೆಣ್ಣುಮಕ್ಕಳು ತಮ್ಮ ಪೋಷಣೆ ಮಾಡುತ್ತಾರೆ ಎಂಬ ವಿಶ್ವಾಸದಿಂದ ತಂದೆ - ತಾಯಿಗಳು ಪುರುಷ ಸಂತಾನವಿಲ್ಲದಿದ್ದರೆ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುತ್ತಾರೆ."[೧]

[illegible]

[illegible]

[illegible]

[illegible]

ಆದರೆ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ದೇವದಾಸಿ ಪದ್ಧತಿ ಕಂಡುಬರುವುದಿಲ್ಲ. ಗಂಡುಸಂತಾನ ಇಲ್ಲದಿದ್ದರೂ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟು ಮಗಳ ಗಂಡನನ್ನು ಮನೆಯ ಅಳಿಯನನ್ನಾಗಿ ಮಾಡಿಕೊಳ್ಳುತ್ತಾರೆ. ಆಸ್ತಿಯ ಅಧಿಕಾರವನ್ನು ಅವರಿಗೆ ಕೊಟ್ಟಿರುತ್ತಾರೆ. ಈ ಸಮುದಾಯದಲ್ಲಿ ರಕ್ತಸಂಬಂಧದ ವಿವಾಹಗಳು ಹೆಚ್ಚಾಗಿ ನಡೆಯುತ್ತವೆ. ದೂರದ ಸಂಬಂಧ ಬಯಸುವುದು ಅಥವಾ ವಿವಾಹವಾಗುವುದು ಬಹಳ ಕಡಿಮೆ. ತಮ್ಮ ಅಕ್ಕನ ಮಕ್ಕಳನ್ನೋ ಅಥವಾ ತಂಗಿಯ ಮಕ್ಕಳನ್ನೋ ಹೆಚ್ಚಾಗಿ ವಿವಾಹವಾಗುತ್ತಾರೆ. ಹಿಂದೆ ಈ ಸಮುದಾಯದಲ್ಲಿ ವರದಕ್ಷಿಣೆ ಪದ್ಧತಿ ಇರಲಿಲ್ಲ. ವಧುದಕ್ಷಿಣೆ ಪದ್ಧತಿ ಕಂಡುಬರುತಿತ್ತು. ಇತ್ತೀಚಿಗೆ ಶಿಕ್ಷಣ ಪಡೆದು ಸರಕಾರಿ ಉದ್ಯೋಗಗಳಿಗೆ ಸೇರಿ ನಗರಪ್ರದೇಶಗಳಲ್ಲಿ ವಾಸಿಸುವಂತವರು ವರದಕ್ಷಿಣೆಯನ್ನು ಪಡೆಯುತ್ತಿದ್ದಾರೆ. ಮತ್ತು ದೂರದ ಸಂಬಂಧಿಗಳ ಜೊತೆಯಲ್ಲಿ ವಿವಾಹಸಂಬಂಧ ಬಯಸುತ್ತಿದ್ದಾರೆ. ಇದರಿಂದ ವಿಭಕ್ತ ಕುಟುಂಬಗಳು ಸ್ವಲ್ಪ ಪ್ರಮಾಣದಲ್ಲಿ ಕಂಡುಬಂದರೂ, ಅವಿಭಕ್ತ ಕುಟುಂಬಗಳೇ ಹೆಚ್ಚಿನ ಪ್ರಮಾಣದಲ್ಲಿವೆ.

ವಸತಿ ವ್ಯವಸ್ಥೆ

ಅಡ್ಲಟ್ಟಿ ಮ್ಯಾಸಬೇಡರು ಮೊದಲು ಗುಡಿಸಲುಗಳನ್ನು ತಾವೇ ಕಟ್ಟಿಕೊಳ್ಳುತ್ತಿದ್ದರಂತೆ. ಇವರ ವಸತಿಯ ಸುತ್ತಮುತ್ತ ಹರಿಜನರು ಮತ್ತು ಮುಸ್ಲಿಮರು ವಾಸಿಸುತ್ತಿರಲಿಲ್ಲ. ಆದ್ದರಿಂದ ತಮ್ಮ ಹಟ್ಟಿಗಳನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಕಟ್ಟಿಕೊಳ್ಳುತ್ತಿದ್ದರು. ಅಡ್ಲಟ್ಟಿಯಲ್ಲಿ ಸುಮಾರು ಐದಾರು ಗುಡಿಸಲುಗಳ ಒಂದು ಸಮೂಹವಿತ್ತಂತೆ. ಚಿಕ್ಕ ಚಿಕ್ಕ ಹುಲ್ಲಿನ ಗುಡಿಸಲುಗಳೇ ಅಡ್ಲಟ್ಟಿ ಮ್ಯಾಸಬೇಡರ ವಸತಿಗಳಾಗಿವೆ. ಗುಡಿಸಲುಗಳೇ ವಸತಿಗೆ ಪ್ರಾಶಸ್ತ್ಯ ಎಂದು ಅವರು ತಿಳಿದುಕೊಂಡಿದ್ದಾರೆ.

''ಪ್ರಕೃತಿಯಲ್ಲಿ ಪುಕ್ಕಟೆಯಾಗಿ ಸಿಗುವ ಬಿದಿರು, ಬರಲನ್ನು ಗಟ್ಟಿಯಾಗಿ ಹೆಣೆದು ಅವುಗಳಿಂದ ಚೌಕ ಮತ್ತು ವೃತ್ತಾಕಾರದಲ್ಲಿ ಗೋಡೆಗಳಂತೆ ನಿರ್ಮಿಸುತ್ತಾರೆ. ಬುನಾದಿ, ಕಡಪದ ಬಂಡೆಗಳು ಕಂಡುಬರುವುದಿಲ್ಲ. ಮೇಲ್ಗಡೆಗೆ ಹುಲ್ಲು ಅಥವಾ ತಾಳೆಗರಿಗಳನ್ನು ಹೊದಿಸಿ ಚಪ್ಪರ ತಯಾರಿಸುತ್ತಾರೆ. ಬಾಗಿಲು ಅತ್ಯಂತ ಚಿಕ್ಕದಾಗಿರುತ್ತದೆ. ಬಾಗಿಯೇ ಒಳಗಡೆ ಪ್ರವೇಶಿಸಬೇಕು. ಒಂದೊಂದು ಸಂಸಾರಕ್ಕೂ ಒಂದೊಂದು ಸ್ವತಂತ್ರ ಗುಡಿಸಲಿರುತ್ತದೆ.''[೨] ಇವುಗಳನ್ನು ಅವರು 'ಗುಡ್ಲುಗಳು' ಎಂದು ಕರೆಯುತ್ತಾರೆ. ಇದರ ಸುತ್ತಲೂ ಕಂಪೌಂಡಿನಂತಿರುವ ಮುಳ್ಳಿನ ಬೇಲಿ ಇದ್ದು ಅದು ವಸತಿಗೆ ರಕ್ಷಣೆಯನ್ನು ಒದಗಿಸುತ್ತದೆ. ಈ ಗುಡಿಸಲುಗಳು ೧೨ - ೧೫ ಅಡಿಗಳ ಉದ್ದಳತೆ ಅಥವಾ ೧೫ ವ್ಯಾಸ ಹೊಂದಿರುತ್ತದೆ.

ಮೂಲತಃ ಅಲೆಮಾರಿಗಳಾಗಿದ್ದ ಅಡ್ಲಟ್ಟಿ ಮ್ಯಾಸಬೇಡರು ಬರುಬರುತ್ತಾ ಒಂದು ಕಡೆ ನೆಲೆನಿಂತು ಹಟ್ಟಿಗಳನ್ನು ಕಟ್ಟಿಕೊಂಡಿದ್ದಾರೆ. ಹಟ್ಟಿಯ ಮತ್ತು ಮನೆಗಳ ಒಳಗಡೆ ಧಾನ್ಯಗಳನ್ನು ಸಂಗ್ರಹಿಸಲು ಚಿಕ್ಕ ಚಿಕ್ಕ 'ಹಗೇವು'ಗಳನ್ನು ಮಾಡಿಕೊಂಡಿದ್ದರು. ಆಗ ಅವರಲ್ಲಿ ಗೋಣಿಚೀಲ, ಪ್ಲಾಸ್ಟಿಕ್ ಚೀಲಗಳು ಕಂಡುಬರುತ್ತಿರಲಿಲ್ಲ. ಆದ್ದರಿಂದ ಹಗೇವುಗಳನ್ನು ಮಾಡಿಕೊಂಡಿದ್ದರು. ಮನೆಯ ಒಳಗಡೆ ಅಡಿಗೆಕೋಣೆ

ಮತ್ತು ಸಾಮಾನುಗಳನ್ನಿಡಲು ಪ್ರತ್ಯೇಕ ವಿಭಾಗಗಳಿರುತ್ತವೆ. ಹಟ್ಟಿಯ ಹೊರಗಡೆ ಅಥವಾ ಪಕ್ಕದಲ್ಲಿ 'ಋತುಮತಿ ಗುಡ್ಲು' ಮತ್ತು 'ಹೆರಿಗೆ ಗುಡ್ಲು' ಎಂದು ಪ್ರತ್ಯೇಕ ಗುಡಿಸಲುಗಳನ್ನು ನಿರ್ಮಿಸುತ್ತಿದ್ದರು. ಮತ್ತು ಕುರಿಹಟ್ಟಿ, ದನದ ಹಟ್ಟಿಗಳನ್ನು ಸಹ ನಿರ್ಮಿಸಿಕೊಳ್ಳುತ್ತಿದ್ದರು.

"ಇವರು ಅಡುಗೆಗಾಗಿ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಮಲಗಿಕೊಳ್ಳಲು 'ಬಂದರಿಕೆ' ಸೊಪ್ಪಿನಿಂದ ತಯಾರು ಮಾಡಲ್ಪಟ್ಟ ಸುಮಾರು ೫-೬ ಅಡಿ ಅಗಲದ 'ದಪ್ಪ' ಹಾಸಿಗೆಯನ್ನು ಉಪಯೋಗಿಸುತ್ತಿದ್ದರು." ಇಂದು ನಾಗರೀಕ ಪ್ರಭಾವದಿಂದಾಗಿ ಗುಡಿಸಲುಗಳನ್ನು ಇಟ್ಟಿಗೆ, ಕಲ್ಲು, ಕಾಂಕ್ರೇಟಿನ ಮನೆಗಳಾಗಿ ಪರಿವರ್ತನೆಗೊಂಡಿದ್ದಾರೆ. ಈಗ ಬುನಾದಿಯನ್ನು ತೋಡಿಸಿ, ಕಲ್ಲುಗಳನ್ನು ಉಪಯೋಗಿಸಿ ಸಿಮೆಂಟಿನಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮನೆಯನ್ನು ಕಟ್ಟುವಾಗ ಸ್ವಾಮಿಗಳಿಂದ ವಾಸ್ತು ಕೇಳಿಸುವ ಪದ್ಧತಿ ರೂಢಿಸಿಕೊಂಡಿದ್ದಾರೆ. ಕೆಲವೊಂದು ಪ್ರದೇಶದಲ್ಲಿ ತಲೆಮಾರಿನ ವಸತಿಗಳು ಕಂಡುಬರುತ್ತವೆ. ಪ್ರತ್ಯೇಕ ಹಟ್ಟಿಗಳು ಎಲ್ಲೂ ಕಂಡುಬರುವುದಿಲ್ಲ. ಒಂದೆ ಮನೆಯನ್ನು ತಾವೇ ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಇಂದು ಮನೆ ಕಟ್ಟಿಕೊಳ್ಳುವಾಗ ಪರಾವಲಂಬಿಗಳಾಗಿದ್ದಾರೆ. ವಡ್ಡರು, ಉಪ್ಪಾರರು, ಕಂಬಾರರು, ಬಡಗಿಗಳು, ಸುಣ್ಣಗಾರರ ಸಹಾಯವನ್ನು ಇಂದು ಪಡೆದುಕೊಳ್ಳುತ್ತಿದ್ದಾರೆ. ಧಾನ್ಯಗಳನ್ನು ಸಂಗ್ರಹಿಸಲು ಗೋಣಿಚೀಲ, ಪ್ಲಾಸ್ಟಿಕ್ ಚೀಲಗಳನ್ನು ಉಪಯೋಗಿಸುತ್ತಿದ್ದಾರೆ. ವಸತಿ ವ್ಯವಸ್ಥೆಯಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ.

ವೇಷ ಭೂಷಣ

ಅಡ್ಲಟ್ಟಿ ಮ್ಯಾಸಬೇಡರು ಮೊದಲು ಕಾಡಿನಲ್ಲಿ ವಾಸಿಸುತ್ತಿದ್ದರಿಂದ ಸರಳ ಜೀವನ ನಡೆಸುತ್ತಿದ್ದರು. ಹಿಂದೆ ಈ ಸಮುದಾಯದ ಗಂಡುಮಕ್ಕಳು 'ಚಲ್ಲಣ' ತೊಡುತ್ತಿದ್ದರು. ಇದೇ ಅವರಿಗೆ ಮುಖ್ಯ ಉಡಿಗೆಯಾಗಿತ್ತು. ಚಲ್ಲಣವು ಸೊಂಟದಿಂದ ಮೊಳಕಾಲಿನ ಸ್ವಲ್ಪ ಕೆಳಭಾಗದಲ್ಲಿರುತ್ತಿತ್ತು. ಚಲ್ಲಣವನ್ನು ದಪ್ಪನೆಯ ಲಾಡಿಯಿಂದ ಸೊಂಟಕ್ಕೆ ಭದ್ರವಾಗಿ ಕಟ್ಟಿಕೊಳ್ಳುತ್ತಿದ್ದರು. ಮೈಗೆ ಮೋಟಂಗಿಯನ್ನು ತೊಡುತ್ತಿದ್ದರು. ಅವು ಈಗಿನ ಬನಿಯನ್ ರೀತಿಯಲ್ಲಿ ಇರುತ್ತಿದ್ದವು. ಮೋಟಂಗಿಯನ್ನು 'ಅಚ್ಚಡ' ಎಂಬ ದಪ್ಪನೆಯ ಬಟ್ಟೆಯಿಂದ ಹೊಲಿಸಿಕೊಂಡು ತೊಡುತ್ತಿದ್ದರು.

ಹಿಂದೆ ಈ ಸಮುದಾಯವರು ತಲೆಕೂದಲನ್ನು ಅರ್ಧ ಚಂದ್ರಕಾರವಾಗಿ ಕತ್ತರಿಸಿಕೊಳ್ಳುತ್ತಿದ್ದರು. ಇನ್ನೂ ಕೆಲವು ಜನ 'ಗಿರ್ಜ' ಎಂದು ತನ್ನ ಮುಂಭಾಗದ ಕೂದಲನ್ನು ಹಿಂದಕ್ಕೆ ಬಾಚಿ ಹೆಣ್ಣುಮಕ್ಕಳ ಜಡೆ ಹಾಕುವ ರೀತಿಯಲ್ಲಿ ಗಿರ್ಜವನ್ನು ಹಾಕಿಕೊಳ್ಳುತ್ತಿದ್ದರು. ಕೆಲವರು ನೆತ್ತಿಯ ಮೇಲೆ ಸ್ವಲ್ಪ ಜುಟ್ಟುರೀತಿಯಲ್ಲಿ ಕೂದಲನ್ನು ಬಿಟ್ಟು ಸುತ್ತಲೂ ಕತ್ತರಿಸಿಕೊಳ್ಳುತ್ತಿದ್ದರು. ಇದು ಗಂಡುಮಕ್ಕಳ ವೈಶಿಷ್ಟ್ಯವಾಗಿದೆ.

ಹೆಣ್ಣುಮಕ್ಕಳು ೧೬ ಮೊಳದ ಸೀರೆ ತೊಡುತಿದ್ದರು. ರೊಟ್ಟಿಯಂಚಿನ ಎರಡಂಚು, ಮೂರಂಚು, ನಾಲ್ಕಂಚು ಸೀರೆಯನ್ನು ತೊಡುತ್ತಿದ್ದರು. ಸೀರೆಯನ್ನು ಒಂದು ಕೈಯಿಂದ ಎತ್ತಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಅಷ್ಟು ದಪ್ಪನೆಯ ಸೀರೆಯನ್ನು ತೊಟ್ಟು ನೀರನ್ನು ಹೊತ್ತುಕೊಂಡು ಬರುವಾಗ ಈ ಸ್ತ್ರೀಯರು ಎಷ್ಟು ಶಕ್ತಿವಂತರು ಎಂಬುದು ನಮಗೆ ಗೊತ್ತಾಗುತ್ತದೆ. ಮನೆಗೆ ಯಾರಾದರು ಬಂದರೆ ತಲೆತುಂಬ ಸೀರೆಯ ಸೆರಗನ್ನು ಹೊದ್ದುಕೊಂಡು ತಮ್ಮ ಎರಡು ಕೈಗಳಿಂದ ನೀರನ್ನು ಕೊಡುತ್ತಾರೆ. ಹೆಣ್ಣುಮಕ್ಕಳೆಲ್ಲರೂ ತಮ್ಮ ಕಾಲಿನ ಹಿಮ್ಮಡಿ ಕಾಣದ ಹಾಗೆ ಸೀರೆಯನ್ನು ತೊಡುತ್ತಿದ್ದರು. ಇದು ಈ ಸಮುದಾಯದ ಮಹಿಳೆಯರ ಸೌಜನ್ಯತೆಯನ್ನು ತೋರಿಸುತ್ತದೆ. ಸೌಜನ್ಯತೆಯಿಂದ ಇರದ ಹೆಣ್ಣುಮಕ್ಕಳನ್ನು ಮನೆಯ ಯಜಮಾನರು ತಮ್ಮ ಮಕ್ಕಳಾಗಿರಲಿ, ಸೊಸೆಯಾಗಿರಲಿ, ಯಾರೇ ಆದರೂ ಅವರನ್ನು ಕರೆದು "ನೀನು ಹೆಣ್ಣುಮಗಳು ಸೌಜನ್ಯತೆಯಿಂದ ಇರಬೇಕು. ನಮ್ಮ ಮನೆಯ ಗೌರವದ ಪ್ರಶ್ನೆ" ಎಂದು ಬುದ್ಧಿವಾದ ಹೇಳುತ್ತಾರೆ. ಹಿಂದೆ ಹೆಣ್ಣುಮಕ್ಕಳು ಹಿತ್ತಾಳೆ ಓಲೆಯನ್ನು ಧರಿಸುತ್ತಿದ್ದರು. ಕೈಗಳಿಗೆ ಗಾಜಿನ ಬಳೆಗಳನ್ನು ತೊಡುತ್ತಿದ್ದರು. ಇತ್ತೀಚೆಗೆ ನಾಗರೀಕ ಸಂಪರ್ಕದಿಂದ ತಮ್ಮ ವೇಷ-ಭೂಷಣದಲ್ಲಿ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಮೇಲ್ವರ್ಗದವರು ಉಪಯೋಗಿಸುವಂತಹ ಬಟ್ಟೆಗಳು, ಆಭರಣಗಳು, ಸುಗಂಧ ತೈಲಗಳು ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದಾರೆ. ಹಿಂದೆ ಚಲ್ಲಣ ಮತ್ತು ಮೋಟಂಗಿಯನ್ನು ತೊಡುತ್ತಿದ್ದ ಈ ಸಮುದಾಯದ ಗಂಡಸರು ಇಂದು ಪ್ಯಾಂಟ್, ಶರ್ಟ್ಸ್, ಪಂಚೆ, ಲುಂಗಿಗಳನ್ನು ತೊಡುತ್ತಿದ್ದಾರೆ. ತಮ್ಮ ತಲೆಕೂದಲನ್ನು ಅನೇಕ ಹೊಸ ಸ್ಟೈಲ್‌ನಲ್ಲಿ ಕತ್ತರಿಸಿಕೊಳ್ಳುತ್ತಿದ್ದಾರೆ.

"ಹಳೇ ಮರ ಹೊಸ ಚಿಗುರು" ಎಂಬಂತೆ ತಮ್ಮ ವೇಷಭೂಷಣವನ್ನು ರೂಪಿಸಿಕೊಂಡಿದ್ದಾರೆ. ವಿದ್ಯಾವಂತ ಯುವಕ-ಯುವತಿಯರು ಆಧುನಿಕ ವೇಷ-ಭೂಷಣಗಳಿಗೆ ಮಾರುಹೋಗಿದ್ದಾರೆ. ಹಿಂದೆ ಇದ್ದಂತಹ ವೇಷಭೂಷಣದ ಮೇಲಿನ ಕಟ್ಟುಪಾಡುಗಳು ಸಡಿಲಗೊಂಡಿದ್ದಾವೆ. ಆದರೆ ಹಿಂದಿನ ತಲೆಮಾರಿನ ಜನ ಮಾತ್ರ ತಮ್ಮ ವೇಷ-ಭೂಷಣದಲ್ಲಿ ಬದಲಾವಣೆಯನ್ನು ಕಂಡುಕೊಳ್ಳದೆ ಹಾಗೆ ಇದ್ದಾರೆ.

ಆಹಾರ ಪದ್ಧತಿ

ಅಡ್ಲಟ್ಟಿ ಮ್ಯಾಸಬೇಡರು ಮೂಲತಃ ಕಾಡುವಾಸಿಗಳು ಬೇಟೆಯಾಡುವುದು ಇವರ ಮುಖ್ಯ ವೃತ್ತಿಯಾಗಿತ್ತು. ಕಾಡಿನಲ್ಲಿಯ ಪ್ರಾಣಿ - ಪಕ್ಷಿಗಳನ್ನು ಬೇಟೆಯಾಡಿ ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಮತ್ತು ಅರಣ್ಯದಲ್ಲಿ ಸಿಗುವ ಗೆಡ್ಡೆ - ಗೆಣಸು ಕೆಲವೊಂದು ಸಸ್ಯಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದರು.

ನಂತರ ಇವರು ತಮ್ಮ ಜೀವನೋಪಾಯಕ್ಕೆ ಪಶುಸಂಗೋಪನೆಯಲ್ಲಿ ತೊಡಗಿಕೊಂಡರು. ಆದ್ದರಿಂದ ಇವರನ್ನು ಮೇಷ ಜನಾಂಗ, ಮ್ಯಾಸ ಜನಾಂಗ ಎಂದು ಕರೆಯುತ್ತಾರೆ. ಪಶುಪಾಲನೆಯಿಂದ ತಮ್ಮ ಬದುಕಿನಲ್ಲಿ ಬದಲಾವಣೆ ಕಂಡುಕೊಂಡಂತೆ, ಆಹಾರ ಪದ್ಧತಿಯಲ್ಲಿಯೂ ಬದಲಾವಣೆ ಮಾಡಿಕೊಂಡರು. ಅರಣ್ಯದಲ್ಲಿ ಬೇಟೆಯಾಡಿ ಜೀವನವನ್ನು ನಡೆಸುವುದನ್ನು ಬಿಟ್ಟು, ತಾವೇ ಸಾಕಿದ ಪಶುಗಳಿಂದ ಭೂಮಿಯನ್ನು ಸಾಗುವಳಿ ಮಾಡಿ ಬೆಳೆಗಳನ್ನು ಬೆಳೆದು ದಿನನಿತ್ಯದ ಆಹಾರಕ್ಕಾಗಿ ಬಳಸತೊಡಗಿದರು. ಇಂದೂ ಸಹ ವ್ಯವಸಾಯ, ಪಶುಸಂಗೋಪನೆಯನ್ನು ತಮ್ಮ ಮೂಲವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ಇವರು ಹೆಚ್ಚಾಗಿ ರಾಗಿ, ಜೋಳ, ಸಜ್ಜೆ, ಭತ್ತ, ಹುರುಳಿ, ತೊಗರಿ, ಶೇಂಗಾ ಇವುಗಳನ್ನು ಬೆಳೆದು ದಿನನಿತ್ಯದ ಊಟಕ್ಕಾಗಿ ಬಳಸುತ್ತಾರೆ. ಹಬ್ಬ, ಹರಿದಿನ, ಕೆಲ ಆಚರಣೆಗಳಲ್ಲಿ, ಮದುವೆ ಮಂಗಲ ಕಾರ್ಯಗಳಲ್ಲಿ ಪಾಯಾಸ ಅಥವಾ ಸಿಹಿಊಟ ಅಡುಗೆ ಮಾಡುತ್ತಾರೆ. ಗುಗ್ಗರಿ ಹಬ್ಬದ ದಿನ ಹುರುಳಿ ಗುಗ್ಗರಿ ಮತ್ತು ಹುರುಳಿ ಸಾರು, ಅನ್ನ ಮಾಡಿ ಓಬಳದೇವರಿಗೆ ಎಡೆಕೊಟ್ಟು ನಂತರ ಊಟ ಮಾಡುತ್ತಾರೆ.

ಕೋಳಿ ಮತ್ತು ಹಂದಿಯನ್ನು ತಿನ್ನದೇ ಇರುವುದು ಇವರ ವೈಶಿಷ್ಟ್ಯ. ಕೋಳಿಯನ್ನಂತೂ ಇವರು ತಮ್ಮ ಶತ್ರುವಿನಂತೆ ಕಾಣುತ್ತಾರೆ. ಅದು ಇರುವ ಕಡೆ ಇವರು ವಾಸಮಾಡುವುದಿಲ್ಲ.ಆಕಸ್ಮಿಕ ಕೋಳಿಯು ಹಟ್ಟಿಯೊಳಗೆ ನುಗ್ಗಿದರೆ ಅದನ್ನು ತಕ್ಷಣ ಹೊಡೆದು ಕಟ್ಟಿಗೆಯಿಂದ ದೂರ ಎಸೆಯುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಕುರಿ, ಮೇಕೆ, ಮೊಲದ ಮಾಂಸವನ್ನು ಅಡಿಗೆ ಮಾಡುತ್ತಾರೆ. ಉಳಿದ ಸಂದರ್ಭದಲ್ಲಿ ಸಿಹಿ ಅಡುಗೆ ಮಾಡಿ ಊಟಮಾಡುತ್ತಾರೆ.

ನ್ಯಾಯ ಪದ್ಧತಿ

ಅಡ್ಲಟ್ಟಿ ಮ್ಯಾಸಬೇಡರು ತಮ್ಮದೇ ಆದ ಸಾಮಾಜಿಕ ರಚನೆಯನ್ನು ಹೊಂದಿದ್ದಾರೆ. ಅವರು ನ್ಯಾಯಕಟ್ಟೆಯ ನ್ಯಾಯಧೀಶರು ಹೇಳಿದಂತೆ ನಡೆಯುತ್ತಾರೆ. ತಮ್ಮ ಹಟ್ಟಿಯಲ್ಲಿ ಆಂತರಿಕ ಮತ್ತು ಬಾಹ್ಯ ವಿಷಯಗಳನ್ನು ಕುರಿತು ಆಗಾಗ್ಗೆ ಚರ್ಚೆ ನಡೆಸುತ್ತಾರೆ. ಸಾಮಾಜಿಕ ನಿಯಮಗಳ ಉಲ್ಲಂಘನೆ ಮಾಡಿದ ವ್ಯಕ್ತಿ ಇಲ್ಲವೆ ಕುಟುಂಬಕ್ಕೆ ಉಗ್ರವಾಗಿ ಶಿಕ್ಷಿಸಿ ದಂಡ ವಿಧಿಸುವರು.

ಅಡ್ಲಟ್ಟಿ ಮ್ಯಾಸಬೇಡರು ತಮ್ಮ ನಡುವಣ ಯಾವುದೇ ರೀತಿಯ ಒಳಜಗಳ, ವಾಜ್ಯ, ನ್ಯಾಯಗಳನ್ನು ಇತರೆ ಬುಡಕಟ್ಟುಗಳಂತೆ ಅವರೇ ತೀರ್ಮಾನಿಸಿಕೊಳ್ಳುತ್ತಾರೆ. ತಮ್ಮ ಬುಡಕಟ್ಟು ಜನಾಂಗದವರು ಯಾರೇ ಆಗಲಿ ಅವರಿಗೆ ಒಗ್ಗಟ್ಟು ಅತ್ಯವಶ್ಯಕವಾಗಿತ್ತು. ಇವರ ಮನೆ ಮತ್ತು ಕುಲದಲ್ಲಿ ಜಗಳ ಅಥವಾ ವಾಜ್ಯಗಳು ಜರುಗಿದರೆ ಅದು ಗುಂಪಿನಿಂದ ಹೊರಗೆ ಹೋಗುವುವಂತಿಲ್ಲ. ಅಲ್ಲಿಯೇ ತೀರ್ಮಾನವಾಗಿ ಬಿಡಬೇಕು. ಎಷ್ಟೇ ದೊಡ್ಡ ಜಗಳ ವಾಜ್ಯಗಳಾದರೂ ಸಹ ಇತರ ಸ್ಥಳಗಳಲ್ಲಿರುವ ತಮ್ಮ ಕುಲದ ಯಜಮಾನರುಗಳಿಂದ ಆ ಜಗಳವನ್ನು ತೀರ್ಮಾನಿಸುತ್ತಾರೆ. ಈ ರೀತಿಯ ನ್ಯಾಯವ್ಯವಸ್ಥೆ ಮತ್ತು ಹೀಗೆ ಬಿಗಿ ಭದ್ರತೆ ಇದ್ದುದರಿಂದಲೇ ಇಂದಿಗೂ ಈ ಬುಡಕಟ್ಟು ಸಮುದಾಯದಲ್ಲಿ ಯಾವುದೇ ರೀತಿಯ ಜಗಳ, ಕದನ, ವೈಮನಸ್ಸುಗಳಿಗೆ ಅವಕಾಶ ಕೊಡದೆ ಸೌಹಾರ್ದತೆಯಿಂದ ಜೀವನವನ್ನು ನಡೆಸುತ್ತಿದ್ದಾರೆ.

ಹಿಂದೆ ಇವರಲ್ಲಿ ಯಾರಾದರೂ ಅಪರಾಧ ಮಾಡಿದರೆ ದಂಡವನ್ನು ವಿಧಿಸುತ್ತಿದ್ದರು. ಹೆಣ್ಣುಮಕ್ಕಳು ಮದುವೆಯಾಗಿ ತಮ್ಮ ಗಂಡನಮನೆಗೆ ಹೋಗದಿದ್ದರೆ ಹಟ್ಟಿಯ ಹಿರಿಯರೆಲ್ಲ ಸೇರಿಕೊಂಡು ನ್ಯಾಯ ತೀರ್ಮಾನ ಮಾಡಿ ಅವಳನ್ನು ಗಂಡನ ಮನೆಗೆ ಕಳುಹಿಸುವರು. ಅವಳು ನ್ಯಾಯತೀರ್ಮಾನಕ್ಕೆ ಬದ್ಧಳಾಗದೆ, ಗಂಡನಮನೆಗೆ ಹೋಗದಿದ್ದರೆ, ಕೈಕಾಲುಗಳನ್ನು ಕಟ್ಟಿ ಎತ್ತಿನ ಗಾಡಿಯೊಳಗೆ ಹಾಕಿ ಗಂಡನ ಮನೆಗೆ ಕಳುಹಿಸುತ್ತಿದ್ದರಂತೆ.

ಅವಳ ಗಂಡನ ತಪ್ಪಿದ್ದರೆ ಅವನಿಗೆ ದಂಡವನ್ನು ಹಾಕಿ ಅವರಿಬ್ಬರನ್ನು ಒಂದುಗೂಡಿಸುತ್ತಾರೆ. ಈ ಸಮುದಾಯದಲ್ಲಿಯ ಅಪರಾಧಿಗಳಿಗೆ ಕಟ್ಟೆಮನೆ ಅಥವಾ ಹಿರಿಯರ ಭಯವಿಲ್ಲದಿದ್ದರೂ ದೇವರಿಗೆ ಭಯ ಪಡುತ್ತಾರೆ. ದೇವರಲ್ಲಿ ಭಯ - ಭಕ್ತಿಯನ್ನು ಹೊಂದಿದ್ದಾರೆ.

ಇಂದಿಗೂ ಈ ಬುಡಕಟ್ಟಿನಲ್ಲಿ ಯಾವುದೇ ಹಬ್ಬ, ಜಾತ್ರೆಗಳು ನಡೆಯಬೇಕಾದರೆ ನೇಮಿಸಲ್ಪಟ್ಟ ಹಿರಿಯರ ಮುಖಾಂತರ ಅಥವಾ ಹಿರಿಯ ಮುಖಂಡರ ಮುಂದಾಳತ್ವದಲ್ಲಿ ನಡೆಯುತ್ತದೆ. ಜಾತ್ರೆ ಹಬ್ಬಗಳಿಗೆ ತಗಲುವ ವೆಚ್ಚವನ್ನು ಅವರ ಸಮುದಾಯದಲ್ಲಿ ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ ಹಟ್ಟಿ ಮುಖಂಡರು ಎಷ್ಟು ಕೊಡಬೇಕೆಂದು ತೀರ್ಮಾನಿಸುತ್ತಾರೋ ಅಷ್ಟನ್ನು ಪ್ರತಿಯೊಂದು ಕುಟುಂಬದವರು ಕೊಡಬೇಕು.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಹೆಣ್ಣುಮಕ್ಕಳು ತನ್ನ ಕುಲದಿಂದ ಬೇರೆ ಜಾತಿಯವರನ್ನು ವಿವಾಹವಾದರೆ ಅವಳನ್ನು ಅವರ ಕುಲದಿಂದ ಹೊರಗೆ ಹಾಕುತ್ತಾರೆ. ಒಂದುವೇಳೆ ಅವರ ಕುಲದಲ್ಲಿಯೇ ಪ್ರೀತಿಸಿ ಮದುವೆಯಾದರೆ ಅವಳಿಗೆ ಯಾವುದೇ ದಂಡವಿಧಿಸುವುದಿಲ್ಲ. ನ್ಯಾಯಪಂಚಾಯತಿಯಲ್ಲಿ ತೀರ್ಮಾನಿಸಿ ಅವರನ್ನು ತಮ್ಮ ಕುಲದಲ್ಲಿ ಸೇರಿಸಿಕೊಳ್ಳುತ್ತಾರೆ.

ಹಿಂದೆ ಈ ಸಮುದಾಯದಲ್ಲಿ ಯಾರಾದರೂ ಕೋಳಿತಿಂದರೆ, ಮದ್ಯಪಾನ ಮಾಡಿದರೆ ದಂಡಹಾಕುವ ಪದ್ಧತಿ ಇತ್ತು. ಆದ್ದರಿಂದ ಇಂದಿಗೂ ಇವರು ಕೋಳಿ ಮತ್ತು ಮದ್ಯಪಾನವನ್ನು ಸೇವಿಸುವುದಿಲ್ಲ.

ಮ್ಯಾಸನಾಯಕ ಸಮುದಾಯಗಳು ಇಂದು ಕೋಳಿ ಮತ್ತು ಮದ್ಯಪಾನ ಸೇವಿಸುತ್ತಾರೆ. ಅವರು ಆಹಾರ, ಉಡುಪು, ನ್ಯಾಯ ಪದ್ಧತಿಯಲ್ಲಿ ಬದಲಾವಣೆ ಹೊಂದಿದ್ದಾರೆ. ಆದರೆ ಅಡ್ಲಟ್ಟಿ ಮ್ಯಾಸಬೇಡರು ಇಂದಿಗೂ ತಮ್ಮ ರೂಢಿ-ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ.

ಆರ್ಥಿಕ ವ್ಯವಸ್ಥೆ ಅಥವಾ ವೃತ್ತಿ ಜೀವನ

"ಹಿಂದಿನ ಕಾಲದಲ್ಲಿ ಪಟ್ಟಣ, ನಗರ, ಗ್ರಾಮಗಳು ಮಧ್ಯಮವರ್ಗದ ಜೀವನಕ್ರಮದ ಲಕ್ಷಣಗಳನ್ನು ಹೊಂದಿದ್ದಾರೆ. ಅರಣ್ಯವು ಕೆಳವರ್ಗ ಅಥವಾ ಕೆಳದರ್ಜೆಯ ಬುಡಕಟ್ಟುಗಳ ಬದುಕಿನ ಆವಾಸ್ಥಾನವಾಗಿರುತಿತ್ತು. ಅರಣ್ಯದಲ್ಲಿ ಒಂದುಕಡೆ ಯಜ್ಞ - ಯಾಗಾದಿಗಳನ್ನು ಮಾಡಿಕೊಂಡು ಸಾಹಿತ್ಯ, ಸಂಸ್ಕೃತಿಯ ನಿರ್ಮಾತೃಗಳಾಗಿ ಋಷಿಗಳು ವಾಸವಾಗಿದ್ದರೆ ಅದೇ ಸ್ಥಳದಲ್ಲಿ ಮತ್ತೊಂದು ಕಡೆ ಬೇಟೆಯಾಡಿಕೊಂಡು ಅದನ್ನೇ ಆಹಾರವನ್ನಾಗಿಸಿಕೊಂಡು ಕಲೆ, ಸಾಹಿತ್ಯ, ಸಂಸ್ಕೃತಿಯ ಅರಿವೇ ಇಲ್ಲದ ಬದುಕುತ್ತಿದ್ದ ಈ ಮ್ಯಾಸಬೇಡರು ಬದುಕುತಿದ್ದರು."[1] ಇವರು ಬೇಟೆಗಾರಿಕೆಯಲ್ಲಿ ಬಹಳ ನಿಷ್ಣಾತರಾಗಿದ್ದರು. ನಂತರ ತಮ್ಮ ಜೀವನದ ಆರ್ಥಿಕ ವ್ಯವಸ್ಥೆಯನ್ನೂ ರೂಪಿಸಿಕೊಂಡು ಬೇರೆ ಜಾತಿ, ವರ್ಗದವರ ಜೊತೆಯಲ್ಲಿ ಎಲ್ಲಾ ರಂಗದಲ್ಲಿ ಸ್ಪರ್ಧಿಸಲು

ಹೊರಟಿದ್ದಾರೆ. ಮತ್ತು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಹಿಂದಿನಿಂದಲೂ ಅನೇಕ ಬಗೆಯ ವೃತ್ತಿಗಳನ್ನು ಕೈಗೊಂಡಿದ್ದಾರೆ. ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಬೇಟೆ, ಪಶುಪಾಲನೆ, ಕೃಷಿ, ವ್ಯಾಪಾರ ವೃತ್ತಿಗಳು ಕಂಡುಬರುತ್ತವೆ.

ಬೇಟೆ

ಹಿಂದೆ ಅಡ್ಲಟ್ಟಿ ಮ್ಯಾಸಬೇಡರು ಕಾಡು - ಮೇಡುಗಳಲ್ಲಿ, ಬೆಟ್ಟ - ಗುಡ್ಡಗಳಲ್ಲಿ ಸಂಚರಿಸುತ್ತ, ಬೇಟೆಯಾಡುತ್ತ ಮಾಂಸವನ್ನು ಆಹಾರಕ್ಕೆ, ಚರ್ಮವನ್ನು ಉಡುಪಿಗೆ ಉಪಯೋಗಿಸುತ್ತಿದ್ದರು. ಬೇಟೆಯ ಸಂದರ್ಭದಲ್ಲಿ ಇವರು ಬಳಸುವ ಆಯುಧಗಳೆಂದರೆ ಕತ್ತಿ, ಗುರಾಣಿ, ಭರ್ಚಿ ಮುಂತಾದವುಗಳು. ಭಯಾನಕ ಪ್ರಾಣಿಗಳನ್ನು ಬೇಟೆಯಾಡುವಾಗ ಪೊದೆಗಳಲ್ಲಿ ಅವಿತುಕೊಂಡು ಗಿಡಮರಗಳ ಎಲೆಗಳಿಂದ ತಮ್ಮ ಮುಖವನ್ನು ಮುಚ್ಚಿಕೊಳ್ಳುತ್ತಿದ್ದರು. ಬಲೆಯನ್ನು ಹೆಣೆದು ಅದರಿಂದ ಪ್ರಾಣಿಗಳನ್ನು ಸೆರೆಹಿಡಿಯುತ್ತಿದ್ದರು. ಇವರ ಮನೆಗಳಲ್ಲಿ ಇಂದಿಗೂ ಉಪಯೋಗಿಸುತ್ತಿದ್ದ ಆಯುಧಗಳನ್ನು ಕಾಣುತ್ತೇವೆ. ಅಡ್ಲಟ್ಟಿ ಸಮುದಾಯದವರಾದ ವಡೇರಹಳ್ಳಿ ಕೊಂಗೋಬನಾಯಕ ಅವರ ಮನೆಯಲ್ಲಿ ಬೇಟೆಯಾಡುವ ಭರ್ಚಿ, ಗಂಡುಗೊಡಲಿ ಮತ್ತು ಕತ್ತಿಗಳನ್ನು ಕಾಣಬಹುದು.

"ಈ ಸಮುದಾಯದ ಜನ ಕಷ್ಟ ಜೀವಿಗಳಾಗಿದ್ದರು. ಬಿಲ್ಲು, ಬಾಣ, ಭರ್ಚಿಗಳು ಯಾವಾಗಲೂ ಇವರ ಕೈಯಲ್ಲಿ ಇರುತ್ತಿದ್ದ ಆಯುಧಗಳಾಗಿದ್ದವು. ಹೊಟ್ಟೆ ಹೊರೆಯಲು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು" ಎಂದು ಶ್ರೀ.ಜಿ.ಎಸ್.ಘುರ್ಯೆಯವರು Caste and Clats in India ಎಂಬ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.[೫]

ಬೇಟೆಯಲ್ಲಿ ಇವರ ಸಾಹಸಪ್ರವೃತ್ತಿ ಕಂಡುಬರುವುದರ ಜೊತೆಗೆ ಇವರ ಜೀವನೋಪಾಯವು ನಡೆಯುತಿತ್ತು. ಈಗ ಕಾಡುಗಳು ನಾಶವಾಗಿದ್ದರಿಂದ ಮತ್ತು ಬೇಟೆಯನ್ನು ಬಿಟ್ಟು ಪಶುಪಾಲನೆ ಕಡೆಗೆ ಮುಖಮಾಡಿದ್ದಾರೆ. ತಮ್ಮ ಹಳೆಯ ಕುಲಕಸುಬು ನೆನಪು ಮಾಡಿಕೊಳ್ಳಲು ವರ್ಷಕ್ಕೊಮ್ಮೆ ಯುಗಾದಿಯ ಹಬ್ಬದ ದಿವಸ ಬೇಟೆಯಾಡಿ ತಂದ ಪ್ರಾಣಿಗಳನ್ನು ಊರಲೆಲ್ಲ ಮೆರವಣಿಗೆ ಮಾಡಿ ಇದನ್ನು ತಿನ್ನವವರಿಗೆ ಕೊಡುತ್ತಾರೆ. ಅವರು ಮಾತ್ರ ತಿನ್ನುವುದಿಲ್ಲ. ಇಂದು ಈ ಸಮುದಾಯವು ಅರಣ್ಯದಲ್ಲಿ ನೆಲೆಸಿ ಬೇಟೆಯಾಡುವುದನ್ನು ಬಿಟ್ಟು, ಬಯಲು ಪ್ರದೇಶ ಮತ್ತು ನದಿ ತೀರಗಳಲ್ಲಿ ಪಶುಸಂಗೋಪನೆ ಮತ್ತು ಕೃಷಿಯನ್ನು ಮಾಡಿಕೊಂಡು ಜೀವಿಸುತ್ತಿದ್ದಾರೆ. ಇವರನ್ನು ಇಂದು ಕೃಷಿಕರು ಮತ್ತು ಪಶುಪಾಲಕರೆಂದು ಕರೆಯಲಾಗುತ್ತದೆ.

ಪಶುಪಾಲನೆ

ಇಲ್ಲಿಯವರೆಗೂ ಅಡ್ನಟ್ಟಿ ಮ್ಯಾಸಬೇಡರನ್ನು ಬೇಟೆಯ ಸಂಸ್ಕೃತಿಗೆ ಸೇರಿದವರೆಂದು ನಂಬಲಾಯಿತು. ಆದರೆ ಇತ್ತೀಚೆಗೆ ಕೈಗೊಂಡ ಅಧ್ಯಯನದಿಂದ ಮೂಲತಃ ಇವರಲ್ಲಿ ಬೇಟೆ ಪ್ರಧಾನವಾಗಿರಲಿಲ್ಲ. ಬೇರೆ ಬೇರೆ ಪ್ರಾಂತಗಳಲ್ಲಿರುವ ಬೇಡರು ಬಹುಮುಖಿಯಾದ ಭಿನ್ನ ಭಿನ್ನ ಸಂಸ್ಕೃತಿಗೆ ಸೇರಿರಬಹುದಾದರೂ ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ ಆಸುಪಾಸಿನಲ್ಲಿ ಬದುಕುತ್ತಿರುವ ಅಡ್ಲಟ್ಟಿ ಮ್ಯಾಸಬೇಡರಲ್ಲಿ ಬೇಟೆ ಪ್ರಮುಖ ವೃತ್ತಿಯಾಗಿರಲಿಲ್ಲ. ಇವರ ಮನೆಗಳಲ್ಲಿ ಪಶುಪಾಲನೆಗೆ ಬಳಸುವ ಉಪಕರಣಗಳನ್ನು ತಮ್ಮ ಹಬ್ಬ - ಹರಿದಿನಗಳಲ್ಲಿ ಪೂಜಿಸುತ್ತಾರೆ. ಹೀಗಾಗಿ ಅಡ್ಲಟ್ಟಿ ಮ್ಯಾಸಬೇಡರು ನಿರ್ವಿವಾದವಾಗಿ ಪಶುಪಾಲನೆ ಇವರ ಪ್ರಮುಖ ವೃತ್ತಿಯಾಗಿತ್ತು ಎಂದು ಹೇಳಬಹುದು.

''ಕಾಡಿನಲ್ಲಿ ವಾಸಿಸುತ್ತಿದ್ದ ಈ ಸಮುದಾಯವು ತಮ್ಮ ವಾಸಕ್ಕಾಗಿ ಗಿಡಮರಗಳ ಸೊಪ್ಪು ಸೆದೆಗಳಿಂದ ಹುಲ್ಲನ್ನು ತಂದು ಗುಡಿಸಲುಗಳನ್ನು ಹಾಕಿಕೊಂಡು, ಕಾಡಿನಲ್ಲಿ ದೊರೆಯುವ ಹಣ್ಣು - ಹಂಪಲ, ಗೆಡ್ಡೆ - ಗೆಣಸುಗಳನ್ನು ತಿನ್ನುತ್ತ ಬೇಟೆಯಾಡಿ ಪ್ರಾಣಿಗಳ ಮಾಂಸವನ್ನು ತಿನ್ನುತ್ತ ಜೀವನವನ್ನು ಸಾಗಿಸುತ್ತಿದ್ದ ಇವರು ಕಾಲಾನಂತರ ಪಶುಸಂಗೋಪನೆಯನ್ನು ವೃತ್ತಿಯಾಗಿ ಮಾಡಿಕೊಂಡರು. ಇವರು ದನಕರು, ಕುರಿ, ಮೇಕೆಗಳನ್ನು ಮೇಯಿಸುತ್ತ ಕಾಡಿನಲ್ಲಿ ಒಂದುಕಡೆ ನೆಲೆಯಾಗಿ ನಿಲ್ಲದೆ ಮೇವು-ನೀರು ಎಲ್ಲಿ ದೊರೆಯುತ್ತದೆಯೋ ಅಲ್ಲಿಗೆ ಹೋಗುತ್ತ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತ ಸಂಚಾರಿಗಳಾಗಿ ಜೀವನ ಮಾಡುತ್ತಿದ್ದರು.''[೬] ಅವರು ವಾಸಿಸುತ್ತಿದ್ದ ಸ್ಥಳಗಳಲ್ಲಿ ಪಶುಗಳ ರಕ್ಷಣೆಗಾಗಿ ಮತ್ತು ತಮ್ಮ ರಕ್ಷಣೆಗಾಗಿ ಮುಳ್ಳು ಬೇಲಿಯನ್ನು ಹಾಕಿಕೊಳ್ಳುತ್ತಿದ್ದರು.

ಹಂತ ಹಂತವಾಗಿ ಪಶುಸಂಗೋಪನೆಯಿಂದ ತಮ್ಮ ದಿನನಿತ್ಯದ ಆದಾಯ ಮೂಲಗಳನ್ನು ಕಂಡುಕೊಳ್ಳತೊಡಗಿದರು. ಎಮ್ಮೆ ಹಸುಗಳನ್ನು ಮೇಯಿಸಿ ಅವುಗಳ ಹಾಲುಮಾರಿ ಉಪಜೀವನಕ್ಕೆ ಬೇಕಾದಂತಹ ವಸ್ತುಗಳನ್ನು ಕೊಂಡು ಜೀವನ ಸಾಗಿಸುತ್ತಿದ್ದರು. ಇವರು ಮೊಸರು ಮಾಡಿಕೊಂಡು ರೊಟ್ಟಿ ಮತ್ತು ಮುದ್ದೆಯಲ್ಲಿ ಹಾಕಿಕೊಂಡು ತಿನ್ನುತ್ತಿದ್ದರು. ಆದರೆ ಇಂದು ಹಣಕ್ಕಾಗಿ ಹಾಲು-ಮೊಸರನ್ನು ಮಾರುತ್ತಿದ್ದಾರೆ. ಪಶುಗಳು ತಮ್ಮ ಸಂಪತ್ತಾಗಿರುವುದರಿಂದ ಅವುಗಳ ಬಗ್ಗೆ ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಇವರ ಪ್ರಮುಖ ಆಚರಣೆಯಾದ ಗುಗ್ಗರಿಹಬ್ಬದ ದಿನ ದೇವರ ಪೌಳಿಯಲ್ಲಿ ದೇವರೆತ್ತುಗಳ ಪೂಜೆ ನಡೆಯುತ್ತದೆ.

''ಇಂದು ಕುರಿಸಾಕಾಣಿಕೆ ಅಡ್ಲಟ್ಟಿ ಮ್ಯಾಸಬೇಡರ ವೃತ್ತಿಗಳಲ್ಲೊಂದಾಗಿದೆ. ಇವರು ಕುರಿಕಾಯುತ್ತಾರೆ. ಕುರಿಸಾಕಾಣಿಕೆ ಈ ಸಮುದಾಯಕ್ಕೆ ಪ್ರಮುಖ ಆರ್ಥಿಕ ವ್ಯವಸ್ಥೆಯಾಗಿದೆ. ಕುರುಬರಿಗೆ ಕುರಿಗಳ ತಪ್ಪಟ ಕತ್ತರಿಸಿಕೊಳ್ಳಲು ಕೊಟ್ಟು ಕರಿಕಂಬಳಿಯನ್ನು ಪಡೆದುಕೊಳ್ಳುತ್ತಾರೆ. ಹತ್ತು ಹದಿನೈದು ಕುರಿಗಳನ್ನು ಹೊಂದಿರುವವರು ಇರುವಂತೆಯೇ ನೂರಾರು ಕುರಿಗಳನ್ನು ಸಾಕಿರುವ ಹಲವಾರು ಮ್ಯಾಸಬೇಡರಿದ್ದಾರೆ. ಇಂದು

ಇವರ ಶ್ರೀಮಂತಿಕೆ ನಿರ್ಧಾರವಾಗುವುದು ಯಾರ ಯಾರ ಬಳಿ ಎಷ್ಟೆಷ್ಟು ಕುರಿಗಳಿವೆ ಎಂಬುದರ ಆಧಾರದ ಮೇಲೆ. ಕುರಿಗಳಿಗಾಗಿ ಪ್ರತ್ಯೇಕವಾದ ರೊಪ್ಪಗಳನ್ನು ಕಟ್ಟಿರುತ್ತಾರೆ. ಕುರಿಗಳನ್ನು ತೋಳಗಳಿಂದ, ಕಳ್ಳರಿಂದ ರಕ್ಷಿಸುವುದಕ್ಕಾಗಿ ನಾಯಿಗಳನ್ನು ಸಾಕುತ್ತಾರೆ.

ತಮ್ಮ ವಿಶೇಷ ಆಚರಣೆಗಳಿಗೆ ತಮ್ಮಲ್ಲೇ ಇದ್ದಂತಹ ಕುರಿಯನ್ನು 'ಬ್ಯಾಟೆ' ಕಡಿದು ಅದರ ಮಾಂಸವನ್ನು ಬೇಯಿಸಿಕೊಂಡು ತಿನ್ನುತ್ತಾರೆ. ಕುರಿಯನ್ನು ಹಣಕೊಟ್ಟು ಬೇರೆ ಕಡೆಯಿಂದ ಕೊಂಡುಕೊಳ್ಳುವುದಿಲ್ಲ ಇದರಿಂದ ಅವರಿಗೆ ಹಣ ಉಳಿತಾಯವಾಗುತ್ತದೆ. ಕುರಿಗಳನ್ನು ಮಾರಿ ಹಣವನ್ನು ಪಡೆದುಕೊಳ್ಳುತ್ತಾರೆ. ಆದರೆ ಇಂದು ದನ - ಕುರಿಸಾಕಾಣಿಕೆ ಪ್ರಮಾಣ ಕಡಿಮೆಯಾಗಿದೆ. ಇವರಿಗೆ ಇರುವ ದೊಡ್ಡ ಸಮಸ್ಯೆ ಎಂದರೆ ಅವುಗಳಿಗೆ ತಗಲುವ ರೋಗ, ವನಗಳಿಗಿಂತ ಕುರಿಗಳಿಗೆ ತಗಲುವ ರೋಗ ಹೆಚ್ಚು ಪರಿಣಾಮಕಾರಿಯಾದದ್ದು. ನೂರಾರು ಕುರಿಗಳು ಸಮೂಹಿಕವಾಗಿ ಸಾಯುವ ಸಂದರ್ಭ ಒದಗಿಬಿಡುತ್ತದೆ. ಹಿಂದೆ ಇದ್ದಂತಹ ಅರಣ್ಯ ಪ್ರದೇಶ ಈಗ ನಾಶವಾಗಿರುವುದರಿಂದ ಮತ್ತು ಈ ಸಮುದಾಯದ ಅನೇಕ ಕುಟುಂಬಗಳು ಕೃಷಿಗೆ ಹೊಂದಿಕೊಂಡಿದ್ದರಿಂದ ಪಶುಸಂಗೋಪನೆ ಪ್ರಮಾಣ ಮೊದಲಿಗಿಂತ ಪ್ರಸ್ತುತ ಕಡಿಮೆಯಾಗಿದೆ.

ಕೃಷಿ

ಬೇಟೆ, ಪಶುಪಾಲನೆ ಅನುಸರಿಸಿದ ಈ ಸಮುದಾಯವು ಇಂದು ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಪಶುಪಾಲಕರಾಗಿದ್ದ ಅಡ್ಲಟ್ಟಿ ಮ್ಯಾಸಬೇಡರು ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದರು. ನಂತರ ಪಶುಪಾಲನೆಯಲ್ಲಿನ ತೊಡಕುಗಳನ್ನು ಕೃಷಿಯಲ್ಲಿ ಪರಿಹರಿಸಿಕೊಂಡರು. ಪಶುಪಾಲಕರೇ ಕೃಷಿಕರಾದರು. ಕೃಷಿ ಭೂಮಿಯ ಹತ್ತಿರವೇ ತಮ್ಮ ನೆಲೆಗಳನ್ನು ಕಂಡುಕೊಂಡರು. ಮೂಲ ಸ್ವರೂಪದ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿದರು. ಇಂದು ಅವರು ನೆಲೆಯೂರಿದ ಸ್ಥಳಗಳೇ ಊರುಗಳಾಗಿವೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ಅಕ್ಕಪಕ್ಕದ ಊರುಗಳಾದ ಸಾಣೀಕೆರೆ, ಅಡ್ಲಟ್ಟಿ, ದೇವರಮರಿಕುಂಟೆ, ವಡೇರಹಳ್ಳಿ ಪ್ರದೇಶಗಳಲ್ಲಿ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯಗಳು ನೆಲೆಸಿವೆ. ಈ ಪ್ರದೇಶ ಫಲವತ್ತಾದ ಭೂಮಿಯಿಂದ ಕೂಡಿದೆ. ಇಲ್ಲಿ ಕೆರೆ-ಕಟ್ಟೆಗಳು ಅಧಿಕ ಸಂಖ್ಯೆಯಲ್ಲಿವೆ. ವೇದಾವತಿ, ಮಾರಿಕಣಿವೆ ನೀರು ಈ ಪ್ರದೇಶದಲ್ಲಿ ಹರಿಯುತ್ತಿದ್ದುದರಿಂದ ಪಶುಪಾಲನೆಯ ಜೊತೆಗೆ ಅಲೆಮಾರಿತನವನ್ನು ಬಿಟ್ಟು ಅಲ್ಲಿಯ ಭೂಮಿಯನ್ನು ಕೃಷಿಗೆ ಸಾಗುವಳಿ ಮಾಡಿಕೊಂಡು ನೆಲೆಯೂರಿ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಸಮುದಾಯವು ಬೆಳೆಯುವ ಆಹಾರ ಧಾನ್ಯಗಳೆಂದರೆ ರಾಗಿ, ಜೋಳ, ಸಜ್ಜೆ, ಭತ್ತ ವಾಣಿಜ್ಯ ಬೆಳೆಗಳೆಂದರೆ ಶೇಂಗಾ, ಗೋವಿನ ಜೋಳ, ತೋಟಗಾರಿಕೆಯಿಂದ ಬೆಳೆದದ್ದನ್ನು ಮಾರುಕಟ್ಟೆಗಳಿಗೆ ಸಾಗಿಸಿ ಮಾರಾಟಮಾಡಿ ಬಂದ ಹಣದಿಂದ ಜೀವನ ನಡೆಸುತ್ತಿದ್ದಾರೆ. ಆದರೆ ಈ ಸಮುದಾಯವು ಆಧುನಿಕ ಕೃಷಿವಿಧಾನ ಉಪಕರಣಗಳನ್ನು ಅಳವಡಿಸಿಕೊಳ್ಳದೆ ಹಳೆಯ ಮಾದರಿಯ ವ್ಯವಸಾಯ ಪದ್ಧತಿಯಿಂದ ಕೃಷಿ ಮಾಡುತ್ತಿದ್ದಾರೆ. ಇವರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಸಿಗದೆ ಮತ್ತು ಅತಿವೃಷ್ಠಿ ಅನಾವೃಷ್ಠಿಗಳಿಂದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಹೀಗಾಗಿ ಈ ಬುಡಕಟ್ಟು ಸಮುದಾಯ ಹಿಂದಿನ ಅಲೆಮಾರಿ ಜೀವನಕ್ಕೆ ಮತ್ತೆ ಮುಖಮಾಡುತ್ತಿದ್ದಾರೆ.

ನಮ್ಮ ಸರಕಾರವು ಈ ಬುಡಕಟ್ಟು ಸಮುದಾಯಗಳಿಗೆ ಆಧುನಿಕ ಯಂತ್ರೋಪಕರಣಗಳನ್ನು ಒದಗಿಸಿ, ಅವರು ಬೆಳೆದ ಬೆಳೆಗಳಿಗೆ ಒಳ್ಳೆಯ ಬೆಳೆ ಸಿಗುವಂತೆ ಮಾಡಬೇಕು. ಇವರು ಸಾಗುವಳಿ ಮಾಡುವಂತಹ ಭೂಮಿಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಆಗ ಮಾತ್ರ ಕೃಷಿಯಲ್ಲಿ ಅಧಿಕ ಬೆಳೆಗಳನ್ನು ಬೆಳೆದು ಈ ಬುಡಕಟ್ಟು ಸಮುದಾಯಗಳು ಅಭಿವೃದ್ಧಿ ಹೊಂದಲಿಕ್ಕೆ ಸಾಧ್ಯ.

ಇತರೇ ವೃತ್ತಿ

ಅಡ್ಡಟ್ಟಿ ಮ್ಯಾಸಬೇಡರ ಸಮುದಾಯವು ಇಂದು ಅನೇಕ ಉಪವೃತ್ತಿಗಳನ್ನು ಕೈಗೊಂಡಿದ್ದಾರೆ. ಇವರು ಮಾಡುವಂತಹ ಕೃಷಿವಿಧಾನವು ಮಳೆಯನ್ನೇ ಅವಲಂಬಿಸಿದ್ದರಿಂದ ನಾಲ್ಕುತಿಂಗಳು ಮುಂಗಾರುಬೆಳೆಯ ಬೆಳೆದುಕೊಂಡು ಇನ್ನೂ ಆರು ತಿಂಗಳುಗಳ ಕಾಲ ಹುಣಸೆಹಣ್ಣಿನ ವ್ಯಾಪರ, ಮಾವಿನಹಣ್ಣಿನ ವ್ಯಾಪಾರ, ಮನೆಕಟ್ಟುವ ಕೆಲಸ, ರಸ್ತೆ ಕಾಮಗಾರಿ, ನಗರ ಪ್ರದೇಶಗಳಿಗೆ ಹೋಗಿ ಕಾರ್ಖಾನೆಗಳ ಕೆಲಸಮಾಡಿ ಜೀವನ ಮಾಡುತ್ತಿದ್ದಾರೆ. ಮತ್ತು ವಿದ್ಯಾಭ್ಯಾಸ ಮಾಡಿಕೊಂಡು ಸರಕಾರಿ ನೌಕರಿಯಲ್ಲಿ ಸೇರಿಕೊಂಡು ಕಛೇರಿಗಳಲ್ಲಿ ದುಡಿಯುತ್ತಿದ್ದಾರೆ. ಹೀಗೆ ಹತ್ತು ಹಲವಾರು ರೀತಿಯ ವೃತ್ತಿಗಳನ್ನು ಕೈಗೊಂಡು ಜೀವನವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ವ್ಯವಸ್ಥೆ ಅಥವಾ ಆಚರಣೆಗಳು

ಅಡ್ಡಟ್ಟಿ ಮ್ಯಾಸಬೇಡರು ತಾವು ಮಾಡುವ ಹಬ್ಬಗಳಿಗಿಂತಲೂ ಅವರ ಧಾರ್ಮಿಕ ಆಚರಣೆಗಳು ಮತ್ತು ಉತ್ಸವಗಳೇ ಅವರಿಗೆ ಶ್ರೇಷ್ಠವಾದವು. ಅವರು ನೆರವೇರಿಸುವ ಜಾತ್ರೆ - ಉತ್ಸವಗಳು ಅವರಿಗೆ ವಿಶೇಷವಾದವುಗಳಾಗಿವೆ. ಧಾರ್ಮಿಕ ಆಚರಣೆಗಳನ್ನು ಭಯ - ಭಕ್ತಿಯಿಂದ ಆಚರಿಸುತ್ತಾರೆ. ಧಾರ್ಮಿಕತೆ ಎಂಬುದು ಈ ಸಮುದಾಯದ ಜನರಿಗೆ ನಿಯಂತ್ರಕ ಸಾಧನ. ಯಾವುದಕ್ಕೂ ಹೆದರದ ಈ ಸಮುದಾಯದ ಜನರು ತಾವೇ ಸೃಷ್ಠಿ ಮಾಡಿಕೊಂಡಿರುವ ದೇವರ ವಿಧಿ - ಆಚರಣೆಗಳಿಗೆ ಹೆದರುತ್ತಾರೆ. ಮತ್ತು ತಮ್ಮ ದೇವರ ಆಚರಣೆಗಳಿಗೆ ಭಯ - ಭಕ್ತಿ ಶ್ರದ್ಧೆಯಿಂದ ಪೂಜಿಸುವ ಸಂಪ್ರದಾಯ ಹೊಂದಿದ್ದಾರೆ.

ಈ ಸಮುದಾಯದವರು ಹಿಂದಿನಂತೆ ಇಂದೂ ಕೂಡ ಯಾವುದೇ ಧಾರ್ಮಿಕ ಆಚರಣೆಗಳನ್ನು ಕೈಗೊಳ್ಳಬೇಕಾದರೆ ಗುಡಿಕಟ್ಟೆಯಲ್ಲಿ ಎಲ್ಲರೂ ಸೇರುತ್ತಾರೆ. ಗುಡಿಕಟ್ಟೆಗಳು ಈ ಜನಾಂಗದವರಿಗೆ ನ್ಯಾಯಲಯಗಳಿದ್ದಂತೆ. ಇಲ್ಲಿ ಹಿರಿಯ ಮುಖಂಡರು ಸೇರಿ ತೀರ್ಮಾನಿಸಿದ ನಂತರ ಮುಂದಿನ ಧಾರ್ಮಿಕ ಕೆಲಸ-ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಹಿಂದುಗಳು ಆಚರಿಸುವ ಎಲ್ಲ ಹಬ್ಬಗಳನ್ನು ಚಾಚುತಪ್ಪದೆ ವಿಧಿ ವಿಧಾನ ಸಂಪ್ರದಾಯಗಳ ಮೂಲಕ ಆಚರಿಸುತ್ತಾರೆ. ಇವರು ವೈಯಕ್ತಿಕ ಆಚರಣೆಗಳಿಗಿಂತ ಸಾಮೂಹಿಕ ಆಚರಣೆಗಳಿಗೆ ಪ್ರಾಮುಖ್ಯತೆ ಹೆಚ್ಚು. ಯಾವುದೇ ಧಾರ್ಮಿಕ ಆಚರಣೆ, ವಿಧಿ - ಕರ್ಮಗಳಿರಲಿ ಎಲ್ಲರೂ ಸೇರಿ ಸಾಮೂಹಿಕವಾಗಿ ಆಚರಿಸುತ್ತಾರೆ. ಗಂಡು ಮತ್ತು ಹೆಣ್ಣು ಎರಡು ದೇವತೆಗಳನ್ನು ಪೂಜಿಸುವ ಸಂಪ್ರದಾಯ ಈ ಸಮುದಾಯದಲ್ಲಿ ಕಂಡುಬರುತ್ತದೆ.

ಹಿಂದೆ ಈ ಸಮುದಾಯದವರು ಒಂದುಕಡೆ ನೆಲೆಯಾಗಿ ನಿಲ್ಲದೆ ತಮ್ಮ ದನಕರುಗಳನ್ನು ಮೇವು ನೀರಿಗಾಗಿ ಗುಂಪು - ಗುಂಪುಗಳಾಗಿ ಸಂಚಾರ ಮಾಡುತ್ತಿದ್ದರು. ಇವರು ತಮ್ಮ ಜೊತೆಯಲ್ಲಿಯೇ ತಮ್ಮ ದೇವರುಗಳನ್ನು ಬಿದಿರು ಬುಟ್ಟಿಯಲ್ಲಿ ಇಟ್ಟುಕೊಂಡು ಹೋಗುತ್ತಿದ್ದರು. ತಾವು ನೆಲೆಯಾಗಿ ನಿಂತ ಕಡೆ ತಮ್ಮ ದೇವರಿಗೆ ಅರಣ್ಯದಲ್ಲಿ ಸಿಗುವ ಹಂಚಿ ಹುಲ್ಲಿನಿಂದ ಗುಡಿಯನ್ನು ನಿರ್ಮಿಸಿ ಅದರಲ್ಲಿ ದೇವರನ್ನು ಇಡುತ್ತಿದ್ದರು. ಆ ಹಂಚಿಹುಲ್ಲಿನ ಗುಡಿಯಸುತ್ತ ಕಳ್ಳೆ ಪೌಳಿಯನ್ನು ಹಾಕಿ ಅದರಲ್ಲಿ ದನಕರುಗಳ ಜೊತೆ ತಾವು ವಾಸಿಸುತ್ತಿದ್ದರು. ಇಂದೂ ಸಹ ತಮ್ಮ ಮನೆದೇವರಾದ ಅಹೋಬಲ ನರಸಿಂಹಸ್ವಾಮಿ ದೇವರಿಗೆ ಹಂಚಿಹುಲ್ಲಿನ ಗುಡಿಯನ್ನು ನಿರ್ಮಿಸಿ ಅದರಲ್ಲಿ ದೇವರಿಡುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ.

ಹಿಂದಿನಿಂದಲೂ ಇಂದಿನವರೆಗೆ ತಮ್ಮ ಜಾತ್ರೆ-ಉತ್ಸವಗಳನ್ನು ಶ್ರದ್ಧೆ ಭಕ್ತಿಯಿಂದ ಆಚರಿಸಿಕೊಂಡು ಬಂದಿದ್ದಾರೆ. ಇವರು ಆಚರಿಸುವಂತಹ ಧಾರ್ಮಿಕ ಆಚರಣೆಗಳು ಬೇರೆಲ್ಲೂ ಸಾಮಾನ್ಯವಾಗಿ ಕಾಣುವುದಿಲ್ಲ. ಇವರು ಪೂಜಿಸುವಂತಹ ಆಹೋಬಲ ನರಸಿಂಹಸ್ವಾಮಿ, ಗೂಲೋಬಮ್ಮ ದೇವರುಗಳನ್ನು ಭಾರತ ಹುಣ್ಣಿಮೆಯ ದಿನ ಗುಗ್ಗರಿ ಹಬ್ಬದಲ್ಲಿ ಪೂಜಿಸುತ್ತಾರೆ. ಈ ಸಮುದಾಯದವರೆಲ್ಲ ಸೇರಿ ಸಾಮೂಹಿಕವಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ದೇವರ ಮರಿಕುಂಟೆ ಗ್ರಾಮದಲ್ಲಿ ಈ ಧಾರ್ಮಿಕ ಆಚರಣೆಯನ್ನು ಮಾಡುತ್ತಾರೆ. ತಮ್ಮ ಸಾಂಪ್ರದಾಯಿಕವಾಗಿ ಮೊದಲು ವೇದಾವತಿ ನದಿಗೆ ದೇವರನ್ನು ತೆಗೆದುಕೊಂಡು ಹೋಗಿ ಗಂಗೆ ಪೂಜೆಮಾಡಿ ಅಲ್ಲಿ ನೂರಾಒಂದು ಎಡೆಯನ್ನು ಇಟ್ಟು ನರಸಿಂಹಸ್ವಾಮಿ ದೇವರುಗಳನ್ನು ಪೂಜೆ ಮಾಡಿಕೊಂಡು ಹಂಚಿ ಹುಲ್ಲಿನಿಂದ ನಿರ್ಮಿಸಿದ ಗುಡಿಸಲಿನಲ್ಲಿ ದೇವರನ್ನು ತಂದು ಗದ್ದಿಗೆ ಮಾಡುತ್ತಾರೆ.

ದೇವರಿಗೆ ಹೆಚ್ಚಾಗಿ ಕುಂಕುಮದ ನಾಮವನ್ನು ಹಚ್ಚುತ್ತಾರೆ. ಸಾಂಪ್ರದಾಯಿಕವಾಗಿ ಈ ದೇವರಿಗೆ ಸಂಬಂಧಪಟ್ಟ ಕುಲದ ಪ್ರತಿಯೊಬ್ಬರು ಹುರುಳಿ, ಅಕ್ಕಿ ಮತ್ತು ಬೆಲ್ಲವನ್ನು ತಂದುಕೊಡುತ್ತಾರೆ. ತಂದುಕೊಟ್ಟಂತಹ ಹುರುಳಿಯನ್ನು ಗುಗ್ಗರಿ ಮಾಡಿ, ಅನ್ನ, ಗುಗ್ಗರಿಯ ಎಡೆಯನ್ನು ಹಾಕುತ್ತಾರೆ. ಅಂದು ಇವರು ಸಿಹಿ ಪದಾರ್ಥಗಳನ್ನು ಅಡಿಗೆ ಮಾಡಿ ದೇವರಿಗೆ ಎಡೆಯನ್ನು ಕೊಡುವುದಿಲ್ಲ. (ಗುಗ್ಗರಿ ಹಬ್ಬದ ಆಚರಣೆಯಲ್ಲಿ ಹೆಚಿನ ಮಾಹಿತಿಯನ್ನು ವಿವರಿಸಲಾಗಿದೆ) ದೇವರ ಮುಂದೆ ಶಂಖ, ಜಾಗಟೆ, ಉರಿಮೆ ವಾದ್ಯಗಳನ್ನು ಬಾರಿಸುತ್ತ ಪೂಜೆ ಸಲ್ಲಿಸುತ್ತಾರೆ. ಹಿಂದಿನಿಂದ ಉಳಿದುಬಂದ ಈ ಧಾರ್ಮಿಕ ಆಚರಣೆಯನ್ನು ಯಾವ ಬದಲಾವಣೆ ಮಾಡದೆ ಆಚರಿಸುವ ಸಂಪ್ರದಾಯವನ್ನು ಇವರಲ್ಲಿ ಕಾಣುತ್ತೇವೆ.

ಗುಗ್ಗರಿ ಹಬ್ಬಕ್ಕೆ ಬರುವ ಭಕ್ತರು ದೇವರಿಗೆ ಗುಗ್ಗರಿ, ಬಾಳೆಹಣ್ಣು, ತೆಂಗಿನಕಾಯಿ, ಹೊಂಬಾಳೆಯನ್ನು ತರುತ್ತಾರೆ. ಮಕ್ಕಳಾಗದಿದ್ದ ಸ್ತ್ರೀಯರು ಮಣಿವು ಕುಣಿತದ ಸಂದರ್ಭದಲ್ಲಿ ಮಡಿಯಿಂದ ಪೂಜಾರಿಗಳ ಪಾದಕ್ಕೆ ಬಿಳುತ್ತಾರೆ. ದೇವರನ್ನು ಹೊತ್ತುಕೊಂಡ ಪೂಜಾರಿಯ ಕಾಲಿಗೆ ಬಿದ್ದರೆ, ಅವನು ಹೆಣ್ಣುಮಕ್ಕಳನ್ನು ದಾಟಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆಯನ್ನು ಈ ಸಮುದಾಯದವರು ಹೊಂದಿದ್ದಾರೆ.

ಈ ಸಮುದಾಯದ ಜನರು ಬೇರೆ ಬೇರೆ ಪ್ರದೇಶಗಳಲ್ಲಿ ಚದುರಿಹೋಗಿದ್ದರೂ ಭಾರತ ಹುಣ್ಣಿಮೆಯ ದಿನ ಆಚರಿಸುವ ಗುಗ್ಗರಿ ಹಬ್ಬಕ್ಕೆ ಎಲ್ಲರೂ ಒಂದು ಕಡೆ ಬಂದು ಸೇರಿ ತಮ್ಮ ಸುಖ-ದುಃಖಗಳನ್ನು ವಿಚಾರಿಸಿಕೊಳ್ಳುವುದರ ಜೊತೆಗೆ ಹಬ್ಬವನ್ನು ಆಚರಿಸುತ್ತಾರೆ.

"ಎಂ.ಜಿ.ಈಶ್ವರಪ್ಪ ಅವರು ತಮ್ಮ 'ಮ್ಯಾಸಬೇಡರು' ಎಂಬ ಕಿರು ಪುಸ್ತಕದಲ್ಲಿ ಪೆಟ್ಟಿಗೆ ದೇವರನ್ನು ಪೂಜಿಸುವ ಮ್ಯಾಸಬೇಡರು ಹನ್ನೆರಡು ಪೆಟ್ಟಿಗೆಗಳನ್ನು ಹನ್ನೆರಡು ಜನ ದೇವತೆಗಳೆಂದೂ ಮತ್ತು ತಮ್ಮ ಕುಲವನ್ನು ಆಶೀರ್ವದಿಸುವ ಹನ್ನೆರಡು ಋಷಿಮುನಿಗಳೆಂದು ನಂಬುತ್ತಾರೆ. ಈ ಪೆಟ್ಟಿಗೆಗಳು ಒಂದು ಅಡಿ ಉದ್ದ, ಅರ್ಧ ಅಡಿ ಅಗಲ, ಮುಕ್ಕಾಲು ಅಡಿ ಎತ್ತರ ಉಳ್ಳದ್ದಾಗಿದೆ. ಅವುಗಳಲ್ಲಿ ಎರಡೆರಡು ಸಾಲಿಗ್ರಾಮಗಳಿರುತ್ತವೆ. ಕೆಲವು ಕಡೆ ಈ ಪೆಟ್ಟಿಗೆ ತೆಗೆದು ತೋರಿಸದರೆ ಬೆಂಕಿಹತ್ತಿ ಉರಿದು ಹೋಗುವುದೆಂದು ಎಚ್ಚರಿಸುತ್ತಾರೆ. ಪೆಟ್ಟಿಗೆಗಳು ಮರದಿಂದ ಮಾಡಿದವು ಮತ್ತು ತೆಗೆಯಲು ಬಾರದಂಥವುಗಳು. ಒಂದು ಕಡೆ ನೆಲೆನಿಲ್ಲದೆ ಬೇಟೆಯಾಡುತ್ತಾ ಬೇರೆ ಕಡೆಗೆ ಸಾಗುತ್ತ ಅಲೆಮಾರಿ ಜನಾಂಗವಾಗಿದ್ದು, ಇವರು ಸಾಗಣಿಕೆಗೆ ಅನುಕೂಲವಾಗಲೆಂದು ಪೆಟ್ಟಿಗೆ ದೇವರುಗಳನ್ನು ನಿರ್ಮಾಣ ಮಾಡಿರಬೇಕು"[೮] ಎಂದು ಹೇಳುತ್ತಾರೆ. ಅವರ ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.

ಅಡ್ಡಲಟ್ಟಿ ಮ್ಯಾಸಬೇಡರು ಇಂದು ಹಟ್ಟಿಗಳಲ್ಲಿ ನೆಲೆನಿಂತು ವಾಸಮಾಡುತ್ತಿದ್ದಾರೆ. ವರ್ಷಕ್ಕೆ ಒಂದುಸಾರಿ ಕಲ್ಲುಕಂಬದ ಗುಡಿಯಿದ್ದರೂ ಸಹ ತಮ್ಮ ಹಿಂದಿನ ಸಂಪ್ರದಾಯದಂತೆ ಅಹೋಬಲ ನರಸಿಂಹಸ್ವಾಮಿ ದೇವರನ್ನು ಹಂಚಿಹುಲ್ಲಿನ ಗುಡಿಯಲ್ಲಿಟ್ಟು ಪೂಜೆಮಾಡುವ ಸಂಪ್ರದಾಯವನ್ನು ಬೆಳೆಸಿಕೊಂಡಿದ್ದಾರೆ.

ಇಂದು ಈ ಸಮುದಾಯದ ಜನ ಆಧುನೀಕರಣಗೊಂಡು ನಗರ ಪ್ರದೇಶಗಳು ಬೆಳೆದು, ಶಿಕ್ಷಣದಲ್ಲಿ ಪ್ರಗತಿ ಸಾಧಿಸಿ ಸರಕಾರಿ ಉದ್ಯೋಗದಲ್ಲಿ ಸೇರಿಕೊಂಡಿದ್ದರೂ ತನ್ನ ಹಿಂದಿನ ಧಾರ್ಮಿಕ ಸಂಪ್ರದಾಯವನ್ನು ಮಾತ್ರ ಬಿಟ್ಟುಕೊಟ್ಟಿಲ್ಲ. ತಮ್ಮ ಧಾರ್ಮಿಕ ಸಂಪ್ರದಾಯಗಳನ್ನು ಸಮೃದ್ಧಿಯಿಂದ ಬೆರಗುಗೊಳಿಸಿದ್ದಾರೆ.

ಅಡಿಟಿಪ್ಪಣಿಗಳು

೧. ಎಂ.ಪಿ.ವೀಣಾ, ಮನೆ, ಸಮಾಜ ಮತ್ತು ಸಂಸ್ಕೃತಿ, ಪು. ೪೭

೨. ತೀ.ನಂ.ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು. ೨೬

೩. ಎಂ.ಜಿ.ಈಶ್ವರಪ್ಪ, ಮ್ಯಾಸಬೇಡರು, ೧೯೮೨, ಪು. ೬

೪. ಪ್ರಜಾವಾಣಿ ವಿಶೇಷಾಂಕ, ೨೦೦೨

೫. ಜಿ.ಎಸ್ .ಘುರ್ಯೆ Caste and Class in india

೬. ವಾಲ್ಮೀಕಿವಾಣಿ, ಏಪ್ರಿಲ್ ೨೦೦೧

೭. ತೀ.ನಂ.ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು. ೩೮

೮. ಎಂ.ಜಿ.ಈಶ್ವರಪ್ಪ, ಮ್ಯಾಸಬೇಡರು, ಪು. ೭

೪

ಆಚರಣೆಗಳು

೪

ಆಚರಣೆಗಳು

೩.೧. ಜೀವನಾವರ್ತನ ಆಚರಣೆಗಳು

ಅಡ್ಲಟ್ಟಿ ಮ್ಯಾಸಬೇಡರ ವೈಶಿಷ್ಟ್ಯ

ಅಡ್ಲಟ್ಟಿ ಮ್ಯಾಸಬೇಡರನ್ನು ಇತರೇ ಬುಡಕಟ್ಟುಗಳಿಗೆ ಹೋಲಿಸಿದರೆ, ಭಿನ್ನವಾಗಿರುವ ಕೆಲ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅನೇಕ ಬುಡಕಟ್ಟುಗಳು ಇಂದೂ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ವಾಸವಾಗಿದ್ದು, ತಮ್ಮ ಮೂಲ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದಿವೆ. ಆದರೆ ಅಡ್ಲಟ್ಟಿ ಮ್ಯಾಸಬೇಡರು ಮೂಲದಲ್ಲಿ ಕಾಡಿನಲ್ಲಿ ವಾಸವಾಗಿದ್ದು, ಇಂದು ಕೆಲವು ಪ್ರದೇಶ, ಪಟ್ಟಣ ಪ್ರದೇಶಗಳ ಹತ್ತಿರಕ್ಕೆ ಬಂದಿದ್ದರೂ ಸಹ ತಮ್ಮ ಮೂಲದ ಆಚರಣೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದನ್ನು ನೋಡಬಹುದು. ಅಹೋಬಲ ನರಸಿಂಹಸ್ವಾಮಿ ಇವರಿಗೆ ಮನೆದೇವತೆ, ಗುಗ್ಗರಿ ಹಬ್ಬವನ್ನು ತಮ್ಮ ಮೂಲ ವಾರ್ಷಿಕ ಆಚರಣೆಯನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಹೆಣ್ಣುದೇವತೆಗೆ ವಿಶೇಷಪೂಜೆ ಸಲ್ಲಿಸುವಲ್ಲಿ ಅಪಾರ ನಂಬಿಕೆ ಇವರಲ್ಲಿದೆ. ಗುಗ್ಗರಿ ಹಬ್ಬದಲ್ಲಿ ಅಹೋಬಲ ನರಸಿಂಹಸ್ವಾಮಿ ದೇವರಿಗೆ ವಿಶೇಷ ಪೂಜೆ, ಹರಕೆ, ಸಲ್ಲಿಸುತ್ತಾರೆ.

ಈ ಜನಾಂಗದ ಭಾಷೆಗೆ ಸಂಬಂಧಿಸಿದಂತೆ ಹೇಳುವುದಾದರೆ ಇವರು ಮೂಲತಃ ತೆಲುಗು ಭಾಷಿಕರಾದರೂ ಇವರ ಮನೆಯಲ್ಲಿ ಪ್ರಸ್ತುತ ಕನ್ನಡವನ್ನೇ ಮಾತನಾಡುತ್ತಾರೆ. ಮದುವೆ ಮುಂತಾದ ಸಾಂಸ್ಕೃತಿಕ ಸಂದರ್ಭದಲ್ಲಿ ಕನ್ನಡದಲ್ಲಿ ಹಾಡುಗಳನ್ನು ಹಾಡುತ್ತಾರೆ.

ಅಡ್ಡಟ್ಟಿ ಜನಾಂಗದ ಬೆಡಗು - ಗೋತ್ರಗಳು, ಅವುಗಳ ಉಪ ಪಂಗಡ ಹಾಗೂ ಗೋತ್ರಕ್ಕೆ ಸೀಮಿತವಾದ ದೇವರು, ಕೌಟುಂಬಿಕ-ವೈವಾಹಿಕ ಸಂಬಂಧಗಳು ಮತ್ತು ವಿಧಿ ನಿಷೇಧಗಳು ತುಂಬಾ ವಿಶಿಷ್ಟವಾಗಿವೆ. ಪುರಾಣ ಪುರುಷರು, ಸಾಂಸ್ಕೃತಿಕ ವೀರರು, ರಾಜರು, ಪಾಳೇಗಾರರು ಹೀಗೆ ಅನೇಕ ಆದರ್ಶ ವ್ಯಕ್ತಿಗಳನ್ನು ಈ ಜನಾಂಗ ಒಳಗೊಂಡಿದೆ. ತಮ್ಮದೇ ನ್ಯಾಯಪದ್ಧತಿ ಕಟ್ಟೆಮನೆ ಮತ್ತು ಮ್ಯಾಸ ಮಂಡಲಗಳುಂಟು. ಇತರೆ ಜನಾಂಗದ ಬಹುತೇಕ ಹಬ್ಬಗಳನ್ನು ಆಚರಿಸುವುದರೊಂದಿಗೆ ಕೆಲ ಹಬ್ಬಗಳನ್ನು ತುಂಬಾ ವಿಶೇಷವಾಗಿ ಆಚರಿಸುತ್ತಾರೆ. ಧಾರ್ಮಿಕ ಆಚರಣೆಗಳು, ಸಂಸ್ಕಾರದ ವಿಧಿ ವಿಧಾನಗಳಲ್ಲಿನ ಆಚರಣೆಗಳಲ್ಲಿ ಕೆಲವು ಕುತೂಹಲ ಹುಟ್ಟಿಸುತ್ತದೆ. ನಾಗರೀಕತೆಯ ಪ್ರಭಾವಕ್ಕೆ ಸಿಲುಕಿಯೂ ಕೆಲ ಮೂಲ ಆಚರಣೆಗಳನ್ನು ಇನ್ನೂ ಪಾಲಿಸುತ್ತಾ ಬಂದಿದ್ದಾರೆ.

ಭಾಷೆ-ವಾಸ-ಆಚರಣೆ-ವೃತ್ತಿ ಎಲ್ಲವುಗಳಲ್ಲಿ ಅವರ ಮೂಲದ ಬಹಳಷ್ಟು ಲಕ್ಷಣಗಳು ಕಾಣಿಸುತ್ತವೆ. ಆರಂಭದಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿರುವಂತೆ ಇಂದು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು, ಪಾವಗಡ ತಾಲೂಕುಗಳ ಬಯಲು ಪ್ರದೇಶ ಮತ್ತು ವೇದಾವತಿ ನದಿ ಬಯಲು ಪ್ರದೇಶಗಳಲ್ಲಿ ವಾಸವಾಗಿರುವುದನ್ನು ಕಾಣುತ್ತೇವೆ.

ಚಳ್ಳಕೆರೆ ತಾಲೂಕು ಸಾಣೀಕೆರೆ, ನಾಗ್ತಿಹಳ್ಳಿ, ವಡೇರಹಳ್ಳಿ, ದೇವರ ಮರುಕುಂಟೆ, ಬಯಲು ಪ್ರದೇಶಗಳಲ್ಲಿ ಹಾಗೂ ವೇದಾವತಿ ನದಿತೀರದಲ್ಲಿ ಅಡ್ಲಟ್ಟಿ ಮ್ಯಾಸಬೇಡರು ದಟ್ಟವಾಗಿ ನೆಲೆಸಿದ್ದಾರೆ. ಇವರೆಲ್ಲರೂ 'ಚಿನ್ನಮೊಗಲರು' ಬೆಡಗಿನವರಾಗಿದ್ದಾರೆ. ಇತರೆ ಮ್ಯಾಸನಾಯಕರ ಭಾಷೆಯಿಂದ ಭಿನ್ನವಾಗಿ ಕನ್ನಡ ಭಾಷೆಯನ್ನು ತಮ್ಮ ಮನೆ ಮಾತನ್ನಾಗಿಟ್ಟುಕೊಂಡಿದ್ದಾರೆ. ಅಲ್ಲದೆ ಧಾರ್ಮಿಕ ಆಚರಣೆ ಕೌಟುಂಬಿಕ ವ್ಯವಹಾರ, ಸಾಂಸ್ಕೃತಿಕ ವಿಧಿ-ನಿಷೇಧ, ನ್ಯಾಯಪದ್ಧತಿ, ನಂಬಿಕೆಗಳು ಹೀಗೆ ಪ್ರತಿಯೊಂದರಲ್ಲಿಯೂ ತಮ್ಮ ಉಪಪಂಗಡಗಳಿಗಿಂತ ವಿಭಿನ್ನವಾದ ಬದುಕಿನ ರೀತಿಯನ್ನು ಅವರದೇ ಆದ ರೀತಿಯ ವೈಶಿಷ್ಟ್ಯತೆಯಿಂದ ಕೂಡಿಕೊಂಡಿದೆ.

ಜೀವನಾವರ್ತನ ಆಚರಣೆಗಳು

ಎಲ್ಲಾ ಸಮುದಾಯಗಳಂತೆ ಅಡ್ಲಟ್ಟಿ ಮ್ಯಾಸಬೇಡರಲ್ಲಿಯೂ ಸಹ ಅನೇಕ ಆಚರಣೆಗಳಿವೆ. ಅವುಗಳನ್ನು 'ಜೀವನಾವರ್ತನ' ಆಚರಣೆಗಳು ಮತ್ತು 'ವಾರ್ಷಿಕಾವರ್ತ' ಆಚರಣೆಗಳೆಂದು ವಿಂಗಡಿಸಲಾಗಿದೆ. ಜೀವನಾವರ್ತನ ಆಚರಣೆಗಳು ಅವಶ್ಯಕ ವಿಧಿ - ವಿಧಾನಗಳಿಂದ ನಿಶ್ಚಿತ ಸಾಮಾಜಿಕ ಕಟ್ಟುಪಾಡುಗಳಿಂದ ಜಾತಿಯೊಂದು ರೂಢಿಸಿಕೊಂಡು ಬಂದ ನಿಯಮಗಳ ಮೂಲಕ ಆಚರಿಸಲ್ಪಡುತ್ತವೆ. ವಾರ್ಷಿಕಾವರ್ತನ ಆಚರಣೆಗಳು ಹೆಚ್ಚಾಗಿ ಸಮೂಹ ನಿಷ್ಠವಾದವುಗಳು. ವರ್ಷಕ್ಕೊಂದಾವರ್ತಿ ಈ ಆಚರಣೆಗಳು ಪುನಾರಾವರ್ತನೆಯಾಗುತ್ತಿರುತ್ತವೆ.

ಸೀಮಂತ ಕಾರ್ಯ

ಅಡ್ಲಟ್ಟಿ ಮ್ಯಾಸಬೇಡರಲ್ಲಿ ಗರ್ಭಿಣಿ ಸ್ತ್ರೀಯನ್ನು ತವರುಮನೆಯವರು ಐದು ಅಥವಾ ಏಳು ತಿಂಗಳಲ್ಲಿ ಮನೆಗೆ ಕರೆದುಕೊಂಡು ಬಂದು ಸೀಮಂತ ಕಾರ್ಯ ಅಥವಾ 'ಒಡಲಕ್ಕಿ ಶಾಸ್ತ್ರ'ವನ್ನು ನೆರವೇರಿಸುತ್ತಾರೆ. ಸೀಮಂತ ಕಾರ್ಯವನ್ನು ಈ ಸಮುದಾಯದಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ಮಾಡುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಸೀಮಂತಕಾರ್ಯ ಮಾಡುವುದಕ್ಕೆ ಚೊಚ್ಚಲು ಬಸುರಿಯಾಗಿದ್ದರೆ ಒಡಲಕ್ಕಿಶಾಸ್ತ್ರ ಆಚರಣೆಯನ್ನು ನೆರವೇರಿಸುತ್ತಾರೆ. ಈ ಶಾಸ್ತ್ರವನ್ನು ಗಂಡನ ಮನೆಯವರು ತವರು ಮನೆಯಲ್ಲಿ ನಡೆಸುತ್ತಾರೆ. ಸೀಮಂತ ಕಾರ್ಯಕ್ಕೆ ಹೊರಡುವಾಗ ಒಂದು ಹಸಿರು ಸೀರೆ, ಕುಪ್ಪಸ, ಹಸಿರು ಬಳೆ, ಅಕ್ಕಿ-ಗೋಧಿ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ತವರು ಮನೆಯಲ್ಲಿ ಅಂದು ಗರ್ಭಿಣಿ ಮಹಿಳೆಗೆ ಸೀರೆ ಕುಪ್ಪಸ ತೊಡಿಸಿ, ಎಲೆ, ಅಡಿಕೆ, ಕೊಬ್ಬರಿ, ಅರಿಷಿಣಗಳಿಂದ ಉಡಿತುಂಬುತ್ತಾರೆ. ಈ ಒಂದು ಸಂದರ್ಭದಲ್ಲಿ ಗರ್ಭಿಣಿ ಸ್ತ್ರೀಯ ಆಸೆ ಆಕಾಂಕ್ಷೆಗಳನ್ನು ಮತ್ತು ಅವಳ ಬಯಕೆಗಳನ್ನು ಪೂರೈಸುತ್ತಾರೆ. ಸೀಮಂತಕಾರ್ಯ ಶಾಸ್ತ್ರವನ್ನು ನೆರವೇರಿಸುವುದರಿಂದ ಗರ್ಭಿಣಿ ಮನಸ್ಸು ನೆಮ್ಮದಿಯಿಂದ ಕೂಡಿರುತ್ತದೆ. ಅವಳಿಗೆ ಇಷ್ಟವಾದ ಆಹಾರ ಪದಾರ್ಥಗಳನ್ನು ಕೊಡುವುದರಿಂದ ಗರ್ಭಿಣಿ ಹೊಟ್ಟೆಯೊಳಗಿರುವ ಮಗು ಚೆನ್ನಾಗಿ ಬೆಳೆಯುತ್ತದೆಂಬ ಬಲವಾಗಿ ನಂಬಿಕೆಯಿದೆ.

ಅಡ್ಲಟ್ಟಿ ಮ್ಯಾಸಬೇಡರಲ್ಲಿ ಸೀಮಂತಕಾರ್ಯಕ್ಕೆ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿರುವ ವಿಶೇಷತೆಯೆಂದರೆ ಸೀಮಂತಕಾರ್ಯಕ್ಕೆ ಬರುವಂತ ಸಂಬಂಧಿಕರು, ಬಂಧು - ಬಳಗದವರು, ಊರಿನ ಜನಗಳು ಅಥವಾ ಕಾರ್ಯಕ್ಕೆ ಬರುವಂತ ಹಟ್ಟಿಯ ಸಂಬಂಧಿಕರು ಯಾರೇ ಬರಲಿ ಒಂದು ಸೇರು ಅಥವಾ ಒಂದು ಪಾವು ತೊಗರಿಬೇಳೆ ಮತ್ತು ಬೆಲ್ಲವನ್ನು ತಂದುಕೊಡುವ ಸಂಪ್ರದಾಯ ಇವರಲ್ಲಿದೆ. ತೊಗರಿಬೇಳೆಯನ್ನು ಬೇಯಿಸಿ ಅದಕ್ಕೆ ಬೆಲ್ಲವನ್ನು ಸೇರಿಸಿ ಎರಡನ್ನು ನುಣ್ಣಗೆ ಅರೆದು ಕರಿಗಡುಬನ್ನು ತಯಾರಿಸುವರು. ಸೀಮಂತಕಾರ್ಯಕ್ಕೆ ಬಂದಿರುವ ಬಂಧು-ಬಳಗದವರಿಗೆ ಕರಿಗಡುಬಿನ ಊಟವನ್ನು ಹಾಕುತ್ತಾರೆ. ಊಟಮಾಡಿದ ಜನಗಳಿಗೆಲ್ಲ ಗರ್ಭಿಣಿಯೇ ಎಲೆ-ಅಡಿಕೆ ಕೊಡಬೇಕು ಏಕೆಂದರೆ ಬಂದಂತ ಜನಗಳು ಊಟವನ್ನು ಮಾಡಿಕೊಂಡು ಗರ್ಭಿಣಿ ಸ್ತ್ರೀ ಕೈಯಲ್ಲಿಯ ಎಲೆ ಅಡಿಕೆ ತೆಗೆದುಕೊಂಡು ಅವಳಿಗೆ ಶಾಂತಿ ಸಿಗಲಿ, ನೆಮ್ಮದಿ ಸಿಗಲೆಂದು ಆರ್ಶಿರ್ವದಿಸುತ್ತಾರೆ. ಈ ಉದ್ದೇಶವನ್ನಿಟ್ಟುಕೊಂಡು ಅಡ್ಲಟ್ಟಿ ಮ್ಯಾಸಬೇಡರು ಈ ಪದ್ಧತಿಯನ್ನು ಆಚರಿಸುತ್ತಾರೆ. ನಂತರ ಬಂದಿರುವ ಜನಗಳು ಆಕೆಗೆ ಮುಯ್ಯಿ ಕೊಡುತ್ತಾರೆ. ಕೆಲವರು ಸೀರೆಯನ್ನು, ಕೆಲವರು ಕುಪ್ಪಸಗಳನ್ನು ಹಾಗೂ ವಸ್ತುಗಳನ್ನು ಕೊಡುತ್ತಾರೆ.

ಹೆರಿಗೆ ಶಾಸ್ತ್ರ

ಅಡ್ಲಟ್ಟಿ ಮ್ಯಾಸಬೇಡರು ಮೊದಲು ಹೆರಿಗೆಯನ್ನು ಸೂತಕವೆಂದು ಭಾವಿಸಿದ್ದರು. ಈ ಕಾರಣದಿಂದ ತಾವು ವಾಸಿಸುವ ಹಟ್ಟಿಯ ಹೊರಗಡೆ ಒಂದು ಕಾಯಂ ಗುಡಿಸಲನ್ನು ನಿರ್ಮಿಸಿ, ಅಲ್ಲಿಯೇ ಗರ್ಭಿಣಿ ಸ್ತ್ರೀಯನ್ನು ಹೆರಿಗೆಗಾಗಿ ಬಿಡುತ್ತಿದ್ದರು. ಈ ಸಮುದಾಯ ಪ್ರಾಚೀನದಲ್ಲಿ ೧೦-೧೫ ಕುಟುಂಬಗಳು ಸೇರಿ ಹಟ್ಟಿಗಳನ್ನು ನಿರ್ಮಿಸಿಕೊಂಡಿದ್ದರು. ಏಕೆಂದರೆ ಕಷ್ಟದ ಸಂದರ್ಭದಲ್ಲಿ ಒಬ್ಬರಿಗೊಬ್ಬರ ಸಹಾಯಕ್ಕಾಗಿ ಈ ರೀತಿಯ ಹಟ್ಟಿಗಳನ್ನು ಅಥವಾ ಒಂದೇ ಕಡೆ ನೆಲೆಸುವುದನ್ನು ಇಂದಿಗೂ ಸಹ ಉಳಿಸಿಕೊಂಡು ಬಂದಿದ್ದಾರೆ.

"ಗರ್ಭಿಣಿಗೆ ಒಂಬತ್ತು ತಿಂಗಳು ತುಂಬಿ ಹೆರಿಗೆ ಬೇನೆ ಪ್ರಾರಂಭವಾದರೆ ಹಟ್ಟಿಯ ಪಕ್ಕದಲ್ಲಿ ಹುಲ್ಲಿನ ಚಪ್ಪರದ ಗುಡಿಸಲನ್ನು ನಿರ್ಮಿಸಿ, ಅದರಲ್ಲಿ ಗರ್ಭಿಣಿ ಮಹಿಳೆಯನ್ನು ಬಿಟ್ಟು ಅವಳ ಜೊತೆಯಲ್ಲಿ ಅನುಭವಸ್ಥೆ ಮಹಿಳೆಯನ್ನು (ವಯೋವೃದ್ಧೆ) ಇರುತ್ತಿದ್ದರು."[೧] ಹಿಂದೆ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗುತ್ತಿದ್ದಿಲ್ಲ. ತಮ್ಮ ಹಟ್ಟಿಯಲ್ಲಿಯೇ ಇರುವ ಸೂಲಗಿತ್ತಿಯಿಂದ ಬಾಣತಿತನವನ್ನು ಮಾಡಿಸುತ್ತಿದ್ದರು. ಗರ್ಭಿಣಿ ಹೆಣ್ಣುಮಗಳು ಜನನ ನೀಡುವುದಕ್ಕೆ ಮುಂಚಿತವಾಗಿ ಅಥವಾ ಹೆರಿಗೆ ನೋವು ಕಾಣಿಸಿಕೊಳ್ಳುವ ಸಂದರ್ಭದಲ್ಲಿ ಹೆರಿಗೆಗೆ ಬೇಕಾಗುವ ವಸ್ತುಗಳನ್ನೆಲ್ಲಾ ಕೂಡಿಸಿಕೊಳ್ಳುತ್ತಿದ್ದರು ಮತ್ತು ಬಾಣಂತಿಗೆ ಬೇಕಾದಂತಹ ವಸ್ತುಗಳನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಇಂದು ಬಾಣಂತಿತನಕ್ಕೆ ಬೇಕಾದಂತಹ ವಸ್ತುಗಳು ಹಿಂದೆ ಸಿಗುತ್ತಿದ್ದಿಲ್ಲ. ಮನೆಯಲ್ಲಿಯೇ ಸಿಗುವಂತಹ ವಸ್ತುಗಳಾದ ಹಳೆ ಬಟ್ಟೆಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಮಗುವಿನ ಜನನದ ನಂತರ ಹೊಕ್ಕಳು ಬಳ್ಳಿಯನ್ನು ಕೊಯ್ಯಲು ಕುಡುಗೋಲನ್ನು ಉಪಯೋಗಿಸುತ್ತಿದ್ದರು. ಇಂದು ಕೆಲವರು ಆಧುನಿಕ ಪ್ರಭಾವದಿಂದ, ವೈದ್ಯಕೀಯ ಪ್ರಭಾವದಿಂದ ಗರ್ಭಿಣಿ ಸ್ತ್ರೀಯನ್ನು ಆಸ್ಪತ್ರೆಗಳಿಗೆ ಸೇರಿಸಿ ಹೆರಿಗೆ ಮಾಡಿಸುತ್ತಾರೆ.

ಒಂಬತ್ತು ತಿಂಗಳು ತುಂಬಿದ ಗರ್ಭಿಣಿಗೆ ಮನೆಯ ಯಜಮಾನರು ಅವಳ ಮೇಲೆ ಅನೇಕ ಕಟ್ಟುಪಾಡುಗಳನ್ನು ವಿಧಿಸುತ್ತಾರೆ. ಅಮವಾಸೆ ಮತ್ತು ಹುಣ್ಣಿಮೆ ದಿನಗಳಂದು ಮನೆ ಹೊರಗಡೆ ಬಿಡದೇ ಮನೆಯ ಒಳಗಡೆ ಇರಲು ಸೂಚಿಸುತ್ತಾರೆ. ಅನೇಕ ವಿಶೇಷ ಕಾಳಜಿ ವಹಿಸುತ್ತಾರೆ. "ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಹಟ್ಟಿಯ ಪಕ್ಕದಲ್ಲಿ ಒಂದು ಹುಲ್ಲಿನ ಗುಡಿಸಲನ್ನು ನಿರ್ಮಿಸಿ ಯಾವುದೇ ಗಾಳಿ ಬೆಳಕು ಬೀಳದಂತೆ ಜನಸಂಪರ್ಕ ವಿರಳವಿರುವ ಸ್ಥಳದಲ್ಲಿ ಹುಲ್ಲಿನ ಗುಡಿಸಲನ್ನು ನಿರ್ಮಿಸುವರು. ಅದರಲ್ಲಿ ಗರ್ಭಿಣಿ ಜೊತೆಯಲ್ಲಿ ತಮ್ಮ ಸಮುದಾಯದ ಹಟ್ಟಿಯ `ಸೂಲಗಿತ್ತಿ`ಯನ್ನು ಮಾತ್ರ ಮೂರುದಿನಗಳ ಕಾಲ ಇರಿಸುತ್ತಿದ್ದರು. ಹೆರಿಗೆಯಾದ ನಂತರ ಸೂಲಗಿತ್ತಿಗೆ ಹೊಸ ಸೀರೆ ಕುಪ್ಪಸವನ್ನು ಉಡುಗೊರೆಯಾಗಿ ನೀಡಿ ಆಕೆಯನ್ನು ಸಂತೋಷ ಪಡಿಸುತ್ತಿದ್ದರು."[೨]

ಇಂದು ಅಡ್ಲಟ್ಟಿ ಮ್ಯಾಸಬೇಡರು ನಾಗರಿಕತೆಯ ಪ್ರಭಾವದಿಂದ ಇತರೆ ಸಮುದಾಯಗಳ ಜೊತೆಯಲ್ಲಿ ನೆಲೆಸಿ ಜೀವನ ನಡೆಸುವುದರಿಂದ ಹಟ್ಟಿಗಳ ಪ್ರಮಾಣ ಕಡಿಮೆಯಾಗಿವೆ. ಗರ್ಭಿಣಿ ಹೆಣ್ಣುಮಗಳನ್ನು ಮನೆಯ

ಒಳಗಡೆ ಒಂದು ಕೋಣೆಯಲ್ಲಿ ಸೂಲಗಿತ್ತಿ, ಮನೆಯ ಹಿರಿಯ ವಯೋವೃದ್ಧೆಯ ಮೂಲಕ ಹೆರಿಗೆಯನ್ನು ಮಾಡಿಸುತ್ತಾರೆ. ಹಟ್ಟಿಗಳಿಗೆ ಹತ್ತಿರದಲ್ಲಿ ಆಸ್ಪತ್ರೆಗಳಿದ್ದರೆ ಹೆರಿಗೆ ಮಾಡಿಸಿಕೊಂಡು ಬರುತ್ತಾರೆ.

ಜನನ

ಅಡ್ಡಟ್ಟಿ ಮ್ಯಾಸಬೇಡರು ಮಗು ಹುಟ್ಟಿದ ಸಂದರ್ಭದಲ್ಲಿ ಆಚರಿಸುವ ಸಂಪ್ರದಾಯ ತುಂಬಾ ಕಟ್ಟುನಿಟ್ಟಾಗಿದೆ. ಹೆರಿಗೆಯಾದ ನಂತರ ಸೂತಕದ ಮನೆಯೆಂದು ಆಚರಿಸುತ್ತಾರೆ. ಸೂತಕದ ಮನೆಯಲ್ಲಿ ಅವರ ಅಣ್ಣ - ತಮ್ಮಂದಿರು ಮಾತ್ರ ಮನೆಯ ಒಡನಾಟವನ್ನಿಟ್ಟುಕೊಂಡಿರುತ್ತಾರೆ. ಬೇರೆ ಸಮುದಾಯಗಳು ಸೂತಕದ ಮನೆಯೊಳಗೆ ಬರುವುದಿಲ್ಲ. ಇವರು ಸಹ ಬೇರೆಯವರ ಮನೆಯೊಳಗೆ ಹೋಗುವುದಿಲ್ಲ. ಹೆರಿಗೆಯಾಗಿ ಮೂರನೇ ದಿನದಲ್ಲಿ ಅಣ್ಣ - ತಮ್ಮಂದಿರು ಸೇರಿಕೊಂಡು ಸೂತಕದ ಮನೆಗೆ ಸುಣ್ಣ - ಬಣ್ಣ ಬಳಿದು, ಗೋಮೂತ್ರವನ್ನು ಮನೆಯ ಒಳಗಡೆ ಸಿಂಪಡಿಸಿ ಸೂತಕ ಕಳೆದುಕೊಳ್ಳುತ್ತಾರೆ. ಹೆರಿಗೆಯಾದ ಮೂರನೇ ದಿನ ಬಾಣಂತಿ ಮತ್ತು ಕೂಸಿಗೆ ಅವರ ಸಂಬಂಧಿಕರು ತಮ್ಮ ಮನೆಗಳಿಂದ ನೀರನ್ನು ತಂದು ಬೇವಿನ ಸೊಪ್ಪನ್ನು ನೀರಿನಲ್ಲಿ ಹಾಕಿ ಅದರಿಂದ ಸ್ನಾನವನ್ನು ಮಾಡಿಸಿ ಬೆಂಕಿಯ ಕೆಂಡದಲ್ಲಿ ಬೇವಿನ ಸೊಪ್ಪನ್ನು ಹಾಕಿ ಅದರ ಶಾಖವನ್ನು ಬಾಣಂತಿಗೆ ಕೊಟ್ಟು ಮನೆಯ ಒಳಗಡೆ ಕರೆದುಕೊಳ್ಳುತ್ತಾರೆ.

ಗರ್ಭಿಣಿಗೆ ಹೆರಿಗೆಯಾದ ನಂತರ ಹುಟ್ಟಿದ ಮಗುವಿಗೆ ಬಿಸಿನೀರಿನಿಂದ ಸ್ನಾನ ಮಾಡಿಸಿ ಮೂರು ದಿನಗಳವರೆಗೆ ಬಿದಿರುಕಡ್ಡಿಯ ಮೊರದಲ್ಲಿ ಬಟ್ಟೆ ಹಾಸಿ ಮಲಗಿಸುವರು. ನಂತರ ತೊಟ್ಟಿಲು ಕಟ್ಟಿ ಅದರಲ್ಲಿ ಮಗುವನ್ನು ಮಲಗಿಸುವರು. ಹುಟ್ಟಿದ ಮಗುವಿಗೆ ಅಂದು ಬೇವಿನ ಸೊಪ್ಪನ್ನು ಅರೆದು ಚೆನ್ನಾಗಿ ಮೈಗೆ ಹಚ್ಚಿ ನಂತರ ಸ್ನಾನ ಮಾಡಿಸುತ್ತಾರೆ. ಹೀಗೆ ಮಾಡುವುದರಿಂದ ಮಗುವಿಗೆ ಯಾವುದೇ ರೋಗ ಬರುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ. ಈ ಪದ್ಧತಿ ಅನೇಕ ಬುಡಕಟ್ಟುಗಳಲ್ಲಿದೆ. ಮಗುವಿನ ಜನನದ ನಂತರ ಗಂಡನ ಮನೆಗೆ ತವರು ಮನೆಯವರ ಮನೆಯ ಸಂಬಂಧಿಕನೇ ಹೋಗಿ ಸುದ್ದಿ ತಿಳಿಸಿಬರುತ್ತಾನೆ. ಮಗುವಿನ ತಂದೆಯಾದವನು ಮಗುವಿನ ಕೈಯಲ್ಲಿ ಬಂಗಾರದ ಉಂಗುರವನ್ನು ಕೊಟ್ಟು ಮತ್ತು ಹಣವನ್ನು ಕೈಯಲ್ಲಿಟ್ಟು ಮೊದಲ ಸಲ ಮುಖನೋಡುತ್ತಾನೆ.

ಗರ್ಭಿಣಿ ಮಗುವಿಗೆ ಜನನ ನೀಡಿದ ನಂತರ ಹೆರಿಗೆಯಿಂದ ಬರುವ ಮಾಸನ್ನು ತೆಗೆದುಕೊಂಡು ಒಂದು ಮಣ್ಣಿನ ಮಡಿಕೆಯಲ್ಲಿ ಹಾಕಿ ಅದನ್ನು ದೂರದ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಯಾರಿಗೂ ಕಾಣಿಸದಂತೆ ನರಿ - ನಾಯಿಗಳು ಮುಟ್ಟದಂತೆ ನೆಲದಲ್ಲಿ ಗುಂಡಿತೋಡಿ ಮಾಸದ ಗಡಿಗೆಯನ್ನು ಅದರಲ್ಲಿಟ್ಟು ಮಣ್ಣುಮುಚ್ಚಿ ಬರುತ್ತಾರೆ. ಮಗು ಸ್ವಲ್ಪ ಬೆಳೆಯುವವರೆಗೆ ಮನೆಯ ಹಿರಿಯ ಹೆಣ್ಣುಮಗಳು ಮಗುವಿನ ಮತ್ತು ಬಾಣಂತಿಯ ಆರೈಕೆ ಮಾಡುತ್ತಾರೆ. ಬಾಣಂತಿಗೆ ಮತ್ತು ಮಗುವಿಗೆ ಬೇಕಾದಂತ ವಸ್ತುಗಳನ್ನು ಮತ್ತು ಆಹಾರವನ್ನು ಗುಡಿಸಲಿಗೆ ಪೂರೈಸುತ್ತಾರೆ.

ನಾಮಕರಣ

ಹುಟ್ಟಿದ ಮಗು ಅದು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಜನಿಸಿದ ಮೂರನೆಯ ದಿನ ಹೆಸರಿಡುವ ಕಾರ್ಯವನ್ನು ಅಡ್ಲಟ್ಟಿ ಮ್ಯಾಸಬೇಡರು ಮಾಡುತ್ತಾರೆ. ಇತರೆ ಬುಡಕಟ್ಟು ಸಮುದಾಯಗಳಲ್ಲಿ ಮಗು ಜನಿಸಿದ ೧೬ ದಿನಗಳಲ್ಲಿ ಅಥವಾ ಮೂರು ತಿಂಗಳೊಳಗಾಗಿ ನಾಮಕರಣ ಮಾಡುತ್ತಾರೆ. ಆದರೆ ಈ ಸಮುದಾಯವು ಮಾತ್ರ ಮೂರನೆಯ ದಿನವೇ ನಾಮಕರಣ ಮಾಡುತ್ತಾರೆ. ಏಕೆಂದರೆ ಇವರಲ್ಲಿ ಒಂದು ನಂಬಿಕೆ ಇದೆ? ಮೂರು ದಿನಗಳಲ್ಲಿ ವಿಧಿ ಎಂಬುವಳು ಮಗುವಿನ ಹಣೆಯ ಮೇಲೆ ಹೆಸರನ್ನು ಬರೆಯುತ್ತಾಳಂತೆ ಆದ್ದರಿಂದ ಈ ಸಮುದಾಯದವರು ಜನಿಸಿದ ಮಗುವಿಗೆ ಮೂರು ದಿನಗಳಲ್ಲಿ ನಾಮಕರಣವನ್ನು ಮಾಡುತ್ತಾರೆ.

ನಾಮಕರಣ ದಿನದಂದು ಇಡೀ ಮನೆಯನ್ನು ಸಾರಣೆ ಮಾಡುತ್ತಾರೆ. ಓಣೆಯಲ್ಲಿನ ಮುತ್ತೈದಿಯರು, ಸಂಬಂಧಿಕರು ಹಾಗು ಮಗುವಿನ ತಂದೆಯ ಬಂಧುಗಳು ನಾಮಕರಣಕ್ಕೆ ಸೇರುತ್ತಾರೆ. ಅಂದು ಬೆಳಿಗ್ಗೆ ೧೦ - ೧೨ ಗಂಟೆಯೊಳಗೆ ಬಾಣಂತಿ ಮತ್ತು ಮಗುವಿಗೆ ಬಿಸಿನೀರಿನಿಂದ ಸ್ನಾನಮಾಡಿಸಿ ಸಾಯಂಕಾಲ ಗಂಗೆ ಪೂಜೆಯನ್ನು ಮಾಡಿಸಿ, ಗಂಡನ ಮನೆಯವರು ತಂದಿರುವ ತೊಟ್ಟಿಲನ್ನು ಕಟ್ಟಿ, ತೊಟ್ಟಿಲಲ್ಲಿ ಮಗುವನ್ನು ಹಾಕಿ ಜೋಗುಳ ಹಾಡುತ್ತಾರೆ.'ಮಗುವಿನ ಅತ್ತೆಯರು ಮತ್ತು ಸೋದರಮಾವನು ಒಂದು ಗಂಗಾಳವನ್ನು ಬಾರಿಸುತ್ತ "ಲೋಕದ ನೀ ಬಾಯಿ ತಿದ್ದಿದರ್ಯಾರೇ, ಗಂಗಾಳ ಬಾರಿಸಿದರ್ಯಾರೆ" ಎಂದು ಬಾರಿಸುತ್ತ ಹಾಡುತ್ತಾ ಹೆಸರನ್ನು ಇಡುತ್ತಾರೆ. ಅಂದು ಸೂತಕ ಮುರಿದು ಎಲ್ಲರು ಮನೆಯ ಒಳಗಡೆ ಹೋಗುವರು. ಅಡ್ಲಟ್ಟಿ ಮ್ಯಾಸಬೇಡರಲ್ಲಿ ಮಗುವಿನ ತಂದೆಯ ಸಂಬಂಧಿಕರ ಅಪೇಕ್ಷೆಯಂತೆ ಮಗುವಿನ ನಾಮಕರಣ ನಡೆಯುತ್ತದೆ. ಇವರು ತಮ್ಮ ಜನಾಂಗದ ಪುರಾಣ ಪುರುಷರ, ಹಿರಿಯ ವ್ಯಕ್ತಿಗಳ, ಸಾಂಸ್ಕೃತಿಕ ವೀರರ, ಕುಲದೇವತೆಗಳ ಹೆಸರುಗಳನ್ನಿಡುವುದು ಸಾಮಾನ್ಯ. ಓಬಯ್ಯ, ನರಸಿಂಹ, ಗೂಲಮ್ಮ, ಸಣ್ಣ ನರಸಿಂಹ, ದೊಡ್ಡ ನರಸಿಂಹ, ಸಣ್ಣೋಬಯ್ಯ, ದೊಡ್ಡೋಬಯ್ಯ, ಕೆಂಗೋಬಯ್ಯ, ಕುರಿಓಬಯ್ಯ, ಮುಟ್ಟೋಬಯ್ಯ, ಓಬಕ್ಕ, ಓಬಮ್ಮ, ಕರಿಯಮ್ಮ ಈ ತೆರನಾದ ಹೆಸರುಗಳನ್ನು ಇಡುತ್ತಾರೆ.

ಈ ಸಮುದಾಯದಲ್ಲಿ ಹುಟ್ಟಿದ ಮಗುವಿಗೆ ಕಸ್ತೂರಿ, ಗೋರೋಜ ನೀರಿಗೆ ಸೇರಿಸಿ ಕುಡಿಸುತ್ತಾರೆ. ಮಕ್ಕಳಿಗೆ ಮೈಮೇಲೆ ಅಮ್ಮ ಕಾಣಿಸಿಕೊಂಡರೆ ಬೇವಿನ ಸೊಪ್ಪನ್ನು ಅರೆದು ಚೆನ್ನಾಗಿ ಮೈಯಿಗೆ ಹಚ್ಚಿ ನಂತರ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ ಮತ್ತು ಒನಕೆ ಮೇಲೆ ಕೂಡಿಸಿ ಪೂಜೆ ಮಾಡಿ ಮಜ್ಜಿಗೆ ಅನ್ನ ಕಲಿಸಿ ಕೈಯಲ್ಲಿ ಊಟಕ್ಕೆ ಕೊಡುತ್ತಾರೆ. ಹೀಗೆ ಮಾಡುವುದರಿಂದ ಕಾಣಿಸಿಕೊಂಡ ಅಮ್ಮ ಗುಣಮುಖವಾಗುತ್ತದೆಂಬ ನಂಬಿಕೆ ಇವರಲ್ಲಿದೆ.

ನಾಮಕರಣಕ್ಕೆ ಬಂದಂತಹ ಸಂಬಂಧಿಕರಿಗೆ ಬಂಧು-ಬಳಗದವರಿಗೆ ಅಕ್ಕಿಹುಗ್ಗಿ, ಅನ್ನ ಸಾಂಬಾರನ್ನು ಊಟಕ್ಕೆ ಹಾಕುತ್ತಾರೆ.

ಬಾಣಂತಿ ದೈವದರ್ಶನ

ಹೆರಿಗೆಯ ನಂತರ ಐದು - ಆರು ತಿಂಗಳಲ್ಲಿ ಬಾಣಂತಿಯ ಗಂಡನ ಮನೆಯ ದೇವರನ್ನು ನೋಡಿ ಬರುತ್ತಾಳೆ. ಅಲ್ಲದೆ ಅಲ್ಲೊಂದು ದಿನ ವಾಸಮಾಡಿ ನಿದ್ರೆಮಾಡಿ ಬಂದರೆ ಒಳ್ಳೆಯದಾಗುತ್ತದೆಂಬ ನಂಬಿಕೆಯಿಂದ ಅಲ್ಲಿ ಪೂಜಾರಿ ಕೊಡುವ ಪ್ರಸಾದ ತೆಗೆದುಕೊಂಡು ಬರುತ್ತಾರೆ. ಬಹುದಿನಗಳವರೆಗೆ ಮಕ್ಕಳಾಗದಿದ್ದರೆ ಆ ಮಹಿಳೆ ನೆಲದ ಮೇಲೆ ಊಟಮಾಡುವ ವ್ರತವನ್ನು ಆಚರಿಸುತ್ತಾಳೆ ಅಲ್ಲದೆ ಇಷ್ಟ ದೇವತೆಗಳಲ್ಲಿ ಬೇಡಿಕೊಳ್ಳುತ್ತಾಳೆ." ಅಡ್ಲಟ್ಟಿ ಮ್ಯಾಸಬೇಡರಲ್ಲಿ ಬಹುದಿನಗಳವರೆಗೆ ಮಕ್ಕಳಾಗದಿದ್ದರೆ, ಆ ಮಹಿಳೆ ದೇವರ ಮರಿಕುಂಟೆ ಓಬಳನರಸಿಂಹ ದೇವರಿಗೆ ಹರಕೆಯನ್ನು ಮಾಡಿಕೊಂಡಿರುತ್ತಾಳೆ. ಗುಗ್ಗರಿ ಹಬ್ಬದ ಜಾತ್ರೆಯ ದಿನ ಹಂಚಿ ಹುಲ್ಲಿನ ಗುಡಿಯ ಪೌಳಿಗೆ ಹೋಗಿ ನಿದ್ರೆ ಮಾಡಿ, ಬೆಲ್ಲ, ಹುರುಳಿಕೊಟ್ಟು ಮಣೇವು ಕುಣಿಯುವ ಸಂದರ್ಭದಲ್ಲಿ ಪುಜಾರಿಯ ಪಾದಕ್ಕೆ ಬಿದ್ದು ತನ್ನ ಹರಕೆಯನ್ನು ತೀರಿಸುತ್ತಾರೆ.

ಋತುಮತಿ ಶಾಸ್ತ್ರ

ಅಡ್ಲಟ್ಟಿ ಮ್ಯಾಸಬೇಡರಲ್ಲಿ ಇದೊಂದು ವಿಶಿಷ್ಟ ಆಚರಣೆಯಾಗಿದೆ. ಹಿಂದೆ ಹೆಣ್ಣುಮಗಳು ಋತುಮತಿಯಾದ ದಿನವೇ ಹಟ್ಟಿಯ ಪಕ್ಕದಲ್ಲಿ ಅಥವಾ ಮನೆಯ ಮುಂದುಗಡೆ ಮತ್ತೊಂದು ಚಿಕ್ಕ ಹುಲ್ಲಿನ ಗುಡಿಸಲನ್ನು ಹಾಕುತ್ತಿದ್ದರು. ಗುಡಿಸಲು ನಿರ್ಮಾಣಕ್ಕೆ ಬೇವಿನ ಸೊಪ್ಪನ್ನು ಬಳಸುತ್ತಿದ್ದರು. ಈ ಸಮುದಾಯದಲ್ಲಿಯ ಹೆಣ್ಣುಮಕ್ಕಳು ಸಾಮಾನ್ಯವಾಗಿ ೧೩ - ೧೪ ವರ್ಷ ವಯಸ್ಸಿನಲ್ಲಿ ಋತುಮತಿಯಾಗುತ್ತಾರೆ. ಋತುಮತಿಯಾದ ಕನ್ಯೆಯನ್ನು ಹಟ್ಟಿಯ ಪಕ್ಕದಲ್ಲಿ ನಿರ್ಮಿಸಿದ ಹೊಸ ಬೇವಿನ ಸೊಪ್ಪಿನ ಗುಡಿಸಲಿನಲ್ಲಿ ಬಿಟ್ಟಿರುತ್ತಾರೆ. ಋತುಮತಿಯಾದ ಕನ್ಯೆ ಮನೆಯೊಳಗೆ ಬಂದರೆ ಮನೆ ಮೈಲಿಗೆಯಾಗುತ್ತದೆ ಎಂಬ ಪರಿಕಲ್ಪನೆ ಇದೆ. ಹೀಗಾಗಿ ಅವಳನ್ನು ಹಟ್ಟಿಯಿಂದ ಹೊರಗಡೆ ಗುಡಿಸಲಿನಲ್ಲಿ ಸೂತಕ ಮುಗಿಯುವವರೆಗೂ ವಾಸಿಸಬೇಕು. ಅವಳ ಜೊತೆಯಲ್ಲಿ ಮನೆಯವರು ಅಥವಾ ಸಂಬಂಧಿಕರು ಇರುತ್ತಾರೆ.

ಈ ಸಮುದಾಯದಲ್ಲಿ ಋತುಮತಿಯಾಗಿದ್ದಾಳೆ ಎಂದು ತಿಳಿದ ತಕ್ಷಣ ಕನ್ಯೆಯ ಸೋದರ ಮಾವನಿಗೆ ತಿಳಿಸಿ, ಅವನಿಂದಲೇ ಬೇವಿನಸೊಪ್ಪಿನ ಹೊಸಗುಡಿಸಲು ನಿರ್ಮಿಸಿ ಅದಕ್ಕೆ ಅವನಿಂದಲೇ ಪೂಜೆಮಾಡಿಸಿ ಕನ್ನೆಯನ್ನು ಒಳಗಡೆ ಬಿಡುತ್ತಿದ್ದರು. ಕಾರಣ ಸೋದರ ಮಾವನಿಗೆ ಋತುಮತಿಯಾದ ಕನ್ಯೆಯ ಬಗ್ಗೆ ಯಾವುದೇ ಕೆಟ್ಟ ಅಭಿಪ್ರಾಯ ಇರುವುದಿಲ್ಲ. ತಮ್ಮ ಕುಲದವರಲ್ಲಿಯೇ ವಿವಾಹ ಸಂಬಂಧಗಳು ಏರ್ಪಡುವುದರಿಂದ ಮತ್ತು ದೂರದ ಸಂಬಂಧಿಗಳ ಬಗೆಗೆ ಹೆಚ್ಚಿನ ಆಸಕ್ತಿ ಇವರಲ್ಲಿ ಇಲ್ಲದೇ ಇರುವುದರಿಂದ ಕನ್ಯೆಯ ಸೋದರಮಾವನಿಗೆ ಹೊಸ ಗುಡಿಸಲನ್ನು ನಿರ್ಮಿಸಲು ಅವಕಾಶ ಕೊಡುತ್ತಿದ್ದರು.

ಋತುಮತಿಯಾದ ಕನ್ಯೆಗೆ ಅಂದು ಅರಿಶಿಣ ಮತ್ತು ಎಣ್ಣೆಯನ್ನು ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಅವಳು ಪ್ರತಿದಿನ ಸ್ನಾನಮಾಡಿ ಅಗಸರವಳು ಮಡಿಮಾಡಿ ತಂದುಕೊಟ್ಟ ಬಟ್ಟೆಗಳನ್ನು ಉಡಬೇಕು ಎಂಬ ನಿಯಮವಿದೆ. ಸಾಮಾನ್ಯವಾಗಿ ಒಂಬತ್ತು ದಿನಗಳ ಕಾಲ ಈ ಗುಡಿಸಲಿನಲ್ಲಿ ವಾಸಿಸಬೇಕಾಗುತ್ತದೆ.(೧೬ನೇ ದಿನ ಋತುಮತಿ ಕನ್ಯೆಗೆ ಸ್ನಾನಮಾಡಿಸಿದ ನೀರನ್ನು ಯಾರು ತುಳಿಯದಂತಹ ಮತ್ತು ನೀರನ್ನು ಯಾರು ದಾಟದಂತಹ ಜಾಗಕ್ಕೆ ಕರೆದುಕೊಂಡು ಹೋಗಿ ಅರಿಶಿಷ ಹಚ್ಚಿ, ಎಣ್ಣೆ ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ.) ಆ ದಿನ ಸಾಯಂಕಾಲ ಹೊಸ ಬಟ್ಟೆಯನ್ನು ಹಾಕಿ ಕೂಡ್ರಿಸುವ ಕಾರ್ಯಕ್ರಮ ಮಾಡುವರು. ಇವರಿಗೆ ಸಂಬಂಧಪಟ್ಟ ಬಂಧು - ಬಳಗ, ಎಲ್ಲರೂ ಸೇರಿ ಕನ್ಯೆಗೆ ಹೊಸ ಸೀರೆ, ಕುಪ್ಪಸ, ಹೂವಿನ ಹಾರ ಹಾಕಿ ಸಾಯಂಕಾಲ ಗಂಗಾದೇವಿಯ ಪೂಜೆಯನ್ನು ಮಾಡಿಕೊಂಡು ರಾತ್ರಿ ಸಮಯದಲ್ಲಿ ಋತುಮತಿಯಾದ ಕನ್ಯೆಯನ್ನು ಕುರ್ಚಿ ಮೇಲೆ ಕುಳ್ಳರಿಸುತ್ತಾರೆ. ನಂತರ ಮುತ್ತೈದಿಯರು ಆರತಿಯನ್ನು ಬೆಳಗುತ್ತಾರೆ. ಈ ಸಮುದಾಯದ ನೆಂಟರು ಋತುಮತಿಯಾದ ಕನ್ಯೆಗೆ ಮುಯ್ಯಿ ಮಾಡುವ ಕಾರ್ಯವೂ ನಡೆಸುವರು. ಈ ಸಮುದಾಯದಲ್ಲಿ ನೆಂಟರು ಸಹ ಕನ್ಯೆಗೆ ಸಿಹಿ ಪದಾರ್ಥಗಳನ್ನು ತಂದಿರುತ್ತಾರೆ. ನಂತರ ಅವಳನ್ನು ಮನೆಯ ಒಳಗಡೆ ಕರೆದುಕೊಂಡು ಆರತಿಯನ್ನು ಮಾಡಿ ಋತುಮತಿ ಶಾಸ್ತ್ರವನ್ನು ಮುಗಿಸುತ್ತಾರೆ.

"ಋತುಮತಿಯಾದ ಕನ್ಯೆ ಮದುವೆಯಾಗಿದ್ದರೆ ಈ ವಿಷಯವನ್ನು ಗಂಡನ ಮನೆಗೆ ಸುದ್ಧಿಯನ್ನು ಮುಟ್ಟಿಸುತ್ತಾರೆ. ಆಗ ಗಂಡನ ಮನೆಯವರು ೧೬ನೇ ದಿನ ಹೊಸಬಟ್ಟೆ ಮತ್ತು ಸಿಹಿ ಊಟ ಕಟ್ಟಿಕೊಂಡು ಅವಳ ಗಂಡನೊಂದಿಗೆ ಬರುತ್ತಾರೆ. ಅದೇ ದಿನ ವಿಶೇಷ ಕಾರ್ಯಗಳನ್ನು ನೆರವೇರಿಸುತ್ತಾರೆ. ಮದುವೆಯ ಸಂದರ್ಭದಲ್ಲಿ ಕನ್ಯೆಯು ಋತುಮತಿಯಾದರೆ ವಿಶೇಷ ಕಾರ್ಯಕ್ರಮಗಳನ್ನು ಮೂರುತಿಂಗಳ ನಂತರ ನೆರವೇರಿಸುತ್ತಾರೆ."[೪]

ಇತ್ತೀಚಿಗೆ ಈ ಸಮುದಾಯವು ನಾಗರಿಕ ಪ್ರಭಾವಕ್ಕೆ ಒಳಗಾಗಿ, ಬೇರೆ ಸಮುದಾಯಗಳ ಜೊತೆಯಲ್ಲಿ ನೆಲೆಸುವುದರಿಂದ ಹಳೆಯ ಸಂಪ್ರದಾಯಗಳನ್ನು ತೊಡೆದಾಕಿ ಹೊಸ ಆಚರಣೆಯ ಪದ್ಧತಿಯನ್ನು ಕಂಡುಕೊಂಡಿದ್ದಾರೆ. ಹಟ್ಟಿಯ ಹೊರಗಡೆ ಹೊಸ ಗುಡಿಸಲನ್ನು ಹಾಕುವ ಬದಲು ಮನೆಯಲ್ಲಿಯೇ ಒಂದು ಪ್ರತ್ಯೇಕ ಕೋಣೆಯಲ್ಲಿ ಅವಳನ್ನಿಟ್ಟು ೧೬ ದಿನಗಳವರೆಗೆ ವಿಶೇಷವಾದ ಸಿಹಿತಿಂಡಿಗಳನ್ನು ಕೊಡುತ್ತಾರೆ ಮತ್ತು ಬಂಗಾರದ ಒಡವೆ, ಹೊಸ ಸೀರೆ, ಕುಪ್ಪಸ, ಹೂವು ಮುಡಿಸಿ ಶೃಂಗಾರ ಮಾಡಿ ರಾತ್ರಿ ಕುರ್ಚಿಮೇಲೆ ಕೂಡ್ರಿಸುತ್ತಾರೆ.

ಹಿಂದೆ ಋತುಮತಿಯಾದ ಕನ್ಯೆಗೆ ೨ - ೩ ವರ್ಷದಲ್ಲಿ ವಿವಾಹ ಮಾಡುತ್ತಿದ್ದರು. ಆದರೆ ಇತ್ತೀಚಿನ ಶೈಕ್ಷಣಿಕ ರಂಗದಲ್ಲಿ ಸ್ತ್ರೀಯು ಸಹ ಪಾದಾರ್ಪಣೆ ಮಾಡಿದ್ದರಿಂದ ಋತುಮತಿಯಾಗಿ ೭ - ೮ ವರ್ಷಗಳಾದರೂ ವಿವಾಹವಾಗುವುದಿಲ್ಲ. ಇದರಿಂದ ಋತುಮತಿ ಸಂಪ್ರದಾಯಗಳು ಬಹಳ ಮಟ್ಟಿಗೆ ಕ್ಷೀಣಿಸುತ್ತಿವೆ. ಆರ್ಥಿಕವಾಗಿ ಹಿಂದುಳಿದ ಕೆಲವೊಂದು ಕುಟುಂಬಗಳಲ್ಲಿ ಒಂಬತ್ತನೇ ದಿನದಲ್ಲಿ ಗಂಗೆಪೂಜೆ ಮಾಡಿ ಒಳಗಡೆ ಕರೆದುಕೊಳ್ಳುತ್ತಾರೆ.

ಮದುವೆ

ಸಾಮಾನ್ಯವಾಗಿ ಬೇಡ ಸಮುದಾಯದ ಉಪ ಪಂಗಡಗಳ ಮದುವೆ ಪದ್ಧತಿಯಲ್ಲಿ ಸಾಮ್ಯತೆ ಕಂಡುಬಂದರೂ ಅಷ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಕೆಲ ವಿಶಿಷ್ಟ ಸಂಪ್ರದಾಯಗಳನ್ನು ಗುರುತಿಸಬಹುದಾಗಿದೆ. ಮೊದಲು ಅಷ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಮದುವೆ ಪದ್ಧತಿ ಸರಳವಾಗಿದ್ದು, ಕ್ರಮೇಣ ಕೆಲ ಆಚರಣೆಗಳು ರೂಢಿಸಿಕೊಂಡು ಬಂದಿರಬಹುದು. ಕಾಲಾಂತರದಲ್ಲಿ ನಾಗರಿಕತೆ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದು.

ಶತ ಶತಮಾನಗಳವರೆಗೆ ಅಲೆಮಾರಿಗಳು ಕಾಡು - ಮೇಡು, ಬೆಟ್ಟ - ಗುಡ್ಡ ಮತ್ತು ನಿರ್ಜನ ಪ್ರದೇಶದಲ್ಲಿ ಇದ್ದುಕೊಂಡು ಜೀವನ ಸಾಗಿಸುತ್ತ, ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು, ರಕ್ಷಿಸಿಕೊಂಡು ಬಂದವುಗಳಾಗಿವೆ. ಅವರದೇ ಆಗಿರುವ ರೂಢಿ - ಪದ್ಧತಿಗಳ ಹಿನ್ನೆಲೆಯಲ್ಲಿ ತಮ್ಮ ಮದುವೆ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ.

ವಿವಾಹವು ಜಗತ್ತಿನಾದ್ಯಂತ ಅಸ್ತಿತ್ವದಲ್ಲಿರುವಂತ ಒಂದು ಸಾಮಾಜಿಕ ಸಂಸ್ಥೆ. ಮೂಲಭೂತವಾಗಿ ವಿವಾಹವು ಸ್ತ್ರೀ ಮತ್ತು ಪುರುಷ ಈ ಇಬ್ಬರ ವ್ಯಕ್ತಿಗಳ ನಡುವೆ ಏರ್ಪಡುವ ಸಂಬಂಧ, ವಿವಾಹದ ಬಗ್ಗೆ ಅನೇಕ ಸಮಾಜಶಾಸ್ತ್ರಜ್ಞರೂ, ಮಾನವಶಾಸ್ತ್ರಜ್ಞರೂ ಅರ್ಥ ವಿವರಣೆ ನೀಡಿದ್ದಾರೆ.

ವೆಸ್ಟರ್ ಮಾರ್ಕ್‌ರವರ ಪ್ರಕಾರ : ''ವಿವಾಹವೆಂದರೆ ಸ್ತ್ರೀ - ಪುರುಷರ ನಡುವೆ ಏರ್ಪಡುವ ಶಾಶ್ವತ ಸಂಬಂಧ ಎಂದಿದ್ದಾರೆ.''

ಮೇಲಿನೋಸ್ಕಿಯ ದೃಷ್ಟಿಯಲ್ಲಿ : ''ಸಂತತಿಯ ಸೃಷ್ಟಿಗಾಗಿ ಹಾಗೂ ಆ ಸಂತತಿಯ ಪಾಲನೆ ಪೋಷಣೆಗಾಗಿ ವ್ಯಕ್ತಿಗಳು ಮಾಡಿಕೊಂಡಿರುವ ಒಪ್ಪಂದವೇ ವಿವಾಹ.''

According to Jacobs and Stern- Marriage is a terms for Social Relationship of husband and wife or of plural males: also used for the cermony of uniting marital partners.

ಬುಡಕಟ್ಟುಗಳು ತಮ್ಮದೇ ಆದ ಕುಲ ಚಿಹ್ನೆಯನ್ನು ಇಟ್ಟುಕೊಂಡು ಅದೇ ಸಮುದಾಯದ ಬೇರೆ ಬೆಡಗು ಅಥವಾ ಕುಲ ಚಿಹ್ನೆಗಳನ್ನು ಹೊಂದಿರುವವರ ಜೊತೆಯಲ್ಲಿ ವಿವಾಹ ಸಂಬಂಧವನ್ನು ಏರ್ಪಾಡು ಮಾಡಿಕೊಳ್ಳುತ್ತ ಬಂದಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ತಂದೆ-ತಾಯಿಗಳೆ ಮಕ್ಕಳ ಮದುವೆಯನ್ನು ಒಂದು ಕಾಲದಲ್ಲಿ ನಿರ್ಧರಿಸುತ್ತಿದ್ದರು. ವಧು-ವರರು ಮದುವೆ ಪೂರ್ವದಲ್ಲಿ ನೋಡುವುದು, ಭೇಟಿಯಾಗುವುದು ನಿಷಿದ್ಧವಿತ್ತು. ಒಂದು ಬೆಡಗಿನವರಲ್ಲಿ ವೈವಾಹಿಕ ಸಂಬಂಧಗಳು ನಿಷೇಧ, ಇದನ್ನು ಇಂದಿಗು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

ಉದಾ : ಚಿನಮೊಗಲವರ ಬೆಡಗು ಮತ್ತು ಮಂದಲವರ ಬೆಡಗು ಇವೆರಡು ಬೆಡಗುಗಳು ಬೇರೆ ಬೇರೆ ಇರುವುದರಿಂದ ವೈವಾಹಿಕ ಸಂಬಂಧಗಳು ಏರ್ಪಡುತ್ತದೆ. ಒಂದೇ ಬೆಡಗಿನಲ್ಲಿ ವಿವಾಹ ಸಂಬಂಧ ಏರ್ಪಡುವುದಿಲ್ಲ. ಅಡ್ಡಟ್ಟಿ ಮ್ಯಾಸಬೇಡರಲ್ಲಿ ಸಾಂಪ್ರದಾಯಿಕವಾಗಿ ನಡೆಯುವ ಮದುವೆಗಳು ಅವರವರ ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ಒಂದುದಿನ, ಮೂರುದಿನ, ಐದುದಿನಗಳ ಕಾಲ ವಿವಾಹ ಆಚರಣೆಗಳು ನಡೆಯುತ್ತವೆ.

ಅಡ್ಡಟ್ಟಿ ಮ್ಯಾಸಬೇಡರು ಕನ್ಯೆಯನ್ನು ನೋಡುವುದಕ್ಕೆ ಮುಂಚಿತವಾಗಿ ತಮ್ಮ ಸಮುದಾಯದ ಹಿರಿಯ ವ್ಯಕ್ತಿಗಳೆಲ್ಲರೂ ಸೇರಿಕೊಂಡು ನಿರ್ಧಾರಕ್ಕೆ ಬರುತ್ತಾರೆ. ಈ ನಿರ್ಧಾರ ಕೈಗೊಂಡ ನಂತರ ಯಾವುದಾದರೂ ಒಂದುದಿನ ನಿಗಧಿಗೊಳಿಸಿ ಒಬ್ಬ ಮುತ್ತೈದೆಯೊಂದಿಗೆ ಐದು - ಆರು ಜನ ಸೇರಿ ಕನ್ಯೆಮನೆಗೆ ಹೊರಡುತ್ತಾರೆ. ಹೆಣ್ಣಿನ ಮನೆಯಲ್ಲಿ ಇವರಿಗೆ ಅತಿಥ್ಯ ನಡೆಯುತ್ತದೆ. ವಧುವನ್ನು ನೋಡಿ ಮನೆಗೆ ಹೋಗಿ ಒಪ್ಪಿಗೆಯಾಗಿದ್ದಲ್ಲಿ ಒಪ್ಪಿದೆವೆಂದು ಹೇಳಿ ಕಳುಹಿಸುತ್ತಾರೆ.

ಮಾತುಕತೆ ಮುಗಿಸುವುದು

ಒಂದು ಶುಭ ದಿನದಲ್ಲಿ ವರನ ಕಡೆಯುವರು ಕನ್ಯೆಯ ಮನೆಗೆ ಒಬ್ಬ ಮುತ್ತೈದೆ ಹೆಣ್ಣುಮಗಳೊಂದಿಗೆ ಐದಾರು ಜನ ಸೇರಿ ಹೊರಡುತ್ತಾರೆ. ಕನ್ಯೆಯನ್ನು ನೋಡಿ ಮನೆಗೆ ಹೋಗಿ ಒಪ್ಪಿಗೆಯಾಗಿದ್ದಲ್ಲಿ ನೀವು ಬಂದು ಹುಡುಗನ ಮನೆತನ ನೋಡಿಕೊಂಡು ಹೋಗಿರಿ ಎಂದು ಹೇಳಿಬರುತ್ತಾರೆ. ಅದರಂತೆ ಒಂದು ನಿಗದಿತ ದಿನದಂದು ಹೆಣ್ಣಿನವರು ಗಂಡಿನ ಮನೆತನ ನೋಡಲು ಬರುತ್ತಾರೆ. ವರನ ಗುಣ, ಶೀಲ, ಉದ್ಯೋಗ, ಆಸ್ತಿ - ಪಾಸ್ತಿ ಇತರೆ ವಿಚಾರಗಳನ್ನು ಕುರಿತು ಕೂಲಂಕುಶವಾಗಿ ವಿಚಾರಿಸಿ ತಿಳಿದುಕೊಳ್ಳುತ್ತಾರೆ. ಪರಸ್ಪರ ಒಪ್ಪಿಗೆಯಾದರೆ ಮಾತುಕತೆ ನಡೆಯುತ್ತದೆ. ಒಪ್ಪಿಗೆಯಾಗದಿದ್ದರೆ ನಂತರ ತಿಳಿಸುವುದಾಗಿಯೂ ಹೇಳಿ, ಸಂಬಂಧ ಬೇಡ ಎಂದು ಹೇಳಿಕಳುಹಿಸುತ್ತಾರೆ. ಸಂಬಂಧ ಒಪ್ಪಿಗೆಯಾಗಿದ್ದರೆ ಮಾತುಕತೆಗಾಗಿ ಒಂದು ದಿನವನ್ನು ಗೊತ್ತುಪಡಿಸಿ ಪೂರ್ವಭಾವಿಯಾಗಿ ತಿಳಿಸುತ್ತಾರೆ. ಹೆಣ್ಣಿನ ಮನೆಯಲ್ಲೇ ಮಾತುಕತೆ ನಡೆಯುತ್ತದೆ. ಮಾತುಕತೆಗೆ ಎರಡು ಕಡೆಯ ದೈವದ ಹಿರಿಯರು ಮಧ್ಯಸ್ಥಿಕೆ ಹಾಗೂ ಮುಂದಾಳತ್ವ ಅತೀ ಮುಖ್ಯವಾಗಿರುತ್ತದೆ. ಮಾತುಕತೆ ದಿನದಂದು ಸಿಹಿ ಅಡುಗೆಮಾಡಿ ಊಟ ಮಾಡುತ್ತಾರೆ. ಮಾತುಕತೆ ಇತ್ಯರ್ಥವಾದರೆ ಊಟಮಾಡಲು ಅವಕಾಶವಿರುತ್ತದೆ. ಒಂದು ವೇಳೆ ಮಾತುಕತೆ ಮುರಿದುಬಿದ್ದರೆ ಊಟ ಮಾಡದೆ ಹಾಗೇ ತೆರಳುತ್ತಾರೆ. ಮದುವೆ ಕಾರ್ಯದ ಮುನ್ಸೂಚನೆಯ ಮೊದಲ ಹೆಜ್ಜೆಯಾಗಿಯೇ ಮಾತುಕತೆ ಕಾರ್ಯಕ್ರಮ ಮಹತ್ವದ ಸ್ಥಾನ ಪಡೆದಿರುತ್ತದೆ.

ನಿಶ್ಚಿತಾರ್ಥ - ವೀಳ್ಯಶಾಸ್ತ್ರ

ಅಡ್ನಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ವಿವಾಹಕ್ಕೆ ಪೂರ್ವ ನಿಶ್ಚಿತಾರ್ಥ ಮಾಡುವರು. ವರನ ಊರಿನ ದೈವದ ಹಿರಿಯರು ವಧುವಿನ ಮನೆಗೆ ಹೋಗುತ್ತಾರೆ. ವಧುವಿನ ಮನೆಯಲ್ಲಿ ಕರಿಕಂಬಳಿ ಗದ್ದಿಗೆಯನ್ನು ಹಾಸಿ ವರನ ದೈವದ ಹಿರಿಯರನ್ನು ಕೂಡ್ರಿಸುತ್ತಾರೆ. ಅವರಿಗೆ ಎದುರು ಮುಖಮಾಡಿ ವಧುವನ್ನು ಕೂಡ್ರಿಸುತ್ತಾರೆ. ಇವರ ಮಧ್ಯದಲ್ಲಿ ಸಿಹಿತಿಂಡಿಗಳು, ಎಲೆ, ಅಡಿಕೆ, ಕುಂಕುಮ, ಅರಿಶಿಣ, ಅಕ್ಕಿ, ಆರತಿ ಇಟ್ಟಿರುತ್ತಾರೆ. ಈ ಸಂದರ್ಭದಲ್ಲಿ ವಧುವಿನ ಮನೆಯವರು ವರನ ಮನೆಯವರಿಗೆ ಆರತಿ ಮಾಡುತ್ತಾರೆ. ನಂತರ ವಧುವಿನ ಮನೆಯವರಿಗೆ ವರನ ಮನೆಯವರು ಆರತಿ ಮಾಡಿ, ಇಂಥವರ ಕನ್ಯೆಯನ್ನು ಇಂಥವರ ಕುಲದ ಗಂಡಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ನಂತರ ಕನ್ಯೆಯ ಮನೆಯವರಿಗೆ ತಂದಿರುವ ವೀಳ್ಯವನ್ನು ಕೊಟ್ಟು, ವಧುವಿನ ಹಿರಿಯ ವ್ಯಕ್ತಿ ವರನ ಹಿರಯ ವ್ಯಕ್ತಿ, ಪರಸ್ಪರ ಬಾಯಿಯಲ್ಲಿ ಸಕ್ಕರೆ ಹಾಕಿಕೊಂಡು ಆ ದಿನವೇ ಕನ್ಯೆಯನ್ನು 'ಖಾಯಂ' ಮಾಡಿಕೊಂಡು ಮದುವೆಯ ದಿನವನ್ನು ನಿರ್ಧರಿಸುತ್ತಾರೆ. ಪರಸ್ಪರ ಸಕ್ಕರೆ ವಿನಿಯೋಗ ಮಾಡಿಕೊಳ್ಳುವಾಗ ಕನ್ಯೆಗೆ ಸಂಬಂಧಿಸಿದ ಹಿರಿಯ ವ್ಯಕ್ತಿ ವರನಿಗೆ ಸಂಬಂಧಿಸಿದ ಹಿರಿಯ ವ್ಯಕ್ತಿಗೆ ಮೊದಲು ಊಟ ನೀಡಬೇಕೆಂದು ಸಂಪ್ರದಾಯ ಇವರಲ್ಲಿದೆ. ನಂತರ ಗಂಡಿನವರು ತಂದಿರುವ ವೀಳ್ಯವನ್ನು ಕನ್ಯೆಯ ಕುಲ ಸಂಬಂಧಿಗಳೆಲ್ಲ ಸೇರಿ ಗಂಡಿನವರ ವೀಳ್ಯವನ್ನು ಸೇರಿನಿಂದ ಅಳತೆಮಾಡಿ ಅದನ್ನು ಕುಲಭಾಂದವರೆಲ್ಲ ಸಮನಾಗಿ ಹಂಚಿಕೊಳ್ಳುತ್ತಾರೆ. ನಂತರ ಮದುವೆಯ ಮುಹೂರ್ತಕ್ಕೆ ಅನುಮತಿಯನ್ನು ಕೊಡುತ್ತಾರೆ.

ಮದ್ಲಿಂಗನ ಶಾಸ್ತ್ರ

ವೀಳ್ಯಶಾಸ್ತ್ರ ಮುಗಿದ ನಂತರ ಮಾರನೆಯ ದಿನ ಬೆಳಿಗ್ಗೆ "ಮದ್ಲಿಂಗನ ಶಾಸ್ತ್ರ" ಮಾಡುತ್ತಾರೆ. ಮದುವೆ ಗಂಡಿಗೆ ಅಥವಾ ಮದ್ಲಿಂಗನಿಗೆ ಮುತ್ತೈದೆ ಸಹೋದರಿಯರು ಇತರೆ ಮುತ್ತೈದೆಯರು ತಲೆಗೆ ಎಣ್ಣೆ, ಮೈಗೆ ಅರಿಶಿಣ ಹಚ್ಚಿ ಕಳಸದಿಂದ ಆರತಿ ಬೆಳಗಿ ಮದ್ಲಿಂಗನ್ನಾಗಿ ಮಾಡುತ್ತಾರೆ. ಮದ್ಲಿಂಗನ ಕೊರಳಿಗೆ ಬೆಳ್ಳಿಯ ಸರ ಧರಿಸುತ್ತಾರೆ. ಕೈಗೆ ಬೆಳ್ಳಿಯ ಕಡಗವನ್ನು ತೊಡಿಸಿ ಕೈಗೆ ಚೂಪಾದ ಚಾಕನ್ನು ಕೊಡುತ್ತಾರೆ. ಚಾಕುವಿಗೆ ಕೆಂಪು ಬಟ್ಟೆಯನ್ನು ಸುತ್ತಿ ತುದಿಯಲ್ಲಿ ಒಂದು ನಿಂಬೆಹಣ್ಣನ್ನು ಚುಚ್ಚಿರುತ್ತಾರೆ.

ಮದ್ಲಿಂಗನ ತಲೆಗೆ ಪೇಟವನ್ನು ಸುತ್ತಿ ಹೆಗಲಿಗೆ ಕರಿಕಂಬಳಿಯನ್ನು ಹಾಕಿ ಹುತ್ತದ ಪೂಜೆಗೆ ಕರೆದುಕೊಂಡು ಹೋಗಿ ಅವನಿಂದಲೇ ಪೂಜೆ ಮಾಡಿಸುತ್ತಾರೆ. ನಂತರ ಗಂಡು ಹೆಣ್ಣಿಗೆ ಹಸೆಯನ್ನು ಎರೆಯುತ್ತಾರೆ. ಗಂಡು ಹೆಣ್ಣಿನ ಹಸೆಗಳು ಬೇರೆ ಬೇರೆಯಾಗಿರುತ್ತವೆ. ಇದನ್ನು ವಧು - ವರರ ಸಂಬಂಧಿಗಳು ಕೂಡಿಕೊಂಡು ಹಸೆಯನ್ನು ಹಚ್ಚುತ್ತಾರೆ. "ಹಸೆ ಹಚ್ಚುವುದು ಎಂದರೆ ಕರಿಯ ಕಂಬಳಿಯನ್ನು ಗದ್ದುಗೆಯನ್ನಾಗಿ ಹಾಸಿ ಅದರ ಮೇಲೆ ತೆಳ್ಳಗೆ ಅಕ್ಕಿಯನ್ನು ಹರವಿ ಅದರಲ್ಲಿ ಬೆರಳಿನಿಂದ ಹಸೆಯನ್ನು ಬರೆಯುವುದು. ಇದರ ಮೇಲೆ ಒಂದು ಮಣೆಯನ್ನು ಹಾಕಿ ಅದರ ಮೇಲೆ ಒಂದು ಬಿಳಿ ಬಟ್ಟೆಯನ್ನು ಹಾಸುತ್ತಾರೆ. ಸುತ್ತಲೂ ಕರಿಯ ಕಂಬಳಿಯನ್ನು ಹಾಸುತ್ತಾರೆ. ಹಸೆಯ ಮೇಲೆ ಕಳಸ, ಕನ್ನಡಿ ಇವುಗಳನ್ನಿಟ್ಟು ನಾಲ್ಕು ಮೂಲೆಗಳಲ್ಲಿ ನಾಲ್ಕು

ಬೆಲ್ಲದ ಉಂಡೆ, ನಾಲ್ಕು ಬೆಳ್ಳುಳ್ಳಿ, ಜೀರಿಗೆ, ಮೆಣಸು ಮೊದಲಾದವುಗಳನ್ನಿಟ್ಟು, ಅದನ್ನು ಪೂಜೆ ಮಾಡುತ್ತಾರೆ. ಇದನ್ನು ಹಸೆ ಎಂದು ಕರೆಯುತ್ತಾರೆ.''[೬] ಈ ಸಂಪ್ರದಾಯ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಧಾರೆ ಬರೆಯುವ ಕಾರ್ಯವೆಲ್ಲಾ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ವಧುವಿನವರು ಕೊಟ್ಟಂತಹ ಉಡುಗೊರೆಯನ್ನು ಮದ್ನಿಂಗನು ಧರಿಸಿಕೊಂಡು ಹೆಣ್ಣಿನ ಮನೆಯ ಬಳಿಗೆ ವಾದ್ಯಸಮೇತ ಮದುವೆಯ ಮುಹೂರ್ತಕ್ಕೆ ಕರೆತರುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರಲ್ಲಿ ತಾಳಿ ಕಟ್ಟುವದಕ್ಕಿಂತ ಮುಂಚಿತವಾಗಿ ಹುತ್ತಕ್ಕೆ ಪೂಜೆ ಮಾಡಿಕೊಂಡು ನಂತರ ವಾದ್ಯದೊಡನೆ ಕಾಡುಗೊಲ್ಲರ ಕುರಿಹಟ್ಟಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಮನೆಗೊಬ್ಬರಂತೆ ಗಂಡಿನ ತಲೆಗೆ ಹಟ್ಟಿನ ಜನ ಹಾಲೊತ್ತುತ್ತಾರೆ. ಆನಂತರ ಮಾಂಗಲ್ಯಧಾರಣೆ ನಡೆಯುತ್ತದೆ.

ಈ ಆಚರಣೆ ಮ್ಯಾಸನಾಯಕರ ಸಮುದಾಯದಲ್ಲಿ ಕಂಡುಬರುವುದಿಲ್ಲ. ಮತ್ತು ಮದುವೆ ಕಾರ್ಯ ನೆರವೇರಿಸಲು ಪುರೋಹಿತರು ಅಥವಾ ಜೋಯಿಸರು ಇರುವುದಿಲ್ಲ.

ತಾಳಿಶಾಸ್ತ್ರ

ಅಡ್ಲಟ್ಟಿ ಮ್ಯಾಸಬೇಡರು ತಾಳಿಕಟ್ಟುವ ಸಂದರ್ಭದಲ್ಲಿ ಪುಜಾರಿ ಅಥವಾ ಜಂಗಮರನ್ನು ಕರೆಸಿರುತ್ತಾರೆ. ಇವರ ಸಮ್ಮುಖದಲ್ಲಿಯೇ ಮಾಂಗಲ್ಯಧಾರಣೆ ನಡೆಯುತ್ತದೆ. ಮುಹೂರ್ತದಲ್ಲಿ ಗಂಡು-ಹೆಣ್ಣನ್ನು ಅಭಿಮುಖವಾಗಿ ಕೂಡಿಸಿ ಹಾಲುಡಿ ತುಂಬಿದ ತಂಬಿಗೆಯನ್ನು ಇಟ್ಟು ಮತ್ತು ತಂಬಿಗೆಯ ಮೇಲೆ ತೆಂಗಿನಕಾಯಿ ಇಟ್ಟಿರುತ್ತಾರೆ. ಅದಕ್ಕೆ ತಾಳಿಯನ್ನು ಕಟ್ಟಿ ತಟ್ಟೆಯಲ್ಲಿ ಇಟ್ಟಿರುತ್ತಾರೆ. ಅದನ್ನು ಕುಲದ ದೈವದವರು ಮುಟ್ಟಿ ಆಶೀರ್ವದಿಸುತ್ತಾರೆ. ನಂತರ ಕುಲದ ಸಂಬಂಧಿಕರು ಮತ್ತು ಮದುವೆಗೆ ಆಗಮಿಸಿದವರು ತಮ್ಮ ಎರಡು ಕೈಗಳಿಂದ ಹಾಲನ್ನು ಮುಟ್ಟಿ ಆರ್ಶೀವಾದ ಮಾಡುತ್ತಾರೆ. ನಂತರ ತಾಳಿಕಟ್ಟಲು ಯಜಮಾನರ ಅಪ್ಪಣೆ ಪಡೆದು ವಧುವಿಗೆ ವರನು ತಾಳಿಯನ್ನು ಕಟ್ಟುತ್ತಾನೆ. ಮದುವೆಗೆ ಬಂದಿರುವ ಬಂಧು ಬಾಂಧವರು ಅಕ್ಷತೆ ಹಾಕಿ, ನಂತರ ತಂದಿರುವ ಉಡುಗೊರೆ ಕೊಟ್ಟು ಊಟ ಮಾಡಿಕೊಂಡು ತಮ್ಮ ತಮ್ಮ ಊರುಗಳಿಗೆ ಹೊರಡುತ್ತಾರೆ. ಅದೇ ದಿನ ರಾತ್ರಿ ಊರಿನಲ್ಲಿ ನವ ದಂಪತಿಗಳ ಮೆರವಣಿಗೆ ಮಾಡುತ್ತಾರೆ.

"ಗಂಡು ಹೆಣ್ಣಿಗೆ ತಾಳಿಯನ್ನು ಕಟ್ಟುವಾಗ 'ಸೂರ್ಯ - ಚಂದ್ರರ ಸಾಕ್ಷಿಯಾಗಿ, ಗುರುಹಿರಿಯರ ಪಾದ ಸಾಕ್ಷಿಯಾಗಿ, ನಮ್ಮ ತಂದೆತಾಯಿ ಪಾದ ಸಾಕ್ಷಿಯಾಗಿ, ನಾನೇ ಗಂಡ ನೀನೇ ಹೆಂಡತಿ' ಎಂದು ಗಂಡು ಹೇಳುತ್ತಾನೆ. ಹಾಗೆಯೇ 'ಸೂರ್ಯ - ಚಂದ್ರರ ಸಾಕ್ಷಿಯಾಗಿ, ಗುರುಹಿರಿಯರ ಸಾಕ್ಷಿಯಾಗಿ, ನಮ್ಮ ತಂದೆತಾಯಿ ಪಾದ ಸಾಕ್ಷಿಯಾಗಿ, ನೀನೇ ಗಂಡ ನಾನೇ ಹೆಂಡತಿ' ಎಂದು ಹೆಣ್ಣು ಹೇಳುತ್ತಾಳೆ. ಆನಂತರ ಗಂಡು ತಾಳಿ ಕಟ್ಟುತ್ತಾನೆ."[೭]

ಮನೆದುಂಬಿಕೆ ಶಾಸ್ತ್ರ

ತಾಳಿಶಾಸ್ತ್ರ ಮುಗಿದ ನಂತರ ವಧುವನ್ನು ವರನ ಮನೆಗೆ ಕರೆದುಕೊಂಡು ಹೋಗುತ್ತಾರೆ. ವರನ ಮನೆಯಲ್ಲಿ `ಮನೆದುಂಬಿಕೆ ಶಾಸ್ತ್ರ' ಮಾಡುತ್ತಾರೆ. ವಧು - ವರರನ್ನು ಮನೆಯೊಳಗೆ ಕರೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ವರನ ಕೈಯಲ್ಲಿ ಕೂರಿಗೆ ಬಟ್ಲೂ, ಹಗ್ಗವನ್ನು ಕೊಡುತ್ತಾರೆ. ವಧುವಿನ ಕೈಯಲ್ಲಿ ಕಡೆಗೋಲು ಕೊಡುತ್ತಾರೆ. ಪಶುಪಾಲನೆ ಮತ್ತು ಕೃಷಿಯನ್ನೇ ಪ್ರಧಾನ ವೃತ್ತಿಯಾಗಿಸಿಕೊಂಡ ಅಡ್ಲಟ್ಟಿ ಮ್ಯಾಸಬೇಡರು ಕೃಷಿಬಿಟ್ಟು ಇತರೆ ಯಾವುದೇ ವೃತ್ತಿಯನ್ನು ಅನುಸರಿಸುತ್ತ ಜೀವನ ಸಾಗಿಸುತ್ತಿದ್ದರೂ ತಮ್ಮ ಕುಲದ ಮೂಲ ವೃತ್ತಿ ಕೃಷಿ ಆಗಿತ್ತು ಎಂಬುದನ್ನು ಸ್ಮರಿಸುವುದಕ್ಕೆ ಸಾಂಕೇತಿಕವಾಗಿ ವರನ ಕೈಯಲ್ಲಿ ಕೂರಿಗೆ ಬಟ್ಲೂ, ಹಗ್ಗ ಮತ್ತು ವಧುವಿನ ಕೈಯಲ್ಲಿ ಕಡೆಗೋಲು ಕೊಡುವ ಸಂಪ್ರದಾಯ ಇವರಲ್ಲಿರುವುದನ್ನು ಕಾಣಬಹುದು. ಹೆಣ್ಣು ಪಶುಪಾಲನೆಯಿಂದ ಆದಾಯವನ್ನು ಹೇಗೆ ಸಂಪಾದಿಸಬೇಕು ಎಂಬುದರ ಸಾಂಕೇತಿಕ ಚಿತ್ರಣ ಇಲ್ಲಿ ಅವರಿಗೆ ನೆನಪು ಮಾಡಿಕೊಡುತ್ತದೆ.

ಕೃಷಿಯೊಂದಿಗೆ ಪಶುಪಾಲನೆ ಇಂದಿಗೂ ಈ ಸಮುದಾಯದಲ್ಲಿ ಪ್ರಮುಖ ವೃತ್ತಿಯಾಗಿರುವುದು ಕಂಡುಬರುತ್ತದೆ. ಹೀಗಾಗಿ ಪ್ರತಿಯೊಂದು ಮನೆಯಲ್ಲಿ ಹಾಲು - ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸದಾ ಇದ್ದೇ ಇರುತ್ತದೆ. ವಧು - ವರರು ಕೂರಿಗೆ ಬಟ್ಲೂ ಮತ್ತು ಕಡೆಗೋಲು ಕೈಯಲ್ಲಿ ಹಿಡಿದುಕೊಂಡು ನಾವು ಒಕ್ಕಲುತನ ಮಾಡುತ್ತೇವೆ. ನಮ್ಮಿಂದ ಹುಟ್ಟುವಂತಹ ಮಕ್ಕಳಿಗೆ ಮತ್ತು ನಮ್ಮನ್ನೇ ನಂಬಿರುವವರಿಗೆ ಅನ್ನವನ್ನು ಕೊಡುತ್ತೇವೆ ಎಂದು ಹೇಳಿ ಮನೆಯ ಪಕ್ಕದಲ್ಲಿ ಹೊಲವನ್ನು ಬಿತ್ತುವಂತೆ ಉಳುಮೆ ಮಾಡಿ ಅದರಲ್ಲಿ ಗಂಡ - ಹೆಂಡತಿ ತಂದಿರುವ ಭತ್ತ ಅಥವಾ ರಾಗಿಯನ್ನು ಬಿತ್ತನೆ ಮಾಡಿ, ಬೆಳೆಯನ್ನು ಬೆಳೆದು, ನಂತರ ಕೊಯ್ಯುವ ಸಾಂಕೇತಿಕ ಸಂಪ್ರದಾಯ ನಡೆಯುತ್ತದೆ.

ನಂತರ ವಧು-ವರರನ್ನು ಮನೆಯ ಹೊಸ್ತಿಲು ಮೇಲೆ ವಧುವಿನ ಪಾದದ ಮಧ್ಯ ವರನ ಪಾದವನ್ನು ಇಟ್ಟು ಇಬ್ಬರು ಪಾದಗಳ ಮಧ್ಯೆ ಮೊಳೆ ಹೊಡೆಯುತ್ತಾರೆ. ಈ ಸಂದರ್ಭದಲ್ಲಿ ವರನ ಸಹೋದರಿ ಅಣ್ಣನ ಕಾಲನ್ನು ಹಿಡಿದುಕೊಳ್ಳುತ್ತಾಳೆ. ಆಗ ವರನು ಕಾಲನ್ನು ಹಿಡಿದುಕೊಂಡ ಸಹೋದರಿಗೆ ನಿಮಗೆ ಏನು ಬೇಕು ಎಂದು ಕೇಳುತ್ತಾನೆ. ಅವರು ನಿನಗೆ ಹುಟ್ಟುವ ಮಗು ಗಂಡಾಗಲಿ ಅಥವಾ ಹೆಣ್ಣಾಗಲಿ ನನ್ನ ಮಗ ಅಥವಾ ಮಗಳಿಗೆ ಕೊಡಬೇಕು ಎಂದು ಹೇಳುತ್ತಾಳೆ. ವರನು ಕಾಲನ್ನು ಹಿಡಿದ ಸಹೋದರಿಗೆ ಭಾಷೆಕೊಟ್ಟು, ಹಾಗೆ ಆಗಲಿ ಎಂದು ಹೇಳುತ್ತಾನೆ. ಆಗ ಅವಳು ಕಾಲನ್ನು ಬಿಡುತ್ತಾಳೆ. ನಂತರ ವಧು-ವರರನ್ನು ಮನೆಯ ಒಳಗಡೆ ಕರೆದುಕೊಂಡು ಅವರಿಂದ ದೇವರಿಗೆ ದೀಪ ಹಚ್ಚಿಸುತ್ತಾರೆ.

ಗಂಗೆಪೂಜೆ ಶಾಸ್ತ್ರ

ತಾಳಿಶಾಸ್ತ್ರ ಮುಗಿದ ಮಾರನೆ ದಿನ ವಧು-ವರರನ್ನು ಮನೆದುಂಬಿಸಿ, ನಂತರ ಊರ ಸಮೀಪದ ಕೆರೆ-ಬಾವಿ ಅಥವಾ ಹೊಳೆಗೆ ಕರೆದುಕೊಂಡು ಹೋಗಿ ಗಂಗೆಪೂಜೆ ಸಲ್ಲಿಸುತ್ತಾರೆ. ಪೂಜೆ ನಂತರ ತುಂಬಿದ ಕೊಡವನ್ನು ವಧುವಿನ ತಲೆಯ ಮೇಲೆ ಹೊರಿಸಿಕೊಂಡು ಬರಲಾಗುತ್ತದೆ. ಆಗ ವರನು ತನ್ನ ಮನೆಯ ಬಾಗಿಲಲ್ಲಿ ನಿಂತುಕೊಂಡು ತುಂಬಿದ ಕೊಡವನ್ನು ಪೂಜಿಸಿ ವಧುವನ್ನು ಒಳಗಡೆ ಕರೆದುಕೊಳ್ಳುತ್ತಾನೆ.

ಇತ್ತೀಚಿಗೆ ನಾಗರಿಕ ಪ್ರಭಾವದಿಂದ ಇಂದು ಸ್ವಲ್ಪ ಪ್ರಮಾಣದಲ್ಲಿ ಮದುವೆಯಲ್ಲಿ ಆಚರಿಸುವ ಸಂಪ್ರದಾಯಗಳು ಕಡಿಮೆಯಾಗಿವೆ. ಹಿಂದೆ ಐದು ಆರು ದಿನಗಳ ಕಾಲ ನಡೆಯುವಂತಹ ಮದುವೆಯ ಆಚರಣೆ ಸಂಪ್ರಾದಯಗಳು ಇಂದು ಎರಡು - ಮೂರು ದಿನಗಳಲ್ಲಿ ಮದುವೆಯ ಕಾರ್ಯಗಳನ್ನು ಮಾಡಿ ಮುಗಿಸುತ್ತಿದ್ದಾರೆ. ಅಡ್ಲಟ್ಟಿ ಮ್ಯಾಸಬೇಡರ ಸಮುದಾಯ ನಗರ ಪ್ರದೇಶಗಳಿಂದ ದೂರವಿದ್ದು, ಇನ್ನು ನದಿಬಯಲು, ಅರಣ್ಯ ಪ್ರದೇಶಗಳಲ್ಲಿ ವ್ಯವಸಾಯ, ಪಶುಸಂಗೋಪನೆ ಮಾಡಿಕೊಂಡು ತಮ್ಮ ದಿನನಿತ್ಯದ ಜೀವನ ಸಾಗಿಸುತ್ತಿದ್ದಾರೆ. ಕಾಡುಗೊಲ್ಲರು ಮತ್ತು ಬೇಡ ಸಮುದಾಯಗಳೊಂದಿಗೆ ಸಹಕಾರ ಭಾವನೆಯಿಂದ ಜೀವನ ನಡೆಸುತ್ತಾ ತಮ್ಮ ಪಾರಂಪರಿಕ ಮದುವೆ ಸಂಪ್ರದಾಯ, ಆಚಾರ - ವಿಚಾರಗಳನ್ನು ಉಳಿಸಿಕೊಂಡು ಬಂದಿದ್ದಾರೆ.

ನಗರಗಳಲ್ಲಿ ಉದ್ಯೋಗ ಮಾಡುತ್ತಾ ಜೀವನ ಸಾಗಿಸುವ ಈ ಸಮುದಾಯದ ಜನರ ಆಚಾರ - ವಿಚಾರ, ಸಂಪ್ರದಾಯಗಳ ಮೇಲೆ ಅನ್ಯ ಸಮುದಾಯಗಳ ಪ್ರಭಾವ ಪ್ರೇರಣೆ ಬೀರಿವೆ. ಹೀಗಾಗಿ ಅವರ ಆಚಾರ, ಆಚರಣೆ ಸಂಪ್ರದಾಯಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಹೊಂದಿರುವುದು ಕಂಡುಬರುತ್ತದೆ.

ಶವಸಂಸ್ಕಾರ

ಹುಟ್ಟಿದ ವ್ಯಕ್ತಿಗೆ ಸಾವು ಸಹಜ. ಅದು ಪ್ರಕೃತಿಯ ನಿಯಮ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಾವಿನ ನಂತರ ಪ್ರತಿಯೊಂದು ಬುಡಕಟ್ಟುಗಳಲ್ಲಿ ಇತರೆ ಸಮುದಾಯಗಳಲ್ಲಿ ಸೂತಕ, ವಿಧಿ, ಕರ್ಮಗಳನ್ನು ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿಸಿಗಲೆಂದು ಕೈಗೊಳ್ಳುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿಯೂ ಸಾವಿನ ನಂತರ ಅನೇಕ ವಿಧಿಕರ್ಮಗಳನ್ನು ಆಚರಿಸುತ್ತಾರೆ. ಈ ಸಮುದಾಯದಲ್ಲಿ ರೋಗದಿಂದ ಬಳಲುತ್ತಿದ್ದರೆ ಅಥವಾ ವಯಸ್ಸಾಗಿ ನಿಶಕ್ತಿಯಾಗಿ ಸಾಯುವ ಸ್ಥಿತಿಯಲ್ಲಿದ್ದರೆ ಅಂತಹ ಸಮಯದಲ್ಲಿ ವ್ಯಕ್ತಿಯ ಸಂಬಂಧಿಕರಿಗೆ ಹೇಳಿ ಕಳುಹಿಸುತ್ತಾರೆ. ಅವರೆಲ್ಲರೂ ಬಂದನಂತರ ಸಾವಿನಂಚಿನಲ್ಲಿರುವ ವ್ಯಕ್ತಿಯನ್ನು ಮನೆಯ ಹೊರಭಾಗಕ್ಕೆ ತಂದು ಮಲಗಿಸುತ್ತಾರೆ. ಸಾವಿನಂಚಿನಲ್ಲಿರುವ ವ್ಯಕ್ತಿಗೆ ಅತೀ ಇಷ್ಟವಾದರೊಬ್ಬರಿಂದ ಬಾಯಿಯೊಳಗೆ ನೀರನ್ನು ಬಿಡಿಸುತ್ತಾರೆ. ಜೀವ

ಹೋದ ತಕ್ಷಣ ಹಟ್ಟಿಯ ಹಿರಿಯರೆಲ್ಲ ಸೇರಿ ಸಂಬಂಧಪಟ್ಟ ಕುಲಬಾಂಧವರಿಗೆ ಹೇಳಿಕಳುಹಿಸುತ್ತಾರೆ. ಸಂಬಂಧಿಕರು ಎಷ್ಟೇ ದೂರವಿದ್ದರೂ ಸಾವಿನ ಸುದ್ದಿ ಮುಟ್ಟಿಸಲು ಕೆಳಜಾತಿಯ ಮಾದಿಗ ಜನರನ್ನು ಕಳುಹಿಸುತ್ತಾರೆ.

ಸಾವಿನ ಸುದ್ದಿ ಮುಟ್ಟಿದ ಕೂಡಲೆ ಊರಿನಲ್ಲಿರುವ ಕುಲಸ್ಥರು ಸತ್ತವರ ಮನೆಯಮುಂದೆ ಬಂದು ಸೇರುತ್ತಾರೆ. ಬಂಧುಗಳು ಮತ್ತು ಹಟ್ಟಿಯ ಹಿರಿಯ ವ್ಯಕ್ತಿಗಳೆಲ್ಲ ಸೇರಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಈ ಸಮುದಾಯದ ಹಿರಿಯ ವ್ಯಕ್ತಿಗಳು ಶವಕ್ಕೆ ಬೇಕಾಗುವ ಹೂವಿನಹಾರ, ಮೂರು ಮೊಳ ಬಿಳಿ ಬಟ್ಟೆ, ಹೊಸ ಮಣ್ಣಿನ ಕುಂಭ, ಪೂಜಾ ಸಾಮಗ್ರಿಗಳನ್ನು ತರುತ್ತಾರೆ. ಶವಕ್ಕೆ ಸ್ನಾನಮಾಡಿಸಿ ಕೂಡಿಸುತ್ತಾರೆ. ಹೊಸ ಬಿಳಿಯ ಬಟ್ಟೆಯನ್ನು ತಲೆಯಿಂದ ಕಾಲಿನವರೆಗೆ ಮುಚ್ಚಿ ಹಗ್ಗದಿಂದ ಅದನ್ನು ಕಟ್ಟುತ್ತಾರೆ. ಎರಡು ಬಿದಿರಿನ ಕೋಲನ್ನು ಕೊಕ್ಕೆ ಮಾಡಿ ತಲೆಗೆ ಆಸರೆಯಾಗಿ ಇಡುತ್ತಾರೆ. ಶವಸಂಸ್ಕಾರದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಎಲ್ಲ ಸಂಬಂಧಿಕರು ಸತ್ತವ್ಯಕ್ತಿಗೆ ಅಂತಿಮ ಪೂಜೆಮಾಡಿ ಕೊರಳಿಗೆ ಹೂವಿನ ಹಾರವನ್ನು ಹಾಕಿ ಮನೆಯ ಮುಂದೆ ಸಗಣಿ ಕುಳ್ಳುಗಳನ್ನು ತಂದು ಹೊಗೆ ಹಾಕುತ್ತಾರೆ. ಆ ಹೊಣೆಯನ್ನು ನೋಡಿದ ತಕ್ಷಣ ಆ ಮನೆಯಲ್ಲಿ ಯಾರೋ ಸತ್ತಿದ್ದಾರೆ ಎಂಬ ಭಾವನೆ ಜನರಲ್ಲಿ ಮೂಡಿಬರುತ್ತದೆ.

ಮನೆಯ ಮುಂದೆ ಒಂದು ಬದಿಯಲ್ಲಿ ಹೊಸ ಗಡಿಗೆಯಲ್ಲಿ ಮೂರು ಪಾವು ಅಕ್ಕಿ ಹಾಕಿ ಅನ್ನವನ್ನು ಬೇಯಿಸುತ್ತಾರೆ. ಆ ಸಮಯಕ್ಕಾಗಲೇ ಸ್ಮಶಾನದಲ್ಲಿ ಹೂಳುವ ಜಾಗವನ್ನು ಗುರುತಿಸಿ ಅದೇ ಸಮುದಾಯದವರು ಕುಣಿತೆಗೆಯುವ ಕಾರ್ಯ ನಿರ್ವಹಿಸುತ್ತಾರೆ. ಶವಸಂಸ್ಕಾರ ಮುಗಿಯುವವರೆಗೆ ಸಾವಿನ ಮನೆಯಲ್ಲಿ ಸಗಣಿ ತೆಗೆಯುವ, ಕಸ ಗೂಡಿಸುವ ಅಥವಾ ಅಡುಗೆ ಮಾಡುವ ಯಾವ ಕಾರ್ಯಗಳನ್ನು ಮಾಡುವಂತಿಲ್ಲ. ಎಲ್ಲರೂ ಸುಮ್ಮನೆ ಕುಳಿತುಕೊಂಡಿರುತ್ತಾರೆ. ಅಕ್ಕಪಕ್ಕದ ಮನೆಯವರು ಸಾವಿನ ಕುಟುಂಬದ ಸದಸ್ಯರಿಗೆ ಕಾಫಿ, ತಿಂಡಿ - ತಿನಿಸುಗಳನ್ನು ಕೊಡುತ್ತಾರೆ.

ಶವವನ್ನು ಕುಳ್ಳರಿಸಿದ ಸ್ಥಳದ ಪಕ್ಕದಲ್ಲಿ ಒಂದು ಕುಂಭವನ್ನು ಇಡುತ್ತಾರೆ. ಶವಸಂಸ್ಕಾರಕ್ಕೆ ಆಗಮಿಸಿ ದವರು ಅದಕ್ಕೆ ಪೂಜೆಮಾಡಿ ತೆಂಗಿನಕಾಯಿ ಒಡೆಯುತ್ತಾರೆ. ವಿವಾಹಿತ ಸತ್ತರೆ ಆತನ ಹೆಂಡತಿ ಎಡಭಾಗದಲ್ಲಿ ಕುಳಿತುಕೊಂಡಿರುತ್ತಾಳೆ. ಅವಳು ಹುಟ್ಟಿರುವ ಸೀರೆ ಸೆರಗಿನಿಂದ ತಲೆತುಂಬ ಹೊದ್ದುಕೊಂಡಿರುತ್ತಾಳೆ. ಈ ಸಂದರ್ಭದಲ್ಲಿ ತವರು ಮನೆಯವರು ಮಡ್ಲಕ್ಕಿ ಮತ್ತು ಸೀರೆಯನ್ನು ತಂದಿರುತ್ತಾರೆ. ಅವಳಿಗೆ ಹೊಸ ಸೀರೆಯನ್ನು ತೊಡಿಸಿ, ಹೂವು ಮುಡಿಸಿ, ಬಳೆಯನ್ನು ತೊಡಿಸಿ, ಅರಿಶಿಣ ಕುಂಕುಮ ಹಚ್ಚಿ, ಮಡ್ಲುತುಂಬ ಅಕ್ಕಿ ಹಾಕಿ ಪೂಜೆಮಾಡುತ್ತಾರೆ. ನಂತರ ಚಟ್ಟಕಟ್ಟಿ ಶವವನ್ನು ಅದರಲ್ಲಿ ಕೂಡಿಸುತ್ತಾರೆ. ''ಶವದ ಮೇಲೆ ಬಿಳಿಯ ಹೊಸ ಬಟ್ಟೆಯನ್ನು ಹಾಕಿ ಭದ್ರವಾಗಿ ಕಟ್ಟಿದ ಮೇಲೆ ಶವದ ಯಾತ್ರೆ ಪ್ರಾರಂಭವಾಗುತ್ತದೆ. ಶವದ ಮುಂದೆ ಹಿಂಡೆ ಕೂಳನ್ನು ತೆಳು ಹಗ್ಗದಿಂದ ಕಟ್ಟಿಕೊಂಡು ಹಿರಿಯ ಮಗ ಅದನ್ನು ಹಿಡಿದುಕೊಂಡು ಮುಂದೆ ಸಾಗುತ್ತಾನೆ. ಸ್ಮಶಾನ ಅರ್ಧದಾರಿಗೆ ಹೋದಮೇಲೆ ದಾರಿಯಲ್ಲಿನ ತಂಗಟೆಗಿಡ ಇಲ್ಲವೆ ಯಾವುದಾದರೊಂದು ಹಸಿರು

ಗಿಡದಲ್ಲಿ ಓಂಡೆಕೊಳನ್ನು ಇಡುತ್ತಾರೆ. ಆಗ ಹೆಣ ಹೊತ್ತವರು ಓಂದು-ಮುಂದಾಗುತ್ತಾರೆ.'' ಅಲ್ಲಿಯೇ ಅನ್ನದ ಗಡಿಗೆಯನ್ನು ಒಡೆದು ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ.

ನಂತರ ಶವವನ್ನು ಕುಣಿಯ ಒಳಗಡೆ ಇಟ್ಟು ಪ್ರತಿಯೊಬ್ಬರು ತಂಗಟೆ ಸೊಪ್ಪನ್ನು ಕುಣಿಯೊಳಗೆ ಹಾಕಿ ಒಂದೊಂದು ಹಿಡಿ ಮಣ್ಣು ಹಾಕುತ್ತಾರೆ. ಸತ್ತವನ ವಿವಾಹಿತನಾಗಿದ್ದರೆ, ಅವನ ಹೆಂಡತಿ ಇದ್ದರೆ ಅಲ್ಲಿಯೇ ''ಬಳೆ ತೆಗೆಯುವ'' ಕಾರ್ಯ ನಡೆಯುತ್ತದೆ. ಅವಳು ತೊಟ್ಟ ಬಳೆ, ಹೂವು, ಕುಂಕುಮ ಮತ್ತು ಆಭರಣಗಳನ್ನು ತೆಗೆದು ಅವಳನ್ನು ವಿಧವೆಯನ್ನಾಗಿಸುತ್ತಾರೆ. ಮಣ್ಣಲ್ಲಿರುವ ಅಕ್ಕಿಯನ್ನು ಕುಣಿಯೊಳಗೆ ಹಾಕಿಸುತ್ತಾರೆ. ಹಟ್ಟಿಯ ಹಿರಿಯ ಹೆಂಗಸರು ಈ ಕಾರ್ಯವನ್ನು ನೆರವೇರಿಸುತ್ತಾರೆ. ನಂತರ ವಿಧವೆಯನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಸ್ಮಶಾನಕ್ಕೆ ಬಂದಿರುವ ಜನರೆಲ್ಲರೂ ಕೆರೆ ಅಥವಾ ಬಾವಿಗೆ ಹೋಗಿ ನೀರು ಮುಟ್ಟಿ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಮಾಡಿಕೊಂಡು ಮನೆಗಳಿಗೆ ಹೋಗುತ್ತಾರೆ. ಈ ಸಮುದಾಯದ ಸಂಬಂಧಿಕರು ಸತ್ತವ್ಯಕ್ತಿಯ ಮನೆಯಲ್ಲಿಯ ಜ್ಯೋತಿಯನ್ನು ನೋಡಿಕೊಂಡು ಮನೆಗಳಿಗೆ ಹೋಗುತ್ತಾರೆ. ಶವಸಂಸ್ಕಾರ ಮುಗಿಸಿ ಬರುವುದರೊಳಗಾಗಿ ಮನೆಯ ಸಗಣಿ, ಕಸ ತೆಗೆದು ಮನೆಯ ಅಕ್ಕಪಕ್ಕದವರು ಸ್ವಚ್ಛ ಮಾಡಿರುತ್ತಾರೆ.

ಮೂರನೇ ದಿನ ಸೂತಕ ಕಳೆದುಕೊಳ್ಳುತ್ತಾರೆ. ಅಣ್ಣ-ತಮ್ಮಂದಿರು ಸೂತಕದ ಮನೆಯನ್ನು ಸುಣ್ಣ - ಬಣ್ಣದಿಂದ ಸ್ವಚ್ಛಗೊಳಿಸುತ್ತಾರೆ. ಮತ್ತು ಗೋಗಂಜನ್ನು ಹಾಕುತ್ತಾರೆ. ಬೆಳಿಗ್ಗೆ ಮೂರು - ನಾಲ್ಕು ಜನಸೇರಿ ಸ್ಮಶಾನಕ್ಕೆ ಹೋಗಿ ಸಮಾಧಿಯ ಮಣ್ಣನ್ನು ಸಮ ಮಾಡಿ ನೀರಿನಿಂದ ತಣ್ಣಗೆ ಮಾಡಿ ಪೂಜೆಮಾಡುತ್ತಾರೆ. ಸಮಾಧಿಯ ಮೇಲೆ ಹೊಸ ಸೋರೆಯಲ್ಲಿ ಅಕ್ಕಿ ಬೇಯಿಸುತ್ತಾರೆ. ಬೇಯಿಸಿದ ಅಕ್ಕಿಯಿಂದ ಅನ್ನವನ್ನು ಮಾಡಿ, ಅನ್ನವನ್ನು ಮೂರು ಎಲೆಗೆ ಎಡೆ ಹಾಕಿ ಪ್ರದಕ್ಷಿಣೆ ಹಾಕುತ್ತಾರೆ. ನಂತರ ಕಾಗೆಬಂದು ತಿನ್ನುವರೆಗೂ ಅಲ್ಲಿದ್ದು, ನಂತರ ಮನೆಗೆ ಬರುತ್ತಾರೆ. ''ಕಾಗೆ ಬಂದು ತಿಂದರೆ ಒಳ್ಳೆಯದಾಗುತ್ತದೆ ಎಂದು ಭಾವಿಸುತ್ತಾರೆ. ಕಾಗೆ ಬಾರದಿರದಿದ್ದರೆ ಅಯ್ಯೋ ಪಾಪಿ ಇವನು ಏನೋ ತಪ್ಪು ಮಾಡ್ಯಾನೋ ಎಂದು ತಿಳಿದುಕೊಳ್ಳುತ್ತಾರೆ.''

ಹದಿನಾರನೇ ದಿನ 'ದೊಡ್ಡ ದಿವಸ'ದ ಆಚರಣೆ ನಡೆಯುತ್ತದೆ. ಅಂದು ನೆಂಟರು, ಬಂಧು - ಬಳಗದವರು, ಸ್ನೇಹಿತರು, ಊರಿನ ಜನ ಸೇರಿರುತ್ತಾರೆ. ಸತ್ತ ವ್ಯಕ್ತಿಯ ಹೆಸರಿನಲ್ಲಿ ಹೊಸ ಬಟ್ಟೆ ಏರಿಸಿ ಪೂಜೆ ಮಾಡುತ್ತಾರೆ. ಮತ್ತು ದಿವಸಕ್ಕೆ ಬಂದಿರುವರಿಗೆಲ್ಲ ಊಟಕ್ಕೆ ಹಾಕುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರು ಮೂರನೇ ದಿನ ಕರ್ಮಕಳೆದುಕೊಳ್ಳಲು 'ಬ್ಯಾಟೆ'ಯನ್ನು ಕಡಿದು ಮಾಂಸದ ಅಡುಗೆ ಮಾಡುವುದಿಲ್ಲ. ಸಿಹಿ ಅಡಿಗೆಯನ್ನೇ ಮಾಡಿ ಕರ್ಮಕಳೆದುಕೊಳ್ಳುತ್ತಾರೆ. ''ಆದರೆ ಇವರ ಸಂಬಂಧಿಗಳೇ ಆದ ಮ್ಯಾಸನಾಯಕರು ವ್ಯಕ್ತಿ ಸತ್ತ ಸ್ಥಳದಲ್ಲಿ ಒಂದು ಟಗರು ಮರಿಯನ್ನು ಬಲಿಕೊಡುತ್ತಾರೆ. ಈ ಕರ್ಮವನ್ನು ಕಳೆದುಕೊಳ್ಳುವುದಕ್ಕೆ 'ಕರಿ' ಎಂದು ಮಾಡುತ್ತಾರೆ.''[೮] ಈ ಸಂಪ್ರದಾಯ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದಲ್ಲಿ ಕಂಡುಬರುವುದಿಲ್ಲ. ಅವರು ಮೂರನೆಯ ದಿನದ ಕಾರ್ಯದಲ್ಲಿ ಸಿಹಿಯನ್ನು ಮಾಡಿ ಎಡೆಯನ್ನು ಹಾಕುತ್ತಾರೆ. ಅಡ್ಲಟ್ಟಿ ಮ್ಯಾಸಬೇಡರು ತಮ್ಮ ಯಾವ ಆಚರಣೆಯಲ್ಲಿಯೂ ಸಹ 'ಬ್ಯಾಟಿ' ಅಥವಾ ಮಾಂಸದ ಊಟವನ್ನು ಉಪಯೋಗಿಸವುದಿಲ್ಲ.

ಸಾವಿನ ನಂತರ ಪರಿಕಲ್ಪನೆ

ಅಡ್ಲಟ್ಟಿ ಮ್ಯಾಸಬೇಡರು ಸತ್ತಂತ ವ್ಯಕ್ತಿಯಿಂದ ಏನಾದರೂ ತೊಂದರೆ ಉಂಟಾದರೆ, ಕನಸಿನಲ್ಲಿ ಕಾಣಿಸಿಕೊಂಡರೆ ಜಂಗಮರಲ್ಲಿ ಹೋಗಿ ಭವಿಷ್ಯ - ಶಕುನ ಕೇಳಿಸಿ ಸತ್ತ ವ್ಯಕ್ತಿಯ ದೋಷವನ್ನು ಹುಡುಕುತ್ತಾರೆ. ಸ್ಮಶಾನಕ್ಕೆ ಹೋಗಿ ಸಮಾಧಿಗೆ ಪೂಜೆ ಸಲ್ಲಿಸಿ ಬರುತ್ತಾರೆ. ಮತ್ತು ಸತ್ತ ವ್ಯಕ್ತಿಯ ಹೆಸರಿನಲ್ಲಿ ಹಬ್ಬದ ದಿನಗಳಲ್ಲಿ ಹೊಸ ಬಟ್ಟೆಯನ್ನು ಏರಿಸಿ ಅದಕ್ಕೆ ಶಾಂತಿ ಕೋರುತ್ತಾರೆ.

೩.೨. ವಾರ್ಷಿಕಾವರ್ತಕ ಆಚರಣೆಗಳು

ಹಬ್ಬಗಳು

"ಹಬ್ಬಗಳು ಒಂದು ಜನಾಂಗದ ಸಾಂಸ್ಕೃತಿಕ ಚಿಹ್ನೆಗಳು, ನಂಬಿಕೆಗಳು ಮತ್ತು ಸಂಪ್ರದಾಯಗಳ ಕ್ರಿಯಾ ರೂಪಗಳೇ ಹಬ್ಬಗಳು. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟಿ ಪಡೆದವು. ಹೀಗಾಗಿ ಹಲವು ಸಂಪ್ರದಾಯಗಳ ಮೊತ್ತ ಹಬ್ಬವಾಗಿದೆ."

ವಿದ್ವಾಂಸರಾದ ಬಾಗ್ಸ್ ಹೇಳುವಂತೆ "ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ" ಎಂದಿದ್ದಾರೆ.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯವು ಇತರೆ ಬುಡಕಟ್ಟುಗಳು ಆಚರಿಸುವಂತೆ ತಮ್ಮದೇ ಕೆಲವು ವೈಶಿಷ್ಟ್ಯಪೂರ್ಣ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಹಬ್ಬಗಳನ್ನು ಗಮನಿಸಬಹುದು.

ಗುಗ್ಗರಿ ಹಬ್ಬ

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯವು ಇತರೇ ಜನಾಂಗವು ಆಚರಿಸುವ ಬಹುತೇಕ ಹಬ್ಬಗಳನ್ನು ಆಚರಿಸುತ್ತಾರೆ. ಈ ಜನಾಂಗಕ್ಕೆ ವಿಶಿಷ್ಟವಾದ ಹಬ್ಬವೆಂದರೆ 'ಗುಗ್ಗರಿ ಹಬ್ಬ' ಪಶುಪಾಲನೆ, ಬೇಟೆಯ ವೃತ್ತಿಯೊಂದಿಗೆ ಬೇಸಾಯವೂ ಈ ಜನಾಂಗದ ಉದ್ಯೋಗವಾಗಿದೆ. ತಾವು ನೆಲೆಸಿರುವ ಸ್ಥಳಗಳಲ್ಲಿ ತಮ್ಮ ಪಶುಗಳಿಂದ ಭೂಮಿಯನ್ನು ಉಳಿಮೆ ಮಾಡಿ ತೊಗರಿ, ಹುರುಳಿ, ಅಲಸಂದಿ, ಹೆಸರು ಮುಂತಾದ ಧಾನ್ಯಗಳನ್ನು ಬೆಳೆಯುತ್ತಾರೆ. ವರ್ಷಕ್ಕೊಮ್ಮೆ ಭಾರತ ಹುಣ್ಣಿಮೆಯ ದಿನದಂದು ಗುಗ್ಗರಿ ಹಬ್ಬವನ್ನು ಮಾಡುತ್ತಾರೆ.

ಈ ಬುಡಕಟ್ಟು ಸಮುದಾಯವು ಈ ಗುಗ್ಗರಿ ಹಬ್ಬ ಮುಗಿಯುವವರಿಗೂ ಹುರಳಿಯನ್ನು ತಿನ್ನುವುದಿಲ್ಲ. ಇವರು ತಮ್ಮ ಮನೆ ದೇವರಾದ ಅಹೋಬಲ ನರಸಿಂಹಸ್ವಾಮಿಗೆ ಹುರುಳಿಯನ್ನು ಮೀಸಲು ಕಟ್ಟಿ, ಗುಗ್ಗರಿ

ಹಬ್ಬದ ದಿನದಂದು ಅದನ್ನು ಬೇಯಿಸಿ ಗುಗ್ಗರಿ ಮಾಡಿ ಅಹೋಬಲ ನರಸಿಂಹಸ್ವಾಮಿಗೆ ಎಡೆಕೊಟ್ಟ ನಂತರ ಹುರುಳಿ ಕಾಳನ್ನು ತಿನ್ನುತ್ತಾರೆ.

ಗುಗ್ಗರಿ ಹಬ್ಬ ಅಡ್ಲಟ್ಟಿ ಮ್ಯಾಸಬೇಡರ ಸಮುದಾಯಕ್ಕೆ ಬಹಳ ಪ್ರಮುಖವಾದದ್ದು ಮತ್ತು ಈ ಹಬ್ಬವನ್ನು ಮೂರು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ.

ಗುಗ್ಗರಿ ಹಬ್ಬದ ಸಿದ್ಧತೆ

ಅಡ್ಲಟ್ಟಿ ಮ್ಯಾಸಬೇಡರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೇವರ ಮರಿಕುಂಟೆ ಗ್ರಾಮದಲ್ಲಿ ಗುಗ್ಗರಿ ಹಬ್ಬದ ಆಚರಣೆಯನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಈ ಸಮುದಾಯವು ಗುಗ್ಗರಿ ಹಬ್ಬವನ್ನು ಮಾಡುವಾಗ ಹಟ್ಟಿಯ ಅಥವಾ ಇವರ ಸಮುದಾಯದಲ್ಲಿಯ ಒಬ್ಬ ವ್ಯಕ್ತಿಯನ್ನು ಯಜಮಾನನ್ನಾಗಿ ನೇಮಿಸುತ್ತಾರೆ. ಈ ಯಜಮಾನನ ಮೂಲಕ ಹಬ್ಬದ ಕೆಲಸ ಕಾರ್ಯಗಳು ಜರುಗುತ್ತವೆ. ಯಜಮಾನನನ್ನು ಬಿಟ್ಟು ಯಾವುದೇ ಕೆಲಸ ಕಾರ್ಯಗಳನ್ನು ಮಾಡುವುದಿಲ್ಲ. ಈ ಹಬ್ಬಕ್ಕೆ ಎಷ್ಟೇ ಹಣ ಖರ್ಚಾಗುತ್ತದೆಯೋ ಅಷ್ಟು ಹಣವನ್ನು ಈ ಸಮುದಾಯದವರೆಲ್ಲರೂ ಕೂಡಿಕೊಂಡು ಕೊಡುತ್ತಾರೆ. ಗುಗ್ಗರಿ ಹಬ್ಬಕ್ಕೆ ಬೇಕಾದ ಸಾಮಗ್ರಿಗಳನ್ನು ಚಳ್ಳಕೆರೆ ಸಂತೆಯಲ್ಲಿ ಖರೀದಿಸುತ್ತಾರೆ. ಇದು ಈ ಸಮುದಾಯಕ್ಕೆ ಬಹಳ ಹತ್ತಿರವಾದ ನಗರ ಪ್ರದೇಶವಾಗಿದೆ. ಆದ್ದರಿಂದ ಗುಗ್ಗರಿ ಹಬ್ಬಕ್ಕೆ ಬೇಕಾದ ಪೂಜಾ ಸಾಮಗ್ರಿಗಳನ್ನು ಹಾಗೂ ಯಜಮಾನ, ಪೂಜಾರಿ ಮತ್ತು ದಾಸಯ್ಯಗಳಿಗೆ ಹೊಸ ಬಿಳಿ ಬಟ್ಟೆಯನ್ನು ತರುತ್ತಾರೆ.

ನಂತರ ಈ ಸಮುದಾಯದವರು ಯಜಮಾನನ ಸಮ್ಮುಖದಲ್ಲಿ ಭಾರತ ಹುಣ್ಣಿಮೆ ಮುಗಿದ ಮಾರನೆ ದಿನದಂದು ಗುಗ್ಗರಿ ಹಬ್ಬವನ್ನು ಆಚರಿಸಲು ದಿನಾಂಕವನ್ನು ನಿಗದಿಪಡಿಸುತ್ತಾರೆ. ಮತ್ತು ಮೂರುದಿನಗಳ ಕಾಲ ಹಬ್ಬವನ್ನು ಆಚರಿಸುತ್ತಾರೆ. ಈ ಗುಗ್ಗರಿ ಹಬ್ಬದಲ್ಲಿ ಕೆಲವು ವಿಶಿಷ್ಟ ಆಚರಣೆಗಳು ಕಂಡುಬರುತ್ತವೆ. ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಗಂಗೆಪೂಜೆ

ಈ ಸಮುದಾಯದವರು ಗುಗ್ಗರಿ ಹಬ್ಬದಲ್ಲಿ ಇವರ ಮನೆದೇವರಾದ ಅಹೋಬಲ ನರಸಿಂಹಸ್ವಾಮಿ ದೇವರ ಪೂಜೆಯನ್ನು ಮಾಡುತ್ತಾರೆ. ದೇವರನ್ನು ಹಂಚಿ ಹುಲ್ಲಿನ ಗುಡಿಯಲ್ಲಿ ಕೂಡ್ರಿಸುವುದಕ್ಕಿಂತ ಮೊದಲು ಗ್ರಾಮದ ಹಿರಿಯ ವ್ಯಕ್ತಿಗಳು, ಪೂಜಾರಿಗಳು, ಗೌಡರು, ಶ್ಯಾನಭೋಗರು ಸೇರಿಕೊಂಡು ಗುಡಿಯಲ್ಲಿ ದೇವರಿಗೆ ಪೂಜೆಯನ್ನು ಸಲ್ಲಿಸಿ, ಆರತಿಯನ್ನು ಬೆಳಗುತ್ತಾರೆ. ನಂತರ ಪೂಜಾರಿಗಳು ದೇವರ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಭಕ್ತರ ಸಮೂಹಗಳೊಂದಿಗೆ ದೇವಸ್ಥಾನದಿಂದ ಹೊರಟ ಪೆಟ್ಟಿಗೆ ದೇವರು ಮೆರವಣಿಗೆ ಯೊಂದಿಗೆ ದೇವರ ಮರಿಕುಂಟೆಯಿಂದ ಎರಡು ಕಿ.ಮೀ.ದೂರದಲ್ಲಿರುವ ವೇದಾವತಿ ನದಿಗೆ ತಲುಪುತ್ತಾರೆ. ಅಲ್ಲಿ ಮರಳಿನ ಮೇಲೆ ಕರಿಕಂಬಳಿಯ ಗದ್ದಿಗೆ ಹಾಸಿ ಉತ್ಸವ ಮೂರ್ತಿಯನ್ನು ಇಡುತ್ತಾರೆ. ಜೊತೆಗೆ

ಗರಡುಗಂಭ, ಶಂಖ, ಜಾಗಟೆ, ಜಿಂಕೆಚರ್ಮ, ಜೋಳಿಗೆ, ದೇವರ ವಸ್ತುಗಳನ್ನು, ದೇವರ ಪೂಜಾಸಾಮಗ್ರಿಗಳನ್ನು ದೇವರ ಮೂರ್ತಿ ಬಳಿಯಲ್ಲಿ ಇಡುತ್ತಾರೆ. ದೇವರ ಮೂರ್ತಿಗಳನ್ನು ಹೊಳೆಯಲ್ಲಿ ತೊಳೆಯುವುದಿಲ್ಲ. ಬದಲಾಗಿ ಚಿಲುಮೆ (ವರ್ತಿ) ತೋಡಿ ಕೊಡದಲ್ಲಿ ಚಿಲುಮೆ ನೀರನ್ನು ತುಂಬಿ ದಡದ ಮೇಲೆ ಇಡುತ್ತಾರೆ. ಮತ್ತು ಗಂಗೆ ಪೂಜೆಯ ವಸ್ತುಗಳನ್ನು ಇಟ್ಟು ಚಿಲುಮೆಯ ಸುತ್ತ-ಮುತ್ತಲು ನೂರಾಒಂದು ಎಲೆ, ನೂರಾಒಂದು ಅಡಿಕೆ, ನೂರಾ ಒಂದು ತಂಬಿಟ್ಟು ಚಿಲುಮೆಯ ಸುತ್ತ ಇಡುತ್ತಾರೆ ಹಾಗೂ ನಾಲ್ಕು ಮೂಲೆಗಳಲ್ಲಿ ತೆಂಗಿನಕಾಯಿ, ಬಾಳೆಹಣ್ಣು ಇಡುತ್ತಾರೆ. ಮತ್ತು ನೂರಾಒಂದು ಅನ್ನದ ಎಡೆ ಹಾಕಿ ಚಿಲುಮೆಯಲ್ಲಿ ಪೂಜಾರಿಯು ದೇವರ ಮೂರ್ತಿಗಳನ್ನು ಮತ್ತು ಪೆಟ್ಟಿಗೆ ದೇವರನ್ನು ತೊಳೆದು: ಶಂಖ, ಜಾಗಟೆ, ಉರುಮೆ ವಾದ್ಯಗಳೊಂದಿಗೆ ದೇವರಪೂಜೆ ಮಾಡುತ್ತಾನೆ. ಈ ಸಂದರ್ಭದಲ್ಲಿ ಬಾಳೆಹಣ್ಣು, ವೀಳ್ಯದೆಲೆ, ಐದರೂಪಾಯಿ ಇಪ್ಪತ್ತೈದು ಪೈಸೆ ಕಾಣಿಕೆಯನ್ನು ಇಡುತ್ತಾರೆ. ಈ ಗಂಗೆಪೂಜೆ ಸಂದರ್ಭದಲ್ಲಿ ಸಾವಿರಾರು ಭಕ್ತರ ಸಮೂಹವು ಸೇರಿರುತ್ತದೆ.

ಗಂಗೆಪೂಜೆಯ ನಂತರ ಪೂಜಾರಿ ದೇವರ ಬುಟ್ಟಿಯನ್ನು ಹೊತ್ತುಕೊಂಡು ಹಂಚಿ ಹುಲ್ಲಿನ ಗುಡಿಯ ಸಮೀಪಕ್ಕೆ ಹೊರಡುತ್ತಾನೆ. ಇಲ್ಲಿ ಅನಾರೋಗ್ಯದಿಂದ ಬಳಲುವ ಪುರುಷರು, ಮಹಿಳೆಯರು, ಹರಕೆ ಹೊತ್ತವರು ಮತ್ತು ಮಕ್ಕಳ ಫಲ ಬೇಕೆನ್ನುವವರು ತೊಯ್ದ ಬಟ್ಟೆಯಿಂದ ಮಡಿಯಿಂದ ದೇವರ ಬುಟ್ಟಿಯನ್ನು ಹೊತ್ತುಕೊಂಡಿರುವ ಪೂಜಾರಿಯ ಮುಂದೆ ಅಡ್ಡ ಬೀಳುತ್ತಾರೆ. ಆಗ ಪೂಜಾರಿ ಅವರನ್ನು ದಾಟತ್ತ ಮುಂದೆ ಹೋದರೆ ಅವರ ಬಯಕೆಗಳು ಈಡೇರುತ್ತವೆ ಎಂಬ ನಂಬಿಕೆ ಅವರಲ್ಲಿದೆ.

ವೇದಾವತಿ ನದಿಯಲ್ಲಿ ಗಂಗಾ ಪೂಜೆಯನ್ನು ಮಾಡಿಕೊಂಡು ದೇವರ ಬುಟ್ಟಿಯನ್ನು ಹೊತ್ತುಕೊಂಡು, ಕಾಡುಗೊಲ್ಲರ ಹಟ್ಟಿ ನಲ್ಲೂರ ಹಳ್ಳಿಗೆ ಬರುತ್ತಾರೆ. ಅಲ್ಲಿ ಕಾಡುಗೊಲ್ಲ ಸಮುದಾಯದ ಚಿಕ್ಕಣ್ಣ ಎಂಬುವರ ದೊಡ್ಡ ಮನೆತನ ಇದೆ. ಅಲ್ಲಿಗೆ ಬಂದು ಮಣೇವು ಹಾಕುತ್ತಾರೆ. ಅಲ್ಲಿರುವ ಹಟ್ಟಿಯ ಭಕ್ತರೆಲ್ಲರೂ ಸೇರಿ ದೇವರಿಗೆ ಅಕ್ಕಿ, ಹುರುಳಿ, ಬೆಲ್ಲವನ್ನು ನೀಡುತ್ತಾರೆ. ನಂತರ ಹಂಚಿಹುಲ್ಲಿನ ಗುಡಿಸಲಿಗೆ ದೇವರ ಬುಟ್ಟಿಯನ್ನು ತರುತ್ತಾರೆ. ಕಾಡುಗೊಲ್ಲರ ಸಮುದಾಯದವರು ವೇದಾವತಿ ನದಿಯಿಂದ ತಮ್ಮ ಹಟ್ಟಿಯವರೆಗೂ ದಾರಿಯಲ್ಲಿ ಕಲ್ಲು ಮುಳ್ಳುಗಳನ್ನು ತೆಗೆದು ಸ್ವಚ್ಛಗೊಳಿಸಿ ನೀರನ್ನು ಹಾಕುತ್ತಾರೆ.

ಹಂಚಿ ಹುಲ್ಲಿನ ಗುಡಿಸಲು

ದೇವರ ಮೂರ್ತಿಯನ್ನು ಗಂಗೆಯಲ್ಲಿ ಪೂಜೆ ಮಾಡಿಕೊಂಡು ನಂತರ ಗುಡಿಸಲಿಗೆ ತಂದು ಕೂಡ್ರಿಸುತ್ತಾರೆ. ಈ ಗುಡಿಯನ್ನು ಹಂಚಿಹುಲ್ಲಿನಿಂದ ನಿರ್ಮಿಸಿರುತ್ತಾರೆ. ದೇವರನ್ನು ಕುಳ್ಳರಿಸಲು ಗದ್ದಿಗೆಯನ್ನು ಕಟ್ಟಿ ಅದರ ಮೇಲೆ ಆರು ಅಡಿ ಎತ್ತರದ ಹಂಚಿಹುಲ್ಲಿನ ಗುಡಿಸಲನ್ನು ನಿರ್ಮಿಸಿರುತ್ತಾರೆ. ಮತ್ತು ಹಂಚಿಹುಲ್ಲಿನ ಗುಡಿಸಲು ಸುತ್ತ ಕಳ್ಳೆಪೌಳಿಯನ್ನು ಹಾಕಿ ಮತ್ತೆ ಅದರ ಸುತ್ತಲು ಎಂಟು ಅಡಿ ಎತ್ತರ ಮುಳ್ಳಿನ ಕಳ್ಳೆಪೌಳಿಯನ್ನು ಹಾಕಿರುತ್ತಾರೆ. ಪೂರ್ವ ದಿಕ್ಕಿಗೆ ದೇವರನ್ನು ಕೂಡ್ರಿಸುತ್ತಾರೆ ಮತ್ತು ಅದೇ ದಿಕ್ಕಿನಲ್ಲಿ ಹಂಚಿಹುಲ್ಲಿನ ಗುಡಿಗೆ ಹೋಗಲು ಬಾಗಿಲನ್ನು ತೆರೆದಿರುತ್ತಾರೆ. ಈ ಹಂಚಿಹುಲ್ಲಿನ ಗುಡಿಯನ್ನು ಮತ್ತು ಕಳ್ಳೆಪೌಳಿಯನ್ನು ಕಾಡುಗೊಲ್ಲ

ಸಮುದಾಯದವರೇ ಪ್ರತಿವರ್ಷ ಗುಗ್ಗರಿ ಹಬ್ಬದ ದಿನದಂದು ಹಾಕುತ್ತಾರೆ. ಕಳ್ಳೆಪೌಳಿಯ ಒಳಗಡೆ ಕೀಳುಜಾತಿ ಸಮುದಾಯದವರು ಹೋಗುವಂತಿಲ್ಲ. ಅವರು ಕಳ್ಳೆಪೌಳಿಯ ಹೊರಗಡೆ ನಿಂತು ದೇವರಿಗೆ ಕೈ ಮುಗಿಯುತ್ತಾರೆ. ಆ ದಿನ ರಾತ್ರಿ ಅಹೋಬಲ ನರಸಿಂಹಸ್ವಾಮಿ ಪೆಟ್ಟಿಗೆ ದೇವರನ್ನು ಹುಂಚಿಹುಲ್ಲಿನ ಗುಡಿಯಲ್ಲಿ ಪೂಜೆ ಸಲ್ಲಿಸುತ್ತಾರೆ. ಆದರೆ ರಾತ್ರಿ ಯಾವುದೇ ವಿಶೇಷ ಕಾರ್ಯಕ್ರಮಗಳು ನಡೆಯುವುದಿಲ್ಲ.

ಗುಗ್ಗರಿ ಹಬ್ಬದ ಎರಡನೇ ದಿನ ಬೆಳಿಗ್ಗೆ ಭಕ್ತರು ತಂದುಕೊಟ್ಟಂತಹ ಅಕ್ಕಿ, ಹುರುಳಿಯನ್ನು ಕಳ್ಳೆಪೌಳಿಯ ಒಳಗಡೆ ಬೇಯಿಸುತ್ತಾರೆ. ಈ ಸಮುದಾಯದವರು ಹುರುಳಿಯನ್ನು ಬೇಯಿಸಿ ಗುಗ್ಗರಿ, ಅಕ್ಕಿಯ ಅನ್ನ ಮಾಡಿ ದೇವರಿಗೆ ಎಡೆ ಕೊಡುತ್ತಾರೆ. ಯಾವುದೇ ಸಿಹಿ ಅಡಿಗೆ ಮಾಡುವುದಿಲ್ಲ. ಪ್ರಾಚೀನ ಕಾಲದಿಂದಲೂ ಇವರ ದೇವರಿಗೆ ಹುರುಳಿ ಗುಗ್ಗರಿಯನ್ನು ಎಡೆ ಹಾಕುವ ಪದ್ಧತಿಯುಂಟು.

ಬೆಳಿಗ್ಗೆ ಹತ್ತು ಗಂಟೆಗೆ ಹುಂಚಿಹುಲ್ಲಿನ ಗುಡಿಯಲ್ಲಿನ ದೇವರಿಗೆ ಅಲಂಕಾರ ಮಾಡುತ್ತಾರೆ. ದೇವರಿಗೆ ಕೆಂಪುನಾಮ, ಹೊಂಬಾಳೆ, ಹೂವಿನ ಹಾರದಿಂದ ಅಲಂಕರಿಸಿ ಸಂಬ್ರಾಣಿ ಧೂಪ ಹಾಕುತ್ತಾರೆ. ಶಂಖ, ಜಾಗಟೆ, ಗರುಡುಗಂಭವನ್ನು ಇಟ್ಟು ಹುರುಳಿ ಗುಗ್ಗರಿ ಮತ್ತು ಅನ್ನ ಮೊಸರು ಎಡೆ ಹಾಕುತ್ತಾರೆ. ಪೂಜೆ ಮಾಡುವಾಗ ದಾಸಯ್ಯಗಳು ಕೆಂಪು ನಾಮ ಹಣೆಗೆ ಹಚ್ಚಿಕೊಂಡು ಶಂಖ ಊದುತ್ತಾ, ಜಾಗಟೆ ಬಡಿಯುತ್ತಾ, ಪೌಳಿಯ ಹೊರಗಡೆ ಆದಿದ್ರಾವಿಡರು ಉರಿಮೆ ಬಡಿಯುತ್ತಾರೆ. ದೇವರ ಪೂಜೆಯನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ನಂತರ ಪೌಳಿಯ ಸಮೀಪದಲ್ಲಿ ಇರುವ ಅಹೋಬಲ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಮತ್ತು ಶಿವಶರಣೆ ಗೂಲೇಬಮ್ಮ ದೇವತೆಗೆ ಪೂಜೆಯನ್ನು ಸಲ್ಲಿಸಿ ಗುಗ್ಗರಿ ಮತ್ತು ಅನ್ನ ಮೊಸರನ್ನು ಎಡೆ ಹಾಕುತ್ತಾರೆ. ನಂತರ ಲೋಬಾನ ಹಾಕುತ್ತಾರೆ. ಬಂದಂತಹ ಭಕ್ತರು ದೇವರಿಗೆ ಬಾಳೆಹಣ್ಣು, ತೆಂಗಿನಕಾಯಿ ನೈವೇದ್ಯ ಸಲ್ಲಿಸುತ್ತಾರೆ. ಮಧ್ಯಾಹ್ನ ೧೨ ಗಂಟೆಗೆ ಬಿಲ್ಲುಗೂಡನ್ನು ಆಡುತ್ತಾರೆ.

ಬಿಲ್ಲುಗೂಡಿನ ಪೂಜೆ

ಅಹೋಬಲ ನರಸಿಂಹಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಮಧ್ಯಾಹ್ನ ೧೨ ಗಂಟೆಗೆ ದಾಸಯ್ಯಗಳು ಬಿಲ್ಲುಗೂಡನ್ನು ಆಡುತ್ತಾರೆ. ಅಪ್ಪಟ್ಟಿ ಮ್ಯಾಸಬೇಡರ ಸಮುದಾಯದವರು ಮತ್ತು ದೇವರ ಮರಿಕುಂಟೆ ಒಬ್ಬ ದಾಸಯ್ಯ ಸೇರಿಕೊಂಡು ಈ ಬಿಲ್ಲುಗೂಡನ್ನಾಡುತ್ತಾರೆ. ಮೊದಲು ಬಿಲ್ಲುಗೂಡನ್ನು ಮಾಡುತ್ತಾರೆ. ಈ ಬಿಲ್ಲುಗೂಡಿನ ಪೂಜೆಯಲ್ಲಿ ಎರಡು ಕರಿಭೂತ ಮತ್ತು ಕೆಂಪುಭೂತಗಳನ್ನು ಇಡುತ್ತಾರೆ. ಇವುಗಳ ಮಧ್ಯದಲ್ಲಿ ಅಹೋಬಲ ನರಸಿಂಹಸ್ವಾಮಿಯ ಬಾಣಗಳನ್ನು ಇಟ್ಟು, ಇವುಗಳ ಮುಂದೆ ಬಿಳಿ ಬಟ್ಟೆಯನ್ನು ನೆಲದ ಮೇಲೆ ಹಾಸಿ ಶಂಖ, ಜಾಗಟೆ, ಗರುಡುಗಂಭವನ್ನು ಇಟ್ಟಿರುತ್ತಾರೆ. ಹೊಂಬಾಳೆಯನ್ನು ಭೂತಗಳ ಮೇಲೆ, ಬಾಣಗಳ ಮೇಲೆ ಇಟ್ಟು ಅಲಂಕಾರ ಮಾಡುತ್ತಾರೆ. ಬಾಣ ಮತ್ತು ಭೂತಗಳ ಸುತ್ತಲೂ ಚೌಕಾರವಾಗಿ ಕೆಂಪುವಸ್ತ್ರ ಹಾಸುತ್ತಾರೆ. ಭೂತಗಳ ಮುಂದೆ ಬಾಗಿಲು ಮಾಡಿ ಗರುಡು ಗಂಭವನ್ನಿಟ್ಟು ದೀಪ ಹಚ್ಚುತ್ತಾರೆ. ನೆಲದ ಮೇಲೆ ಹಾಸಿದ ಕೆಂಪುವಸ್ತ್ರದ ಮೇಲೆ ಎಂಟು ಭಾಗಗಳಲ್ಲಿ ಬಾಳೆ ಎಲೆಯನ್ನಿಟ್ಟು ಹುರುಳಿ ಗುಗ್ಗರಿ ಅನ್ನ, ತೆಂಗಿನಕಾಯಿ, ಹೊಂಬಾಳೆಯನ್ನಿಟ್ಟಿರುತ್ತಾರೆ ಮತ್ತು ನೂರೊಂದು ಎಡೆಯನ್ನು ಹಾಕುತ್ತಾರೆ.

ಹೀಗೆ ಬಿಲ್ಲುಗೂಡನ್ನು ತಯಾರಿಸಿದ ನಂತರ ಅಡ್ನಲ್ಟಿ ಸಮುದಾಯದವರು ಮತ್ತು ದೇವರಮರಿಕುಂಟೆ ಒಬ್ಬ ದಾಸಯ್ಯ ಇಬ್ಬರು ವ್ಯಕ್ತಿಗಳು ಸೇರಿ ಬಿಲ್ಲುಗೂಡಿನ ಮುಂದೆ ಆರ್ಭಟ ಮಾಡುತ್ತ ಬಿಲ್ಲುಗೂಡನ್ನು ಸುತ್ತುತ್ತಾ ಬಿಲ್ಲುಗೂಡಿನ ಮುಂದೆ ಇಟ್ಟಂತಹ ಮೊಸರನ್ನವನ್ನು ಬಾಯಿಂದ ಬಗ್ಗಿ ತಿನ್ನುತ್ತಾರೆ. ಅವರ ಮೈಮೇಲೆ ಭೂತಗಳು ಬಂದಿದ್ದರಿಂದ ಅವರು ಪ್ರಜ್ಞೆಯನ್ನು ಕಳೆದುಕೊಂಡು ಈ ರೀತಿ ಆರ್ಭಟ ಮಾಡುತ್ತಾರೆ ಎಂದು ಹೇಳುತ್ತಾರೆ. ಅವರ ಮೇಲೆ ನೀರನ್ನು ಹಾಕಿದ ನಂತರ ಪ್ರಜ್ಞೆ ಮರಳುತ್ತದೆ. ಬಿಲ್ಲುಗೂಡು ಆಡುವಾಗ ಸುತ್ತಲೂ ಜನ ಸಮೂಹ ನೆರದಿರುತ್ತದೆ. ಇದಾದನಂತರ ಭಕ್ತರೆಲ್ಲ ಹುರಳಿ ಗುಗ್ಗರಿಯ ಪ್ರಸಾದವನ್ನು ಸೇವಿಸುತ್ತಾರೆ.

ದೇವರ ಗದ್ದಿಗೆ

ದೇವರ ಗದ್ದಿಗೆ ಮಾಡುವಾಗ ಕರಿಕಂಬಳಿಯನ್ನು ನೆಲದ ಮೇಲೆ ಹಾಸಿ ಅದರ ಮೇಲೆ ಎಲೆ, ಅಡಿಕೆ, ಗರುಡಗಂಭ ಇಟ್ಟು ದಾಸಯ್ಯಗಳು ನಿಂತಿರುತ್ತಾರೆ. ಪೂಜೆಗೆ ಬಂದಂತಹ ಭಕ್ತರು ದೇವರ ಗದ್ದಿಗೆಯ ಮೇಲೆ ಕಾಣಿಕೆಯನ್ನು ಹಾಕಿ ಪೂಜಾರಿ ಮತ್ತು ದಾಸಯ್ಯನ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಈ ದೇವರಗದ್ದಿಗೆ ಕಳ್ಳೆಪೌಳಿಯ ಒಳಗಡೆ ಇರುತ್ತದೆ.

ಬಸವನ ಗದ್ದಿಗೆ

ದೇವರ ಗದ್ದಿಗೆ ನಂತರ ಪೌಳಿಯ ಒಳಗಡೆ ಕಾಡುಗೊಲ್ಲ ಸಮುದಾಯದವರು ಪಶುಗಳನ್ನು ಮತ್ತು ದೇವರ ಎತ್ತುಗಳನ್ನು ಕಳ್ಳೆಪೌಳಿಯ ಒಳಗಡೆ ಕೂಡಿಹಾಕಿರುತ್ತಾರೆ. ಅವುಗಳಿಗೆ ಪೂಜಾರಿಗಳು ಪೂಜೆಮಾಡಿ ಹುರುಳಿ ಗುಗ್ಗರಿ ಮತ್ತು ಅನ್ನದ ಎಡೆಯನ್ನು ಕೊಟ್ಟು ಪೂಜೆ ಸಲ್ಲಿಸುತ್ತಾರೆ.

ಅಡ್ಲಟ್ಟಿ ಮ್ಯಾಸಬೇಡರು ಹಂಚಿಹುಲ್ಲಿನ ಗುಡಿ ಅದರ ಸುತ್ತಲು ಕಳೆಪೌಳಿಯನ್ನು ನಿರ್ಮಿಸಿ, ದೇವರೆತ್ತಿನ ಪೂಜೆಮಾಡಲಿಕ್ಕೆ ಕಾರಣವೇನೆಂದರೆ ಹಿಂದೆ ಈ ಬುಡಕಟ್ಟು ಸಮುದಾಯದವರು ತಮ್ಮ ದನಕರುಗಳನ್ನು ಮೇಯಿಸುತ್ತ ತಮ್ಮ ದೇವರುಗಳನ್ನು ತಮ್ಮ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತಿದ್ದರು. ಇವರು ನೆಲೆಸಿರುವಂತಹ ಜಾಗದಲ್ಲಿ ದನಕರುಗಳನ್ನು ಕಟ್ಟಿಹಾಕುತ್ತಿದ್ದಿಲ್ಲ. ಅದರ ಬದಲಿಗೆ ಸುತ್ತ ಕಳ್ಳೆಪೌಳಿಯನ್ನು ಹಾಕಿ ಅದರಲ್ಲಿ ತಮ್ಮ ದನಕರುಗಳನ್ನು ಬಿಡುತ್ತಿದ್ದರು. ಕಳ್ಳೆಪೌಳಿಯ ಒಳಗಡೆ ಇನ್ನೊಂದು ಕಳ್ಳೆಪೌಳಿಯನ್ನು ಹಾಕಿ ಅದರ ಮಧ್ಯದಲ್ಲಿ ಗದ್ದಿಗೆ ಮಾಡಿ ಹಂಚಿಹುಲ್ಲಿನ ಗುಡಿ ನಿರ್ಮಿಸಿ ತಮ್ಮ ದೇವರುಗಳನ್ನು ಕೂಡಿಸುತ್ತಿದ್ದರು. ಮತ್ತು ಇವರು ವಾಸಿಸುತ್ತಿದ್ದರು. ಹೀಗೆ ಹಾಕುವುದರಿಂದ ಒಳಗಡೆ ಯಾವುದೇ ಪ್ರಾಣಿಗಳು, ಕೋಳಿಗಳು ಒಳಗಡೆ ಬರುವುದಿಲ್ಲ. ರಕ್ಷಣೆ ದೃಷ್ಟಿಯಿಂದ ಈ ರೀತಿ ನಿರ್ಮಿಸಿಕೊಳ್ಳುತ್ತಿದ್ದರು. ಮತ್ತು ತಮ್ಮ ನೆಲೆಗಳ ಸಮೀಪದಲ್ಲಿ ಭೂಮಿಯನ್ನು ಸಾಗವಳಿ ಮಾಡಿಕೊಂಡು ಹುರುಳಿ, ಭತ್ತವನ್ನು ಬೆಳೆಯುತ್ತಿದ್ದರು. ಹುರುಳಿ ಗುಗ್ಗರಿ, ಭತ್ತದಿಂದ ಅನ್ನವನ್ನು ತಯಾರಿಸಿ ದೇವರಿಗೆ ಎಡೆ ಕೊಡುತ್ತಿದ್ದರು. ಈ ಆಚರಣೆಯನ್ನು ಹಿಂದಿನಿಂದಲೂ ಇಂದಿನವರೆಗೂ ನಡೆಸಿಕೊಂಡು ಬಂದಿದ್ದಾರೆ.

ಮಣೇವು ಕುಣಿತ

ರಾತ್ರಿ ಹಂಚಿಹುಲ್ಲಿನ ಗುಡಸಲಿನಿಂದ ಪೆಟ್ಟಿಗೆ ದೇವರನ್ನು ಹೊತ್ತುಕೊಂಡು ಕಳ್ಳಿಪೌಳಿಯನ್ನು ದಾಟಿ ಓಬಳನರಸಿಂಹಸ್ವಾಮಿಯ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಕೊಂಡು ಗೂಲೋಬಮ್ಮನ ಗುಡಿಯ ಮುಂದೆ ಮಣೇವು ಕುಣಿಯುತ್ತಾರೆ. ಗುಗ್ಗರಿ ಹಬ್ಬದ ಎರಡನೇ ದಿನದ ರಾತ್ರಿ ೧೧.೩೦ಕ್ಕೆ ಈ ಮಣೇವು ಕುಣಿಯುತ್ತಾರೆ. ಗೊಲೋಬಮ್ಮ ದೇವತೆಯ ಗುಡಿಯ ಮುಂದೆ ಕರಿಕಂಬಳಿ ಗದ್ದಿಗೆ ಹಾಸಿ, ಅದರ ಮೇಲೆ ಭಕ್ತಾದಿಗಳು ತಂದುಕೊಟ್ಟಂತಹ ಬೆಲ್ಲವನ್ನು ರಾಶಿ ಹಾಕುತ್ತಾರೆ. ಅದರ ಸುತ್ತಲೂ ಪೂಜಾರಿಗಳು ದೇವರ ಬುಟ್ಟಿಯನ್ನು ಹೊತ್ತುಕೊಂಡು ಗರಗರನೆ ತಿರುಗುತ್ತಾರೆ. ಇದಕ್ಕೆ 'ಮಣೇವು ಕುಣಿತ' ಎಂದು ಹೇಳುತ್ತಾರೆ.

ಕರಿಕಂಬಳಿಯ ಗದ್ದಿಗೆಯ ಸುತ್ತ ಮೂರು ಜನ ಪುಜಾರಿಗಳು ಮತ್ತು ದೇವರ ಬುಟ್ಟಿಯನ್ನು ಹೊತ್ತುಕೊಂಡು ಗರಗರ ತಿರುಗುತ್ತ ಬೆಲ್ಲದ ರಾಶಿಯ ಗದ್ದಿಗೆಯ ಸುತ್ತ ಸುಮಾರು ೩೦-೪೦ ನಿಮಿಷಗಳ ಕಾಲ ಗರಗರನೆ ತಿರುಗುತ್ತಾ ಕುಣಿಯುತ್ತಾರೆ. ಉರುಮೆ ವಾದ್ಯದ ಗತ್ತಿಗೆ ತಕ್ಕಂತೆ ಮಣೇವು ಕುಣಿಯುತ್ತಾರೆ. ಮಣೇವು ಕುಣಿತ ನಂತರ ದೇವರ ಮರಿಕುಂಟೆಯಲ್ಲಿರುವ ದೇವಸ್ಥಾನಕ್ಕೆ ಹೋಗುವ ಸಂದರ್ಭದಲ್ಲಿ ಹರಕೆ ಹೊತ್ತವರು ಮತ್ತು ಮಕ್ಕಳ ಫಲ ಬೇಕೆನ್ನುವವರು ದೇವರ ಬುಟ್ಟಿಯನ್ನು ಹೊತ್ತುಕೊಂಡ ಪೂಜಾರಿಯ ಮುಂದೆ ಅಡ್ಡ ಬೀಳುತ್ತಾರೆ. ಆಗ ದೇವರ ಬುಟ್ಟಿಯನ್ನು ಹೊತ್ತುಕೊಂಡ ಪೂಜಾರಿ ಅವರ ಮೇಲೆ ದಾಟುತ್ತಾನೆ. ನಂತರ ಕಾಣಿಕೆಯನ್ನು ನೀಡಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಮಣೇವು ಕುಣಿತದ ಸಂದರ್ಭದಲ್ಲಿ ಕರಿಕಂಬಳಿಯ ಗದ್ದಿಗೆಯ ಮೇಲೆ ಸುಮಾರು ೩೦ ಕ್ವಿಂಟಲ್ ಬೆಲ್ಲದರಾಶಿ ಬಿದ್ದಿರುತ್ತದೆ.

ತೀ.ನಂ.ಶಂಕರನಾರಾಯಣನವರು 'ಕಾಡುಗೊಲ್ಲ ಸಂಪ್ರದಾಯಗಳು ಮತ್ತು ನಂಬಿಕೆಗಳು' (ಪುಟ ೧೩೪) ಎಂಬ ಪುಸ್ತಕದಲ್ಲಿ ''ಮಣೇವು ಕುಣಿತವನ್ನು ಗೊರವರು, ಗೊಲ್ಲರು ಮತ್ತು ವೆಂಕಟರಮಣನ ಭಕ್ತರಲ್ಲಿಯೂ ರೂಢಿಯಲ್ಲಿರುವ ಸಂಪ್ರದಾಯ ಇದಾಗಿದೆ. ಮತ್ತು ದೇವರ ದರ್ಶನಕ್ಕೆ ಹೊರಡುವಾಗ ಇದನ್ನು ನಡೆಸುತ್ತಾರೆ. ಬೆಲ್ಲದ ರಾಶಿ ಈ ದೇವರಿಗೆ ಬಹಳ ಪ್ರಿಯವಾದುದು. ಹಣದ ಕಾಣಿಕೆ ಬಹಳ ಕಡಿಮೆ. ಮಣೇವು ಆಡುವ ಸಂದರ್ಭದಲ್ಲಿ ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಜನರು ಸೇರಿರುತ್ತಾರೆ. ಈ ಆಚರಣೆಯಲ್ಲಿ ಕೇವಲ ಬುಡಕಟ್ಟುಗಳ ಸಮುದಾಯಗಳು ಮಾತ್ರ ಸೇರಿರದೆ ಹಲವು ಜಾತಿಯ ಜನರು ಸಹ ಸೇರಿರುತ್ತಾರೆ'':

ಮೇಲ ದೀಪ ಹಚ್ಚುವುದು

ಎರಡನೆ ದಿನ ರಾತ್ರಿ ಮಣೇವು ಕುಣಿತದ ನಂತರ ದೇವರ ಬುಟ್ಟಿಯನ್ನು ಹೊತ್ತುಕೊಂಡು ಕಾಡುಗೊಲ್ಲರ ಹಟ್ಟಿಗೆ ಹೋಗಿ ಪೂಜೆ ಮಾಡಿಕೊಂಡು ಬೆಳಿಗ್ಗೆ ಐದು ಗಂಟೆ ಸುಮಾರಿಗೆ ದೇವರ ಮರಿಕುಂಟೆಯ ದೇವಸ್ಥಾನಕ್ಕೆ ಬರುತ್ತಾರೆ. ನಂತರ ಓಬಳದೇವರ ದೇವಸ್ಥಾನದ ಎದುರುಗಡೆ ಇರುವ ಕಲ್ಲುಕಂಭವನ್ನು ಈ ಸಮುದಾಯದ

ಒಬ್ಬ ವ್ಯಕ್ತಿ ಹಿರಿ ದೀಪ ಹಚ್ಚುತ್ತಾನೆ. ನೆರದಂತ ಭಕ್ತರು ಕಲ್ಲು ಕಂಬದ ಕಟ್ಟೆಗೆ ತೆಂಗಿನಕಾಯಿ ಒಡೆಯುತ್ತಾರೆ. ಇಲ್ಲಿಯೂ ದೇವರು ಮಗೊಮ್ಮೆ ತಿರುಗಿ ಮುಂಜಾನೆಯೇ ಗುಡಿದುಂಬಿಸುತ್ತಾರೆ. ಹಗಲು ಒಂಬತ್ತು ಗಂಟೆಗೆ ಗುಡಿದುಂಬುತ್ತಾರೆ. ನಂತರ ದೇವರ ಗುಡಿಯಲ್ಲಿ ಪೂಜೆ ಸಲ್ಲಿಸಿ ಹಬ್ಬದ ಮೂರನೇ ದಿನದ ಆಚರಣೆಯನ್ನು ಮುಗಿಸುತ್ತಾರೆ. ಮುಂಬರುವ ಶನಿವಾರ ಮತ್ತೆ ಮೇಲದೀಪ ಹಚ್ಚಿ, ಮರದೀಪ ಮಾಡುತ್ತಾರೆ.

ಅದ್ದಲಟ್ಟಿ ಮ್ಯಾಸಬೇಡರ ಸಮುದಾಯಕ್ಕೆ ಗುಗ್ಗರಿ ಹಬ್ಬ ಬಹಳ ಪ್ರಮುಖವಾದ ಹಬ್ಬವಾಗಿದೆ. ಈ ಹಬ್ಬವನ್ನು ಬಂಧು-ಬಳಗದವರು ಅಣ್ಣ-ತಮ್ಮಂದಿರು ಅದೇ ಪ್ರದೇಶದಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳು, ಎಲ್ಲಾ ಜಾತಿ, ಸಮುದಾಯಗಳು ಸಾಮೂಹಿಕವಾಗಿ ಸೇರಿ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಂದು ನಾಗರಿಕತೆ, ಶಿಕ್ಷಣ, ತಂತ್ರಜ್ಞಾನದಲ್ಲಿ ಬೆಳವಣಿಗೆ ಕಂಡಿದ್ದರು ಈ ಬುಡಕಟ್ಟುಗಳ ಸಮುದಾಯಗಳ ಆಚರಣೆಯಲ್ಲಿ ಯಾವುದೇ ರೀತಿ ಬದಲಾವಣೆಯಾಗದೆ ತಮ್ಮ ಸಂಪ್ರದಾಯಿಕ ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಡಾ.ಕರಿಶೆಟ್ಟಿ ರುದ್ರಪ್ಪನವರು "ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ" ಎಂಬ ತಮ್ಮ ಪುಸ್ತಕದಲ್ಲಿ ಮ್ಯಾಸನಾಯಕ ಜನಾಂಗಕ್ಕೆ ವಿಶಿಷ್ಟವಾದ ಹಬ್ಬವೆಂದರೆ 'ಗುಗ್ಗರಿಹಬ್ಬ'ವಾಗಿದೆ. ಪಶುಪಾಲನೆ, ಬೇಟೆಯ ವೃತ್ತಿಯೊಂದಿಗೆ ಬೇಸಾಯವೂ ಈ ಜನಾಂಗಕ್ಕೆ ಉದ್ಯೋಗವಾಗಿದೆ. ತಮ್ಮ ಜಮೀನಿನಲ್ಲಿ ಬೆಳೆದ ಧಾನ್ಯಗಳಾದ ತೊಗರಿ, ಹಲಸಂದಿ, ಹುರುಳಿ, ಧಾನ್ಯಗಳನ್ನು ಬೆಳೆದು ಗುಗ್ಗರಿ ಹಬ್ಬ ಮಾಡುವವರೆಗೂ ಒಂದು ಕಾಳನ್ನು ಮನೆಗಾಗಿ ಉಪಯೋಗಿಸುವುದಿಲ್ಲ, ಬೇಯಿಸುವುದಿಲ್ಲ. "ಶಿವರಾತ್ರಿ ಹಬ್ಬ"ದ ದಿನದಂದು ದೇವಸ್ಥಾನದಲ್ಲಿ ಬೇಯಿಸಿ ಗುಗ್ಗರಿ ಮಾಡಿ ದೇವರಿಗೆ 'ಎಡೆ' ಹಾಕಿದ ನಂತರ ಪ್ರಸಾದವಾಗಿ ಸೇವಿಸುತ್ತಾರೆ ಎಂದಿದ್ದಾರೆ. (ಪುಟ ೩೯) ಶಿವರಾತ್ರಿಯ ದಿನದಂದು 'ಗುಗ್ಗರಿ ಹಬ್ಬ'ವನ್ನು ಮಾಡುತ್ತಾರೆ ಎಂದಿದ್ದಾರೆ.

ಅಡಿಟಿಪ್ಪಣಿಗಳು

೧. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ, ಪು. ೪೩

೨. ಶ್ರೀ.ನಂ.ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು. ೧೪೯

೩. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ, ಪು. ೪೫

೪. Principles of Sociology, R.N.Sharama, P. 323

೫. ಶ್ರೀ.ನಂ.ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು. ೧೫೪

೬. ಅದೇ, ಪು. ೧೫೫


೭. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ, ಪು. ೪೬

೮. ಅದೇ, ಪು. ೩೯

ಛಾಯಾಚಿತ್ರಗಳು




ಅಡ್ಲಟ್ಟಿ ಭೂತಪ್ಪ



ಅಡ್ಲಟ್ಟಿ ಮ್ಯಾಸಬೇಡರು ಹಿಂದೆ ನೆಲೆಸಿದಂತಹ ನಾಗ್ತಿಹಳ್ಳಿ ಪ್ರದೇಶ



ಅಡ್ಲಟ್ಟಿ ಮ್ಯಾಸಬೇಡರ ರಪ್ಪ ಮತ್ತು ಹುಲ್ಲಿನ ಬಣಿವೆ



ಅಡ್ಲಟ್ಟಿ ಮ್ಯಾಸಬೇಡ ಸಮುದಾಯದ ಮಹಿಳೆಯರು











ಪೆಟ್ಟಿಗೆ ದೇವರನ್ನು ಹೊತ್ತುಕೊಂಡ
ಪೂಜಾರಿ



ದಾಸಯ್ಯಗಳ ಪರಿಕರಗಳು



ದೇವರ ಆಭರಣಗಳು ಮತ್ತು ಪೂಜಾರಿ




ಗಂಗೆ ಪೂಜೆ ಸಲ್ಲಿಸುತ್ತಿರುವ ದಾಸಯ್ಯಗಳು












ಅಡ್ಲಟ್ಟಿ ಮ್ಯಾಸಬೇಡರ ಮನೆದೇವರಿಗೆ ಉರಿಮೆವಾದ್ಯ
ಮಾಡುವ ಆದಿ ದ್ರಾವಿಡರು



ದೇವರಿಗೆ ಅಡ್ಡವಾಗಿ ಮಲಗಿರುವ
ಹರಕೆಹೊತ್ತ ಭಕ್ತಾದಿಗಳು



ಕಳ್ಳಿಪೌಳಿಯ ಒಳಗಡೆ ಅಡ್ಲಟ್ಟಿ ಮ್ಯಾಸಬೇಡರ ಓಬಳದೇವರು



ನರಸಿಂಹಸ್ವಾಮಿ ದೇವಸ್ಥಾನ



ಗುಗ್ಗರಿ ಹಬ್ಬದಲ್ಲಿ ಬಿಲ್ಲುಗೂಡಿನ ಪೂಜೆ












ಬಿಲ್ಲುಗೂಡಿನ ಪೂಜೆಯಲ್ಲಿ ದೊಡ್ಡೆಡೆ ತಿನ್ನುತ್ತಿರುವ ದಾಸಯ್ಯಗಳು



ಗುಗ್ಗರಿ ಹಬ್ಬದಲ್ಲಿ ಕಳ್ಳೆಪೌಳಿಯ ಒಳಗಿರುವ ಹುರುಳಿ ಮತ್ತು ಅನ್ನದ ರಾಶಿ



ಹಂಚಿಹುಲ್ಲಿನ ಗುಡಿ ಕಳ್ಳೆಪೌಳಿಯ ಒಳಗಡೆ ದೇವರ ಪ್ರಸಾದವನ್ನು ಸ್ವೀಕರಿಸುತ್ತಿರುವ ಭಕ್ತಾದಿಗಳು



ಕಳ್ಳೆಪೌಳಿಯ ಒಳಗಡೆ ದೇವರ ಎತ್ತುಗಳ ಪೂಜೆ











ದೇವರ ಪೌಳಿಯಲ್ಲಿ ಜವಳ ತೆಗೆಸುತ್ತಿರುವ ದೃಶ್ಯ



ಯಜಮಾನರ ಗುಡ್ಡೆಗೆ ಪೂಜೆ ಸಲ್ಲಿಸುತ್ತಿರುವ ಪೂಜಾರಿಗಳು



ಗೂಲಮ್ಮನ ಗುಡಿ



ದೇವರ ಮರಿಕುಂಟೆ ಓಬಳ ದೇವರ ಗುಗ್ಗರಿ ಹಬ್ಬದಲ್ಲಿ ಸೇರಿರುವ ಜನ ಸಮೂಹ



[illegible]



[illegible]





[illegible]

೫

ಸಮಾರೋಪ

೫

ಸಮಾರೋಪ

ಕರ್ನಾಟಕದ ಚಿತ್ರದುರ್ಗ ಜಿಲ್ಲೆ ಐತಿಹಾಸಿಕ ಮಹತ್ವ ಪಡೆದಿರುವಂತೆ ಅನೇಕ ಬುಡಕಟ್ಟುಗಳು ಇಲ್ಲಿ ನೆಲೆಸಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಮ್ಯಾಸನಾಯಕರು, ಊರುನಾಯಕರು, ಕಾಡುಗೊಲ್ಲರು ಮತ್ತು ಅಡ್ಲಟ್ಟಿ ಮ್ಯಾಸಬೇಡರು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇಂಥ ಬುಡಕಟ್ಟುಗಳ ಬಗ್ಗೆ ಈಗಾಗಲೇ ಸಮಗ್ರ ಅಧ್ಯಯನ ಆಗಿವೆ. ಆದರೆ ಬೇಡರ ಸಮುದಾಯದ ಉಪಪಂಗಡಗಳ ಬಗ್ಗೆ ಸೂಕ್ಷ್ಮ ಅಧ್ಯಯನ ಆಗಿಲ್ಲವೆಂದರೆ ತಪ್ಪಾಗಲಾರದು. ''ಅಡ್ಲಟ್ಟಿ ಮ್ಯಾಸಬೇಡರು: ಒಂದು ಸಮುದಾಯದ ಅಧ್ಯಯನ'' ಎಂಬ ಅಧ್ಯಯನ ಇಲ್ಲಿ ಕೈಗೊಳ್ಳಲಾಗಿದೆ. ಅಡ್ಲಟ್ಟಿ ಮ್ಯಾಸಬೇಡರ ಪ್ರಮುಖ ನೆಲೆಯಾದ ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು, ಚಳ್ಳಕೆರೆ ಮತ್ತು ಹಿರಿಯೂರು ಎಂಬ ಎರಡು ತಾಲೂಕುಗಳನ್ನು ಈ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕ ಪರಿವರ್ತನೆ ತೀವ್ರಗತಿಯಿಂದ ನಡೆಯುತ್ತಿದೆ. ಈ ದೇಶದ ಬುಡಕಟ್ಟುಗಳು ಇದಕ್ಕೆ ಹೊರತಾಗಿಲ್ಲ. ಬುಡಕಟ್ಟುಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ತಯಾರಿಸಿವೆ. ಸರ್ಕಾರದ ಪ್ರಯತ್ನ ಮತ್ತು ಅಭೀಪ್ಸೆಗಳೆರಡು ಸೇರಿ ಬುಡಕಟ್ಟುಗಳ ಜೀವನ ವಿಧಾನ ಬದಲಾಯಿಸುತ್ತಿವೆ.

ಹಿಂದೆ ಅಡ್ಲಟ್ಟಿ ಮ್ಯಾಸಬೇಡರು ಕಾಡು - ಮೇಡುಗಳಲ್ಲಿ, ಬೆಟ್ಟ - ಗುಡ್ಡಗಳಲ್ಲಿ ಸಂಚರಿಸುತ್ತಾ, ಬೇಟೆಯಾಡುತ್ತಾ ಮಾಂಸವನ್ನು ಆಹಾರಕ್ಕೆ, ಚರ್ಮವನ್ನು ಉಡುಪಿಗೆ ಬಳಸುತ್ತಿದ್ದರು. ನಂತರ ಇವರು ಪಶುಪಾಲನೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು, ಮೇವು - ನೀರು ಸಿಗುವಂತಹ ಪ್ರದೇಶಗಳಿಗೆ ತಮ್ಮ ದನ, ಕುರಿಗಳನ್ನು ಮೇಯಿಸುತ್ತ ಅಲೆಮಾರಿ ಜೀವನ ಸಾಗಿಸುತ್ತಿದ್ದರು. ಇವರು ಕೆಲಕಾಲ ನಂತರ ಭೂಮಿಯನ್ನು ಸಾಗುವಳಿ ಮಾಡಿ ಉತ್ಪಾದನೆಯನ್ನು ಕಂಡುಕೊಂಡು ಇದರಿಂದ ಹಂತಹಂತವಾಗಿ ತಮ್ಮ ಜೀವನ ಬದುಕಿನಲ್ಲಿ ಬದಲಾವಣೆ ಕಂಡುಕೊಳ್ಳತೊಡಗಿದರು. ಮೊದಲು ಶಿಕ್ಷಣವು ಈ ದೇಶದಲ್ಲಿ ಕೆಲವೇ ಮೇಲ್ವರ್ಗದ ಜನಾಂಗಕ್ಕೆ ಸೀಮಿತವಾಗಿತ್ತು. ಬ್ರಿಟೀಷರ ಆಗಮನದಿಂದ ಈಚೆಗೆ ಶಿಕ್ಷಣವು ಜನಸಾಮಾನ್ಯರ ಸೊತ್ತಾಯಿತು. ಇದರ ಪರಿಣಾಮವಾಗಿ ಕೆಳವರ್ಗದ ಜನಾಂಗಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಹೊಸ ಅರಿವು ಮೂಡಿತು. ತಾವು ನಾಗರೀಕರಾಗಬೇಕು, ನಾಗರೀಕ ಸಮುದಾಯಗಳೊಂದಿಗೆ ಸಮಾನವಾಗಿ ಬದುಕಬೇಕು ಎಂಬ ಅಪೇಕ್ಷೆ ಪ್ರಬಲವಾಯಿತು. ಭಾರತೀಯ ಸಮಾಜವನ್ನು ತೀವ್ರಗತಿಯಲ್ಲಿ ಬದಲಾವಣೆಗೆ ಗುರಿ ಪಡಿಸಿದವು ಇದಕ್ಕೆ ಬುಡಕಟ್ಟುಗಳು ಒಳಪಟ್ಟವು.

ಅಡ್ಲಟ್ಟಿ ಮ್ಯಾಸಬೇಡರು ತಮ್ಮ ಬದುಕಿನಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ. ತಮ್ಮ ಮೂಲ ವೃತ್ತಿಯ ಜೊತೆಗೆ ಶಿಕ್ಷಣ, ಉದ್ಯೋಗ ಇತರೆ ವೃತ್ತಿಗಳನ್ನು ಕೈಗೊಂಡು ಜೀವನ ನಡೆಸುತ್ತಿದ್ದಾರೆ. ಇವರಲ್ಲಿ ಶೈಕ್ಷಣಿಕ ಪ್ರಗತಿಯಾದಂತೆಲ್ಲಾ ತಮ್ಮ ಹಳೆಯ ಆಚರಣೆ ಮತ್ತು ಜೀವನ ವಿಧಾನಗಳ ಹೊಸ ಬಗೆಯನ್ನು ಕಂಡುಕೊಂಡಿದ್ದಾರೆ. ತಮ್ಮ ಉಡುಪು, ವಸತಿ ವ್ಯವಸ್ಥೆ, ಆಹಾರ ಪದ್ಧತಿಯಲ್ಲಿ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಇವರ ವಿಶಿಷ್ಟ ಅಂಶಗಳು ಕರಗುತ್ತಾ ಬರುತ್ತಿರುವುದರಿಂದ ಅವರನ್ನು ಅವರ ಸುತ್ತಮುತ್ತಲಿನ ಜನಸಮುದಾಯದಿಂದ ಬೇರೆಯಾಗಿ ಗುರುತಿಸುವುದು ಅಸಾಧ್ಯವಾಗಿದೆ.

ಅಡ್ಲಟ್ಟಿ ಮ್ಯಾಸಬೇಡರ ಸಮುದಾಯದ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡು ಜನಾಂಗ ಹಿನ್ನೆಲೆ, ಭೌಗೋಳಿಕ ಪರಿಸರ, ಮೂಲ, ಪರಂಪರೆ, ಜನಸಂಖ್ಯೆ, ನೆಲೆಗಳು, ಕೌಟುಂಬಿಕ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಸಂಸ್ಕೃತಿ ಬದುಕು, ಪರಂಪರೆಯನ್ನು ಸ್ಪಷ್ಟಪಡಿಸಲಾಗಿದೆ. ಇವರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಉಡುಗೆ - ತೊಡುಗೆ, ಆಹಾರ ಪದ್ಧತಿ, ವಸತಿ ವ್ಯವಸ್ಥೆ, ನ್ಯಾಯ ಪದ್ಧತಿ, ವಿಧಿ - ನಿಷೇಧಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ. ಸಂಸ್ಕಾರಗಳು ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಜನನ, ಹೆರಿಗೆ, ಗುಡ್ಲು, ಋತುಮತಿ ಶಾಸ್ತ್ರ, ವಿವಾಹ ಪದ್ಧತಿ, ಶವಸಂಸ್ಕಾರ ಮೊದಲಾದ ಕಟ್ಟುಕಟ್ಟಳೆಗಳ ಬಗ್ಗೆ ವಿವರವನ್ನು ಕೊಡಲಾಗಿದೆ.

ಆಚರಣೆಗಳಲ್ಲಿ ಹಬ್ಬಗಳು, ಜಾತ್ರೆಗಳು, ದಾಸಯ್ಯಗಳು, ಪೂಜಾ ಪದ್ಧತಿಗಳು, ದೇವರ ಬಗ್ಗೆ ನಂಬಿಕೆ, ಆರಾಧನೆ, ಧಾರ್ಮಿಕ ಕೇಂದ್ರಗಳು, ಹರಕೆ, ದೇವರ ಪೌಳಿ, ಎಡೆ, ಗಂಗೆಪೂಜೆ ಮಾಡುವ ವಿಧಾನ ಮತ್ತು ಪ್ರದೇಶಗಳು, ದೇವರೆತ್ತುಗಳು, ಬಸವ, ಮಣೇವು ಕುಣಿತ, ದಾಸಯ್ಯಗಳ ಸಾಮಾಜಿಕ ನಿಯಮಗಳು ಕೂಲಂಕುಷವಾಗಿ ವಿವರಿಸಲಾಗಿದೆ.

ಅಧ್ಯಯನದ ಫಲಿತಾಂಶಗಳು

೧. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರು ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಲ್ಪ ಸ್ವಲ್ಪ ಸುಧಾರಿಸಿದ್ದರೂ ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ.

೨. ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಊರುಬೇಡರಿಗೂ ಹಾಗೂ ಮ್ಯಾಸನಾಯಕರಿಗೂ ಪರಸ್ಪರ ಸಂಬಂಧಗಳಿವೆ ಮತ್ತು ಹೆಣ್ಣುಗಂಡಿನ ಸಂಬಂಧಗಳು ಅಥವಾ ವಿವಾಹ ಸಂಬಂಧಗಳು ನಡೆಯುತ್ತವೆ.

೩. ಅಡ್ಲಟ್ಟಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಪರಸ್ಪರ ಸಹೋದರ ಸಂಬಂಧಗಳೇ ವಿನ: ಹೆಣ್ಣುಗಂಡಿನ ವಿವಾಹ ಸಂಬಂಧಗಳು ನಡೆಯುವುದಿಲ್ಲ.

೪. ಅಡ್ಲಟ್ಟಿ ಮ್ಯಾಸಬೇಡರಲ್ಲಿ ಮತ್ತು ಕಾಡುಗೊಲ್ಲರಲ್ಲಿ ಕೆಲವೊಂದು ಆಚರಣೆಗಳು, ರೂಢಿ - ಸಂಪ್ರದಾಯಗಳು ಒಂದೇ ಬಗೆಯಾಗಿ ಕಂಡುಬರುತ್ತವೆ.

೫. ಬೇಡರ ಒಳಪಂಗಡಗಳಾದ 'ಮ್ಯಾಸಬೇಡರು', 'ಊರುಬೇಡರು' ಮತ್ತು 'ಅಡ್ಲಟ್ಟಿ ಮ್ಯಾಸಬೇಡರು' ಮೂಲತಃ ಒಂದೇ ಮೂಲದವರು. ಈ ಮೂರು ಉಪ ಪಂಗಡಗಳು ಕೂಡ ಒಂದೇ ಮೂಲದಿಂದ ಬಂದಿವೆ.

೬. ನಾಗರೀಕರಣ ಮತ್ತು ಆಧುನೀಕರಣ ಶಿಕ್ಷಣ ಪ್ರಭಾವದಿಂದ ಪ್ರಸ್ತುತ ಈ ಬುಡಕಟ್ಟುಗಳಲ್ಲಿ ಅನೇಕ ಬದಲಾವಣೆಗಳನ್ನು ಗುರುತಿಸಬಹುದು. ಮೂಲ ಬೇಟೆ ಬೇಟೆ ವೃತ್ತಿಯನ್ನು ಕೈಬಿಟ್ಟು ಪ್ರಸ್ತುತ ಪಶುಪಾಲನೆ ಮತ್ತು ಕೃಷಿಯಲ್ಲಿ ತೊಡಗಿದ್ದಾರೆ. ಆದರೆ ಇವರ ಹಟ್ಟಿಗಳು ಪ್ರಸ್ತುತದಲ್ಲಿಯು ಕಂಡುಬರುತ್ತಿಲ್ಲ. ಅಲೆಮಾರಿ ಜೀವನವನ್ನು ಬಿಟ್ಟು ಊರುಗಳನ್ನು ಕಟ್ಟಿಕೊಂಡಿದ್ದಾರೆ. ಸರ್ಕಾರದ ಅನೇಕ ಸೌಲಭ್ಯಗಳಿಂದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದೆ ಬರಲು ಪ್ರಯತ್ನಿಸುತ್ತಿದ್ದಾರೆ.

ಪ್ರಸ್ತುತ ಸಾಮಾಜಿಕ ಪರಿಸರಕ್ಕೆ ಈ ಬುಡಕಟ್ಟುಗಳು ಹೊಂದಿಕೊಳ್ಳುತ್ತಿದ್ದಾರೆ. ಇವರಲ್ಲಿ ಅವಿಭಕ್ತ ಕುಟುಂಬಗಳು ಇಳಿಮುಖವಾಗಿ, ವಿಭಕ್ತ ಕುಟುಂಬಗಳು ಉಗಮಗೊಳ್ಳುತ್ತಿವೆ.

ಸಲಹೆಗಳು

"ಈ ಆಧುನಿಕ ಯಂತ್ರ ನಾಗರೀಕತೆಯ ಚರಿತ್ರೆಯಲ್ಲಿ ಮಗುವಿನಂತೆ ದಿಕ್ಕು ತಪ್ಪಿವೆ. ಕೈಹಿಡಿದು ಕರೆದುಕೊಂಡು ಕನಸುಗಳನ್ನು ತುಂಬುವ ಯೋಜನೆಗಳು ರೂಪಗೊಳ್ಳಬೇಕು. ವೇಗದ ಬದುಕಿನೊಂದಿಗೆ ಅವರ ಅನುಸಂಧಾನ ತೀವ್ರಗತಿಯಲ್ಲಿ ನಡೆಯಬೇಕು. ಈ ಅನುಸಂಧಾನ ಅವರ ಸಾಂಸ್ಕೃತಿಕ ನೆಲೆಗಳನ್ನು

ಇಲ್ಲವಾಗಿಸುವಂತಿದ್ದರೆ ಅದಕ್ಕೆ ಆತಂಕ ಪಡೆಯಬೇಕಾಗಿಲ್ಲ. ಒಂದು ಸಮುದಾಯದ ನಿಕೃಷ್ಟ ಬದುಕು ಹಸನಾಗುವಲ್ಲಿ ಅದರ ಸಾಂಸ್ಕೃತಿಕ ಆಯಾಮ ಇಲ್ಲವಾಗುತ್ತದೆ''[೧] ಎಂದಾದರೆ, ಅದು ಉಳಿಯದಿದ್ದರೂ ಚಿಂತೆಯಿಲ್ಲ. ವ್ಯವಸ್ಥೆ ರೂಪಿಸುವ ಅಭಿವೃದ್ಧಿ ಯೋಜನೆಗಳು ಹೊಟ್ಟೆಗಿಲ್ಲದ, ಜೀತದಿಂದ ಬಸವಳಿದ, ಶೂನ್ಯ ಕವಿದ ಬುಡಕಟ್ಟು ಸಮುದಾಯಗಳ ಕಣ್ಣುಗಳಲ್ಲಿ ಭರವಸೆಗಳನ್ನು ಮೂಡಿಸಬೇಕಾಗಿದೆ.

ವೆರಿಯರ್ ಎಲ್ವಿನ್ ಹೇಳುವಂತೆ ''ಅಭಿವೃದ್ಧಿಯ ಶುಷ್ಕ ಅಸ್ಥಿಗಳು ಪ್ರೀತಿಯಿಂದ ಸ್ಫೂರ್ತಿಗೊಂಡು ಪ್ರಜ್ವಲಿಸುವಂತಾದಾಗ ಬುಡಕಟ್ಟು ಜನ ಪ್ರತಿಕ್ರಿಯಿಸುತ್ತಾರೆ. ಅವರು ಬದಲಾವಣೆಯನ್ನು ಬಯಸುತ್ತಾರೆ. ಅವರಿಗೆ ಬದಲಾವಣೆ ಅನಿವಾರ್ಯ'' ಎಂದಿದಾರೆ.

ಅಡಿಟಿಪ್ಪಣಿಗಳು

೧. ಎ.ಎಸ್ .ಪ್ರಭಾಕರ, ಬುಡಕಟ್ಟು ಬದುಕಿನ ಸ್ಥಿತ್ಯಾಂತರಗಳು, ಪು. ೧೪೬

ಅನುಬಂಧ

ಅನುಬಂಧ

ಗುಗ್ಗರಿ ಹಬ್ಬದ ಸಂದರ್ಭದ ಪದ್ಯ

೧

ಹಂಚಿ ಹುಲ್ಲಿನ ಗುಡಿ

ಎರಡು ಕಾಲಿನೇಣಿ ಹೂವಿನ ತೋರಾಯ
ಏರ್ಯಾನ ಓಬಯ್ಯ ನಿಡಗಲ್ಲು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಏರ್ಯಾನು ಓಬಯ್ಯ ನಿಡಗಲ್ಲು
ಬೆಟ್ಟಾವ ಸ್ವಾಮಿ ನಿನ್ನೂರ ಹೆಸರೇಳು
ಮೂಲೆ ಮೂಲೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸ್ವಾಮಿ ನಿನ್ನೂರ ಹೆಸರೇನ ನಾಗತಿಹಳ್ಳಿ
ಗೆ ಓರಿ ಬಂದೈಯಿತಿ ಮರುಕುಂಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಒಪ್ಪು ಕಾಲಿನೇಣಿ ಮುತ್ತಿನ ತೋರಾಯ
ಅತ್ಯಾನ! ಓಬಯ್ಯ ನಿಡಗಲ್ಲು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅತ್ಯಾನ ಓಬಯ್ಯ ನಿಡಗಲ್ಲು ಬೆಟ್ಟಾವ
ಅಪ್ಪ ನಿನ್ನೂರ ಹೆಸರೇಳು
ಮೂಲೆ ಮೂಲೆಗೆ ಮುತ್ತು

ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅಪ್ಪ ನಿನ್ನೂರ ಹೆಸರೋಳ ನಾಗುತಿಹಳ್ಳಿ
ಒತ್ತಿಲ ಬಂದ್ಯೆಯಿತಿ ಮರುಕುಂಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ದೇವರ ನೋಡ್ಯಾನ ಹೊರಗೆ ಪೂಜಾರಿ
ಮ್ಯಾಗಳ ಕೀಲು ಸೊಡಿಲ ಸೋ ...
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಮ್ಯಾಗಳ ಕೀಲು ಸೊಡಿಲ ಸೋ ...
ಓಬಯ್ಯನ ಮೆಳದಿ ಇಗ್ಗಣ ಎರ್ರದೇನು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅಪ್ಪನ ನೋಡ್ಯಾನ ಅರುಗಾಗ ಪೂಜಾರಿ
ಮುತ್ತಿನ ಕೀಲು ಸೊಡಿಲು ಸೋ ...
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಮುತ್ತಿನ ಕೀಲು ಸೊಡಲೀನ ಸೋ
ಓಬಯ್ಯನ ದೇವಿಗೆ ಎರುದೇನು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಉಕ್ಕಿನ ಕಂಬ ನೋಡೆ ಉತ್ತಾಸ ನೋಡೆ
ಅಪ್ಪ ಓಬಯ್ಯನ ಗುಡಿನೋಡೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅಪ್ಪ ಓಬಯ್ಯನ ಗುಡಿನೋಡೆ
ಓಬಳಣ್ಣ ಒಪ್ಪುವಾದ ಬಣ್ಣ ಹೊಡಿಸೆನೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

೨

ಕಲ್ಲುಕಂಬದ ಪದ್ಯ

ಕಲ್ಲುಕಂಬ ನೋಡೆ ಹಂಚಿನ ಕೋಟೆ ನೋಡೆ
ಸ್ವಾಮಿ ಓಬಯ್ಯನ ಗುಡಿನೋಡೆ ...
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸ್ವಾಮಿ ಓಬಯ್ಯನ ಗುಡಿನೋಡೆ
ಓಬಳಣ್ಣ ಒಪ್ಪುವಾದ ಬಣ್ಣದ ಹೊಡಿಸ್ಯಾನ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಬಾಳೆ ಹೂವು ಚಂದ ಬಾಳೆಕಾಯಿ ಚಂದ
ಬಜಾರ ಚಂದ ಮರುಕುಂಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಬಜಾರ ಚಂದ ಮರುಕುಂಟೆ ಊರೋರ
ಮಂದಿಗೆ ಸ್ವಾಮಿ ಓಬಯ್ಯನ ಗುಡಿಚಂದ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ನಿಂಬೆ ಹೂವು ಚಂದ ನಿಂಬೆಕಾಯಿ ಚಂದ
ಗುಡಿಚಂದ ಮರುಕುಂಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಗುಡಿಚಂದ ಮರಿಕುಂಟೂರ ಮಂದಿಗೆ
ತಂದೆ ಓಬಯ್ಯನ ಗುಡಿಚಂದ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಯಾವಾಗ ಈ ಗುಡಿ ಸೊರೆಳನ
ಕಳೆಯಾವು ಯಾರುಕಟ್ಟಿಸಿದ ಹೊಸಗುಡಿ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಯಾರ ಕಟ್ಟಿಸಿದ ಹೊಸಗುಡಿ
ಮರುಕುಂಟೆ ಜೋಳಗೊನ್ನಿನ ಗೌಡರು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಎಂದು ಕಟ್ಟಿಸಿದ ಹೊಸಗುಡಿ
ಮರುಕುಂಟೆ ಬಿಂದೆಗೊನ್ನಿನ ಗೌಡರು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೇಕು ||

ಪೆಟ್ಟಿಗೆ ಪೆಟ್ಟಿಗೆ ಸುತ್ತಿಟ್ಟು ಬರುತ್ತಾವೆ
ಪೆಟ್ಟಿಗೆ ಪ್ಯಾಟೆ ಕಿರುದೊಂದು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಪೆಟ್ಟಿಗೆ ಪ್ಯಾಟೆಗೆ ಕಿರುದೊಂದು
ರುದ್ರಣ್ಣ ಒಕ್ಕು ಕಟ್ಟಿಸಿದ ಹೊಸ ಪ್ಯಾಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗ ಬೆಳಕು ||

ಪಾಲಕ್ಕಿ ಪಾಲಕ್ಕಿ ಪ್ಯಾಟೆ ಕಿರುದೊಂದು
ರುದ್ರಣ್ಣ ಹೋಗಿ ಕಟ್ಟಿಸಿದ ಹೊಸ ಪ್ಯಾಟೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅಣ್ಣಯ್ಯ ಬರುವೋದು ಇನ್ನಾರಿಗರಿಗುಂಟು
ಸಣ್ಣ ಮರುಕುಂಟೆ ಗೌಡರು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸಣ್ಣ ಮರುಕುಂಟೆ ಗೌಡರು ಮನಿಯಾಗ
ಎಮ್ಮೆಯ ಇಂಡು ಬೆದಿರ್‍ಯಾವು
ಮೂಲೆ ಮೂಲೆಗೆ ಮುತ್ತು
ಓಬಯ್ಯಗ ಪ್ರಾಣದೇವಿಗೆ ಬೆಳಕು ||

ಸಣ್ಣಯ್ಯ ಬರುವೋದು ಮತ್ತ್ಯರಿಗರಿಗುಂಟು
ಚಿಕ್ಕ ಮರುಕುಂಟೆ ಗೌಡರು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸಣ್ಣ ಮರುಕುಂಟೆ ಗೌಡರ ಮನಿಯಾಗ
ಎತ್ತುಗಳ ಇಂಡು ಬೆದಿರ್‍ಯಾವು
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಚಂದ ಚಂದದಿಂದ ರೆಂಬೆರೋಲುಗದಿಂದ
ಕೆಂದಾಳೆ ಕುದುರೆ ಕುಣಿಸುತ್ತ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಗಂದಾಳೆ ಕುದುರೆ ಕುಣಿಸುತ್ತ
ಓಬಯ್ಯ ಉಂಬಳಿಸಿ ಊರು ಹೋಗುವಾಗ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಆಟ ಪಾಟದಿಂದ ಕಚ್ಚಾರೊಳಗದಿಂದ
ಭೂತಾಳಿ ಕುದುರೆ ಕುಣಿಸುತ್ತ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಬತ್ತಾಳೆ ಕುದುರೆ ಕುಣಿಸುತ್ತ
ಓಬಯ್ಯ ಕೊರಸೆ ಊರು ಹೋಗುವಾಗ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಬಂಜಾರ ಭೂಮಿ ನಡಿಗ್ಯಾವ
ಓಬಯ್ಯ ಹೊಂಬಳಿಸಿ ಹೋಗುವಾಗ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಕಬ್ಬಿಣ ಕುದುರೆ ಡಬ್ಬಂದ ರವಸೆಗೆ
ಸಿದ್ಧರ ಭೂಮಿ ನಡಿಗ್ಯಾವೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸಿದ್ಧರ ಭೂಮಿ ನಡಿಗ್ಯಾವ ಓಬಯ್ಯ
ಹೊಂಬಳಿಸಿ ಊರು ಹೋಗುವಾಗ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಸಂಜೆ ಹೊತ್ತಿನಾಗ ರಂಗಸೂರಿ ಹೊರಟ
ಅಂಗಳದವರೆಲ್ಲ ದಣಿದಾರೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೇವಿಗೆ ಬೆಳಕು ||

ಅಂಗಳದವರೆಲ್ಲ ದಣಿದಾರೆ ಓಬಯ್ಯನ
ಕೆಂದ ಕುದುರ್ಯಾಗೆ ದಣಿದಾವೆ
ಮೂಲೆ ಮೂಲೆಗೆ ಮುತ್ತು
ಓಬಯ್ಯಗೆ ಪ್ರಾಣದೀವಿಗೆ ಬೆಳಕು ||

೩. ದೇವರ ಮರುಕುಂಟೆ ಕೆರೆಯ ಮೇಲೆ ಬರುವಾಗ ಓಬಳ ನರಸಿಂಹ ಸ್ವಾಮಿಯ ಬಗ್ಗೆ ಜಾನಪದ ಗೀತೆಯನ್ನು ಹಾಡುತ್ತಾರೆ

ಕೋಲು ಕೆರೆಯ ಓಬಯ್ಯ ಬರುವಾಗ
ರನ್ನದ ರಾಮ ಗೋವಿಂದ ನನ್ನೇರೆ
ಸಂಜೆ ಹೂವಿನ್ಯಾಗೆ ರವಸೆ ಘಂಜಿನ ಕೋಲು
ಕೆರಿಯಾಗ ರನ್ನ ಓಬಯ್ಯ ಬರುವಾಗ
ರನ್ನದ ರಾಮ ಗೋವಿಂದ ನನ್ನೇರೆ ||

ಕೆರಿಯಾಗ ಓಬಯ್ಯ ಬರುವಾಗ ಮರುಕುಂಟೆ
ದೊರೆಗಳು ಕೈಯೆತ್ತಿ ಮುಗಿದಾರ ರನ್ನದ
ರಾಮ ಗೋವಿಂದ ನನ್ನೇರೆ ||

ರೆಪ್ಪೆ ಉಳಿನಾಂಗೆ ಇಪ್ಪತ್ತು ಘಂಜಿನ
ಕೋಲು ಕಟ್ಟೇಗೆ ಓಬಯ್ಯ ಬರುವಾಗ
ರನ್ನದ ರಾಮ ಗೋವಿಂದ ನನ್ನೇರೆ ||

ಕಟ್ಯಾಗ ಓಬಯ್ಯ ಬರುವಾಗ ಮರು
ಕುಂಟೆ ಸೆಟ್ಟೇರು ಕೈಯೆತ್ತಿ ಮುಗಿದಾರ
ರನ್ನದ ರಾಮ ಗೋವಿಂದ ನನ್ನೇರೆ ||

ಏರಿಮ್ಯಾಲೆ ಓಬಯ್ಯ, ಊರಲ್ಲಿ ಪೂಜಾರಿ
ಏರಿಯ ಕೆಳಗ ತಳವಾರ
ರನ್ನದ ರಾಮ ಗೋವಿಂದ ನನ್ನೇರೆ ||

ಏರಿಮ್ಯಾಲೆ ಓಬಯ್ಯ, ಊರಲ್ಲಿ ಪೂಜಾರಿ
ಏರಿಯ ಕೆಳಗ ತಳವಾರ
ರನ್ನದ ರಾಮ ಗೋವಿಂದ ನನ್ನೇರೆ ||

ಏರಿಯ ಕೆಳಗ ತಳವಾರ ಓಬಣ್ಣ
ದೇವರಿಗೆ ಬಾಜು ಬಿಡಿಸ್ಯಾನ
ರನ್ನದ ರಾಮ ಗೋವಿಂದ ನನ್ನೇರೆ ||

ಕಟ್ಟೆಯ್ಯಾಗ ಓಬಯ್ಯ ಹುತ್ತೆಲಿ ಪೂಜಾರಿ
ಕಟ್ಟೇಯು ಕೆಳುಗ ತಳುವಾರ ರನ್ನದ
ರಾಮು ಗೋಪಿಂದ ನನ್ನೇರೆ ||

ಕಟ್ಟೆಯು ಕೆಳುಗ ತಳುವಾರ ಓಬಣ್ಣ
ಪೆಟ್ಟಿಗೆ ಬಾಜು ಬಿಡಿಸ್ಯಾನೆ
ರನ್ನದ ರಾಮು ಗೋಪಿಂದ ನನ್ನೇರೆ ||

ಪರಿಮ್ಯಾಗ ಓಬಯ್ಯ ದ್ಯಾನದಲಿ
ಬರುವಾಗ ಬೇಗೂನ ಬರುಹೇಳರೆ ಗೌಡರ
ರನ್ನದ ರಾಮು ಗೋಪಿಂದ ನನ್ನೇರೆ ||

ಬೇಗೂನ ಬರುಹೇಳೆ ಗೌಡರ ರುದ್ರಣ್ಣ
ರಾಮು ಹೊಂಬಾಳೆ ತರುಹೇಳೆ
ರನ್ನದ ರಾಮು ಗೋವಿಂದ ನನ್ನೇರೆ ||
ಕಟ್ಟೆಮ್ಯಾಗೆ ಓಬಯ್ಯ ನಿಮ್ಮಲ್ಲಿ ಬರುತ್ತಾನೆ
ಬರುಹೇಳೆ ಗೌಡರು ಈರಣ್ಣನ
ರನ್ನದ ರಾಮು ಗೋವಿಂದ ನನ್ನೇರೆ ||

ಬರುಹೇಳೆ ಗೌಡರ ರಾಮಣ್ಣ
ಅಕ್ಕಿ ಹೊಂಬಾಳೆ ತರುಹೇಳೆ
ರನ್ನದ ರಾಮು ಗೋವಿಂದ ನನ್ನೇರೆ ||

ಮಿತ್ರೆಯರ ಕೊರಳ ಮಣಿಬೆಳಕು
ಓಬಯ್ಯನ ಪೆಟ್ಟಿಗೆಯ ಬೆಳಕು ಜನಕ್ಕೆಲ್ಲ
ರನ್ನದ ರಾಮು ಗೋವಿಂದ ನನ್ನೇರೆ ||

ಊರಲ್ಲಿ ಹೋಗುವಾಗ ಸೋರೆ ದೇವರ
ಬೆಳಕು ನಾರೇರ ಕೊರಳ ಮಣಿಬೆಳಕು
ರನ್ನದ ರಾಮು ಗೋವಿಂದ ನನ್ನೇರೆ ||

ನಾರಿಯರ ಕೊರಳ ಮಣಿಬೆಳಕು
ಓಬಯ್ಯನ ಪಾಳಿಗೆ ಬೆಳಕು ಜನಕ್ಕೆಲ್ಲ
ರನ್ನದ ರಾಮು ಗೋವಿಂದ ನನ್ನೇರೆ ||

ಮಕ್ಕಾಳು ಎದ್ದಮ್ಮ, ಮಕ್ಕಳು
ಎತ್ತಿಕೊಳ್ಳಿ ಮಕ್ಕಳಿಲ್ಲದ ಬೆಳೆಬಾಲೆ
ರನ್ನದ ರಾಮ ಗೋವಿಂದ ನನ್ನೇರೆ ||

ಮಕ್ಕಾಳು ಇಲ್ಲದ ಬಿಡಿಬಾಲು
ಓಬಯ್ಯನ ಎತ್ತೇನೆ ಇಲ್ಲ ರಥವೇರು
ರನ್ನದ ರಾಮ ಗೋವಿಂದ ವನ್ನೇರೆ ||

ಬಾಲರು ಎದ್ದಮ್ಮ ಬಾಲ ಎತ್ತಿಕೊಳ್ಳಿ
ಬಾಲತಿಲ್ಲದ ಬಿಳಿಬಾಲೆ
ರನ್ನದ ರಾಮ ಗೋವಿಂದ ನನ್ನೇರೆ ||

ಬಾಲರು ಇಲ್ಲದ ಬಿಡಿಬಾಲು ಓಬಯ್ಯಗೆ
ತೋರಿಸಿರೊ ರಥವೇರು ಎಲ್ಲಮ್ಮ
ರನ್ನದ ರಾಮ ಗೋವಿಂದ ನನ್ನೇರೆ ||

ಅಪ್ಪ ಸೇರಿ ಹೋಗಿ ಮುಂದಕ್ಕೆ

೩. ದೇವರೆತ್ತಿನ ಪದ್ಯ

ಆಕೋ ಗೊಂಡ ಕಲ್ಲೆದಿರೆಗೊಂಡ
ಕಲ್ಲದೆರೆ ಮಕ್ಕಳದರೆ ಎತ್ತುಬಂದಾವೆ ಎತ್ತು |
ಕಾಲೇಲಿ ಕಡೆಸಲುಗ ಬಾಲದಲಿ ಬಲವಂತ
ಕಂಬೇಲಿ ಗೊಂಬೇರ ದೊಡ್ಡಣ್ಣನಪ್ಪ
ಎತ್ತು ಬಂದಾದ ಎತ್ತು ||

ಗೊಂಡ ಕಲ್ಲದೆರೆ ಮಕ್ಕಳೆದುರು ಓಬಯ್ಯನ
ಅಣ್ಣ ಬಂದಾವ ಅಸುನಗೆ ಎತ್ತು
ಬಾಂದವೆ ಎತ್ತು |
ಕಾಲೆಲಿ ಕಡೆಸಲುವ ಬಾಲದೆಲಿ ಬಲವಂತ
ಕಂಬೇಲಿ ಗೊಂಬೇರ ದೊಡ್ಡಣ್ಣನಪ್ಪ
ಎತ್ತು ಬಂದಾವೆ ಎತ್ತು ||

ಬಾಗಿಬಂದಾವೆ ಬಾಗುಗೊಂಬಿನ ಬೆಳ್ಳಿ
ತೂಗುತಬಂದಾವೆ ಎಳೆಹೋರಿ
ಎತ್ತುಬಂದಾವೆ ಎತ್ತು ಕಾಲೆಲಿ
ಕಡೆಸಲುವ ಬಾಲಿದಲಿ ಬಲವಂತ
ಕಂಬೇಲಿ ಗೊಂಬೇರ ದೊಡ್ಡಣ್ಣನೆಪ್ಪೆ
ಎತ್ತು ಬಂದಾವೆ ಎತ್ತು ||

ಬಗ್ಗಿ ಬಂದವೆ ಬಗ್ಗೂ ಗೊಂಬಿನ
ಬೆಳ್ಳಿನ ಎತ್ತು ಬಗ್ಗುತ ಬಂದಾವೆ
ಎಳೆಹೋರಿ ಎತ್ತು ಬಂದಾವೆ ಎತ್ತು
ಕಾಲೆಲಿ ಕೆಡೆಸಲುವ ಬಾಲದಲಿ ಬಲವಂತ
ಕಂಬೇಲಿ ಗೊಂಬೇರ ದೊಡ್ಡಣ್ಣಸಪ್ಪ
ಎತ್ತು ಬಂದಾವೆ ಎತ್ತು ||

ನುಗ್ಗೂತ ಬಂದಾವೆ ಹೆಳೆವಾರು
ಓಬಯ್ಯನ ಹಬ್ಬಕ ಬಂದಾವೆ
ಸೆಳೆ ಎತ್ತು! ಎತ್ತು ಬಂದಾವೆ ಎತ್ತು
ಕೆಲೆಲಿ ಕೆಡೆಸೆಲುವ ಬಾಲದಲಿ ಬಲವಂತ
ಕಂಬೇಲಿ ಗೊಬ್ಬೆರ ದೊಡ್ಡಣ್ಣನಪ್ಪ
ಎತ್ತು ಬಂದಾವೆ ಎತ್ತು ||

ಹಾಗಿಂದ ಬರುವಾಗ ಗೀರು ಗಂಧದ
ಚಲುವ ರೇವರ ಸಣ್ಣ ಧಣಿಯರ
ಎತ್ತು ಬಂದಾವೆ ಎತ್ತು
ಕಲೆಲಿ ಕಡೆಸಲುವ ಬಾಲದಲಿ ಬಲವಂತ
ಕಂಬೇರು ಗೊಂಬೆರ ದೊಡ್ಡಣ್ಣನಪ್ಪ
ಎತ್ತು ಬಂದಾವೆ ಎತ್ತು ||

ರೇವರ ಸಣ್ಣ ಧಣಿಯಾದ ಹಂಪಣ್ಣ
ಮರಾಯನಪ್ಪೆ ಧಣಿತೋರು
ಎತ್ತು ಬಂದಾವೆ ಎತ್ತು
ಕಲೆಲಿ ಕೆಡೆಸೆಲುವ ಬಾಲದಲಿ ಬಲವಂತ
ಕೆಂಬೇರ ಗೊಂಬೆರ ದೊಡ್ಡನೆಪ್ಪ
ಎತ್ತು ಬಂದಾವೆ ಎತ್ತು ||

ಎತ್ತಿನಿಂದ ಬರುವಾಗ ಸೊಕ್ಕೆ
ಗೊಡ್ಡಿನ ಚಲವು ಬಿದ್ದಾರೆ
ಸಣ್ಣ ಧಣಿಯಾದ ಎತ್ತು
ಬಂದಾವೆ ಎತ್ತು ಕಲೆಲಿ
ಕಡೆಪೆಲುವ ಬಾಲದಲಿ ಬಲವಂತ
ಕಂಬೇರ ಗೊಂಬೆರ ದೊಡ್ಡೆಣಪ್ಪ
ಎತ್ತು ಬಂದಾವೆ ಎತ್ತು ||

ಬಿದ್ದಾನೆ ಸಣ್ಣ ದಣಿಯಾದ ಈರಣ್ಣ
ಎತ್ತಿಗೆ ನಿಮ್ಮ ಧಣಿತೋರು ಎಂಬ
ಎತ್ತು ಬಂದಾವೆ ಎತ್ತು
ಕಲೆಲಿ ಕಡೆಸಲು ಬಾಲದಲಿ

ಬಲವಂತ ಕಂಬೆರ ಗೊಂಬೆರ
ದೊಟ್ಟೆನೆಪ್ಪೆ ಎತ್ತು ಬಂದಾವೆ
ಎತ್ತು ||

ರಾಯನ ಕೈಯಿಗೆ ದೇವರ ದಿಂಬಿನ
ಕೋಲು ಅವನಪ್ಪ ಏನು ಬಿಡುವಲ್ಲ
ಎತ್ತು ಬಂದಾವೆ ಎತ್ತು ಕಾಲೆಲಿ ಕಡೆಸಲುವ
ಬಾಲದಲ್ಲಿ ಬಲವಂತ ಕಂಬೆರ ಗೊಂಬೆರ
ದೊಡ್ಡಣ್ಣನಪ್ಪ ಎತ್ತು ಬಂದಾವೆ ಎತ್ತು ||

ಶ್ರೀ ಅಹೋಬಲ ನರಸಿಂಹಸ್ವಾಮಿ ಉರುಮೆ ಸ್ತುತಿಗೀತೆ

ಹಿಂದಿನಾ ಕಾಲದಲ್ಲಿ
ಒಂದಾಳದ್ದು ಮನುಷ್ಯರಂತೆ
ಮನುಷ್ಯರಾದದಿಂದಲ್ಲಿ
ಬೆಳ್ಳಿಯಂತ ದೇವರು
ಬೆಳಿಯಂತೆ ಲಿಂಗ
ಬೆಳ್ಳಿಯಂತ ಪೂಜಾರಿ
ಬೆಳ್ಳಿಯಂತ ಒಕ್ಕಲು
ಬೆಳ್ಳಿಗೆ ಸರಿಸಮನಾದ
ದೇವರಯ್ಯಾ

ಬುದ್ದೀ ... ದಾತಾರ ... ಭೂಪಾರ
ಆಗಿನ ಕಾಲದಲ್ಲಿ
ಆರಾಳುದ ಮನುಷ್ಯ ರಂತೆ
ಮನುಷ್ಯರಾದದಿಂದಲ್ಲಿ
ಚಿನ್ನದಂತ ದೇವರು
ಚಿನ್ನದಂತ ಲಿಂಗ
ಚಿನ್ನದಂತ ಪೂಜಾರಿ
ಚಿನ್ನದಂತ ಒಕ್ಕಲು
ಚಿನ್ನಕ್ಕೆ ಸರಿಸಮನಾದ
ದೇವರಯ್ಯಾ

ಬುದ್ದೀ ... ದಾತಾರ ... ಭೂಪಾರ ...
ಈಗಿನಾ ಕಾಲದಲ್ಲಿ
ಒಂದಾಳುದ್ದು ಮನುಷ್ಯರಂತೆ
ಮನುಷ್ಯರಾ ದದಿಂದಲ್ಲಿ
ಕಲ್ಲಿನಂತ ದೇವರು
ಕಲ್ಲಿನಂತ ಪೂಜಾರಿ
ಕಲ್ಲಿನಂತ ಒಕ್ಕಲು
ಕಲ್ಲಿಗೆ ಸರಿಸಮನಾದ
ದೇವರಯ್ಯಾ

ಬುದ್ದೀ ... ದಾತಾರ ... ಭೂಪಾರ ...
ಒಂದು ನಾಮದಲಿ
ಹರ ನೀನಾದೆ
ಎರಡು ನಾಮದಲಿ
ನಾರಾಯಣನಾದೆ
ಮೂರು ನಾಮದಲಿ
ಮುಕ್ಕಣ್ಣ ನಾದೆ
ನಾಲ್ಕು ನಾಮದಲಿ
ನರಸಿಂಹಸ್ವಾಮಿ ನೀನಾದೆ
ಐದು ನಾಮದಲಿ
ಪಂಚ ಪಾಂಡವರಾದೆ
ಆರು ನಾಮದಲಿ
ಷಣ್ಮುಖನು ನೀನಾದೆ
ಏಳು ನಾಮದಲಿ
ಏಳೆಡೆ ಸರ್ಪ ನೀನಾದೆ
ಎಂಟು ನಾಮದಲಿ
ಶ್ರೀಕೃಷ್ಣನು ನೀನಾದೆ
ಒಂಬತ್ತು ನಾಮದಲಿ
ಹಂತಕನು ನೀನಾದೆ
ಹತ್ತು ನಾಮದಲಿ
ಹತ್ತು ತಲೆ ! ಇಪ್ಪತ್ತು ಭುಜವುಳ್ಳ !
ರಾವಣನು ನೀನಾದೆ

ಬುದ್ದೀ ... ದಾತಾರ ... ಭೂಪಾರ ...
ಬನ್ನಿಯ ಮರದಡಿಯಾ
ಗುರಿಯಿಟ್ಟು ಗುರಿಯೆಸುವಾಗ
ಪಟ್ಟಿ ಸಿಂಗಣ್ಣನ ಹೆಂಡ್ತಿ
ಮೆಟ್ಟಿ ಮೆಟ್ಟಿ
ಮೊಸರು ಕಡೆವಳಂತೆ
ಎತ್ತ್ಕಕನಿಂತುರಭೋ
ಎತ್ತವ್ಯೋತೆಂದರೇ

ಹಾನಿಗಲ್ಲ ಸಿಕ್ಕವನ
ಪಾದನೇ ಸೇರಿ
ಅವಳ ಹೊಟ್ಟೆಯಲ್ಲಿ
ಏಳು ಮಂದಿ
ಕುಮಾರರು ಹುಟ್ಟಿದರಂತೆ
ಹುಟ್ಟಿದೇಳು ದಿನಕೆ
ಹುಲಿ ಇರದರಂತೆ
ಮತ್ತೇಳು ದಿನಕೆ
ರಾಮರ ಬಾಣವಾಗಿ
ನಿಂತರಂತೆ
ಬುದ್ದೀ ... ದಾತಾರ ... ಭೂಪಾರ ...
ಅಂಗೈಲಿ ಆರು ಕಂಡ ಈಸ
ಮುಂಗೈಲಿ ಮೂರು ಕಂಡ ಈಸ
ಆಕಾಶ ಬಿಟ್ಟರೆ
ಆಕಾಸ ಉರದೊಯ್ತೆಂದು
ಭೂಮಿ ಬಿಟ್ಟರೆ
ಭೂಮಿಯೇ ಉರದೊಯ್ತೆಂದು
ತನ್ನ ಮೆಗ್ಗೈ ತಾನೇ
ಲ್ಯಾಪೂನೆ ಮಾಡಿಕೊಂಡು
ದಡ್ಡಗಳ್ಳಿ ದಡ್ಡಮಾನ್ಯ
ಎತ್ತೋಗಿ ಎತ್ತ ಬಂದ್ಯೆಪ್ಪಾ
ಬುದ್ದೀ ... ದಾತಾರ ... ಭೂಪಾರ ...
ಅಷ್ಟಲಿಂಗ
ಇವು ಲಿಂಗ
ಸುಳವ ಲಿಂಗ
ಸೂಕ್ಷ್ಮೇ
ಮಾದಲಿಂಗ
ಕೆಂಜೆಡೆಯ
ಸುಳಪಲ್ಲು
ಹೊಳವು ಕಂಠಾಭರಣ

ಗಂಡರಿಗೆ ಗಂಡ
ಬಲವರಿಗೆ ಮಾರ್ದಂಡ
ಅರಿಯತತ್ತರೂ
ಅರಿಕಾರನ ಮಗನೆ
ಅರಿಯ ತಂದು
ದೇವರಾ
ಬಿಂಕದೊಳಗೆ ನಿಂತು
ರನ್ನದ ಹಲಿಗೆ
ಚಿನ್ನದ ತೊಗಿನೇಣು
ರನ್ನ ಮಾಣೀಕ್ಯದ
ಕೊಡುವನೆ ತಕ್ಕೊಂಡ
ಟೋಪವೆಂದು ಟೋಪರಿಸಿದರೆ
ಬಿದ್ದವಂತಲಪ್ಪ ಮಲ್ಲಿಗೆ
ಕೆದರಿಂದವಂತಲಪ್ಪ ಕೇದಿಗೆ
ನಿನ್ನ ಮಂಡೆ ಮೇಲೆ
ಆಡುತ್ತಿದವಂತಲಪ್ಪ
ಎಳನಾಗರ ಸಂಪಿಗೆ
ಬುದ್ದೀ ... ದಾತಾರ ... ಭೂಪಾರ ...
ವಾಲಗದ ಮಗನ
ತಪ್ಪು ನೆಪ್ಪುಗಳನ್ನು
ಒಪದಿಂದಲಿ ಇತ್ತು
ನನ್ನ ಸಲಹೋ ದೇವ
ಬದ್ಧೀ ... ದಾತಾರ ... ಭೂಪಾರ

ಧ್ವನಿಸುರುಳಿ

ಅಡ್ಡಲಟ್ಟಿ ಮ್ಯಾಸಬೇಡರಿಗೆ ಸಂಬಂಧಿಸಿದ ದೇವರ ಮರಿಕುಂಟೆ "ಶ್ರೀ ಅಹೋಬಲ ನರಸಿಂಹಸ್ವಾಮಿ" ಭಕ್ತಿಗೀತೆಗಳ ಧ್ವನಿಸುರುಳಿ ಎಂಟು ಹಾಡುಗಳನ್ನು ಪ್ರಸ್ತುತ ಅನುಬಂಧದಲ್ಲಿ ಸೇರಿಸಲಾಗಿದೆ. ಈ ಧ್ವನಿಸುರುಳಿಯ ಸಾಹಿತ್ಯ : ಪ್ರೊ.ಸಾಣೇಕೆರೆ ಸಣ್ಣೋಬಯ್ಯ, ಸಂಗೀತ ನಿರ್ದೇಶನ : ಜಿ.ವಿ.ಅತ್ರಿ, ನಿರ್ಮಾಪಕಿ : ಎಸ್.ಕಾವ್ಯಶ್ರೀ, ಎಸ್.ಕೆ.ಎಸ್. ಪ್ರೊಡಕ್ಷನ್ಸ್ ವತಿಯಿಂದ ೧೯೯೭ರಲ್ಲಿ ದೇವರ ಮರಿಕುಂಟೆಯಲ್ಲಿ ಬಿಡುಗಡೆ ಮಾಡಲಾಗಿದೆ.

ಧ್ವನಿಸುರುಳಿಯ ಹಾಡುಗಳು

೧. ಅಹೋಬಲ ನೃಸಿಂಹ

೨. ದೇವಾಧಿದೇವ

೩. ವಂದನೆ ನರಸಿಂಹ

೪. ಶಿವಶರಣೆ


೫. ಗುಗ್ಗರಿ ಹಬ್ಬ

೬. ಬಡತನ ಸಿರಿತನ

೭. ಜಯವಾಗಲಿ

೮. ಮಂಗಳಂ

ಕೃಪೆ : ಪ್ರೊ.ಸಾಣೇಕೆರೆ ಸಣ್ಣೋಬಯ್ಯ, ಸಮಾಜಶಾಸ್ತ್ರ ಉಪನ್ಯಾಸಕರು,
ಸಾಣೇಕೆರೆ, ಚಳ್ಳಕೆರೆ (ತಾ), ಚಿತ್ರದುರ್ಗ (ಜಿ)





ದೇವರ ಮರಿಕುಂಟೆ
ಶ್ರೀ ಓಬಳ ನರಸಿಂಹಸ್ವಾಮಿಯ

ಸುಗ್ಗಿ ಉತ್ಸವ ಕಾರ್ಯಕ್ರಮಗಳ ವಿವರ

ದಿನಾಂಕ : 23-2-1997 ನೇ ಭಾನುವಾರ ಮಧ್ಯಾಹ್ನ ದೇವಾಮೂಲ ಪರಿಯಲ್ಲಿ ಗಂಗೆ ಪೂಜೆ.

ದಿನಾಂಕ : 24-2-1997 ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಬಿಲ್ಲಿಗಳಿಡು ಮತ್ತು ದಾಸೋಹ.

ದಿನಾಂಕ : 25-2-1997 ನೇ ಮಂಗಳವಾರ ಮುಂಜಾನೆ ಕಲ್ಲುಕಂಬದ ಮೇಲೆ, ಮೇಲುದೀಪ ಹಚ್ಚುವದು. ನಂತರ ಮಹಾಮಂಗಳಾರತಿ.



ಕೆರೆದ–ಬಂಟಿ

ಶ್ರೀಮತಿ / ಶ್ರೀ..

....

....

+ ಶ್ರೀ ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್, ಸವಣೂರು. + Phone 2330

: ಶ್ರೀ ಅಹೋಬಲ ನರಸಿಂಹಸ್ವಾಮಿ ಪ್ರಸನ್ನ :

[illegible]

ದೇವರ ಮರಿಕುಂಟೆ
ಶ್ರೀ ಅಹೋಬಲ ನರಸಿಂಹಸ್ವಾಮಿ

(ಕನ್ನಡ ಭಕ್ತಿಗೀತೆಗಳು)

ಧ್ವನಿ ಸುರುಳಿ ಬಿಡುಗಡೆ ಸಮಾರಂಭ

ಆಮಂತ್ರಣ ಪತ್ರಿಕೆ

ದಿನಾಂಕ : 23-2-1997 ಭಾನುವಾರ
ಮುಂಜಾನೆ 10-30 ಘಂಟೆಗೆ

ಸಮಾರಂಭದ ಸ್ಥಳ	ಸ್ವಾಗತಕಾರರು
ದೇವರ ಮರಿಕುಂಟೆ	ಗ್ರಾಮಸ್ಥರು,
ತಾಲ್ಲೂಕು ಚಳ್ಳಕೆರೆ.	ದೇವರ ಮರಿಕುಂಟೆ
ಜಿಲ್ಲಾ ಚಿತ್ರದುರ್ಗ.	

ಸರ್ವರಿಗೂ ಆತ್ಮೀಯ ಸುಸ್ವಾಗತ

ಧ್ವನಿ ಸುರುಳಿ ವಿವರ

[illegible]

ದೇವರ ಮರಿಕುಂಟೆ
ಶ್ರೀ ಅಹೋಬಲ ನರಸಿಂಹಸ್ವಾಮಿ

(ಕನ್ನಡ ಭಕ್ತಿಗೀತೆಗಳು)

...ಗಾಯಕರು...

* ಹಾಡಿನ ಕೋಗಿಲೆ ಜಿ. ವಿ. ಅತ್ರಿ
* ಕಸ್ತೂರಿ ಶಂಕರ್
* ಬಿ. ಆರ್. ಛಾಯಾ
* ಕು. ಅರ್ಚನಾ
* ಪಿಪ್ಪು





ಸಂಗೀತ : ಜಿ. ವಿ. ಅತ್ರಿ

ಸಾಹಿತ್ಯ : [illegible]

ಶ್ರೀ ಅಹೋಬಲ ನರಸಿಂಹಸ್ವಾಮಿ

(ಕನ್ನಡ ಭಕ್ತಿಗೀತೆಗಳು)

ಧ್ವನಿಸುರುಳಿ ಬಿಡುಗಡೆ ಸಮಾರಂಭ

: ದಿವ್ಯ ಸಾನಿಧ್ಯ :

ಶ್ರೀ ಶ್ರೀ ಶ್ರೀ ಶಿವಲಿಂಗಾನಂದಸ್ವಾಮಿಗಳು
ಶ್ರೀ ಕಬೀರಾನಂದಾಶ್ರಮ, ಚಿತ್ರದುರ್ಗ.

: ಕ್ಯಾಸೆಟ್ ಬಿಡುಗಡೆ :

ಗೌರವಾನ್ವಿತ

ಶ್ರೀ ಎಸ್. ವೈ. ಹನುಮಂತಪ್ಪನವರು
[illegible]

: ಅಧ್ಯಕ್ಷತೆ :

ಶ್ರೀ [illegible]
[illegible]

ಮುಖ್ಯ ಅತಿಥಿಗಳು :–

* ಶ್ರೀ [illegible]
  [illegible]
* ಶ್ರೀ ಸತೀಶ ಬಿ. ಹಾರಕಿಹೊಳೆ
  [illegible]
* ಶ್ರೀ ಎಚ್. ಆರ್. ಕಾಶಿಂಗಕೃಷ್ಣ
  [illegible]
* ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ
  [illegible]
* ಶ್ರೀ ಎಸ್. [illegible]
  [illegible]
* ಶ್ರೀ ಟಿ. ಓಬಳಪ್ಪ
  [illegible]

ಸ್ವಾಗತ : ಶ್ರೀ [illegible]
[illegible]
[illegible]



ಅಹೋಬಲ ನೃಸಿಂಹ

ಏಳಯ್ಯ ಅಹೋಬಲ ನರಸಿಂಹ ಬೆಳಗಾಯಿತು || ಪ ||
ನನ್ನಯ್ಯ ಓಬಯ್ಯ ಏಳಯ್ಯ ಗೋವಿಂದ
ನನ್ನಯ್ಯ ನರಸಿಂಹ ಏಳಯ್ಯ ಮುಕುಂದ || ಅ.ಪ. ||
ಮೂಡಣದ ಒಡಲಿಂದ ಮೂಡಿಹನು ದಿನಕರ
ತರುಲತೆಯು ತೂಗಾಡಿ ಬೀಸುತಿವೆ ಚಾಮರ,
ನಿಡಗಲ್ಲು ಗಿರಿಯೆಲ್ಲ ರಂಗೇರಿ ಹೋಗಿದೆ
ದಾಸರ ಸಡಗರದ ಪೂಜೆಯು ನಡೆದಿದೆ.
ತಂಗಿ ಗೂಲಮ್ಮ ದರುಶನಕೆ ನಿಂತಿಹಳು
ತಮ್ಮ ಚನ್ನಿಗರಾಯ ಸನ್ನಿಧಿಗೆ ಬಂದಿಹನು,
ಶ್ರೀಗಂಧ ಪರಿಮಳ ಅರ್ಚಕನು ಚಲ್ಲಿಹನು
ಶಂಖ ಜಾಗಟೆ ಗಂಟೆ ವಾದ್ಯಗಳು ಮೊಳಗಿವೆ.
ರಸಬಾಳೆ ಸಂಪಿಗೆ ಹೊಂಬಾಳೆ ಮಲ್ಲಿಗೆ
ಹತ್ತು ಬಿಂದಿಗೆ ಹಾಲು ಹುರುಳಿ ನಾ ತಂದಿರುವೆ,
ತುರುಕರುಗಳು ಬಂದಿಹವು ಭೂತಗಳು ಕಾದಿಹವು
ಬಿಲ್ಲುಗೂಡಿನ ಪೂಜೆ ಹೊತ್ತೇರಿ ಹೋಯಿತು.

ದೇವಾಧಿದೇವ

ಅಹೋಬಲ ಬಂದನೋ - ನೋಡಿರೋ ಬೇಗ
ದೇವಾಧಿದೇವ ನರಸಿಂಹ ಬಂದನೋ || ಪ ||
ಗರುಡಗಮನ ಬಂದ ಗಂಡುಗಲಿಯು ಬಂದ
ಗೋವಿಂದ ಬಂದ ಗೋಪಾಲಕೃಷ್ಣ ಬಂದ,
ದಾಸಶ್ರೇಷ್ಠನು ಬಂದ ಧರ್ಮರಕ್ಷಕ ಬಂದ
ಕಮಲನಾಥನು ಬಂದ ಕ್ಷೇತ್ರಪಾಲಕ ಬಂದ.
ಉರಗಾದ್ರಿವಾಸ ಬಂದ ಶ್ರೀಹರಿಯು ಬಂದ
ಪುಂಡರೀಕಾಕ್ಷ ಬಂದ ಪ್ರಹ್ಲಾದವರದ ಬಂದ,
ಸಾಂಮ್ರಾಣಿಪ್ರಿಯ ಬಂದ ಹೊಂಬಾಳೆ ಚಲುವ ಬಂದ
ಕದರಿನರಸಿಂಹ ಬಂದ ಶ್ರೀಲಕ್ಷ್ಮೀರಮಣ ಬಂದ.
ವರಹಾದೇವ ಬಂದ ವಾಸುದೇವ ತಾ ಬಂದ
ಚೆಲುವ ಚನ್ನಿಗ ಚನ್ನಕೇಶವ ಬಂದ,
ಪಾನಕ ಪ್ರಿಯ ಬಂದ ಕಮಲನಾಭನು ಬಂದ
ಭಕ್ತಿಪ್ರಿಯ ಬಂದ ಬ್ರಹ್ಮಾಂಡಪಾಲ ಬಂದ.

ವಂದನೆ ನರಸಿಂಹ

ವಂದನೆ ನರಸಿಂಹ ವಂದನೆ ಮಹಾಸಿಂಹ
ವಂದನೆ ಗೋವಿಂದ ವಂದನೆ ಅಹೋಬಲ || ಪ ||
ನಿಡಗಲ್ಲು ಬೆಟ್ಟದ ತುದಿಯಲ್ಲಿ ನಿಂತೆ
ಮರಿಕುಂಟೆ ಪುರದಲಿ ನೀ ನೆಲಸಿದಂತೆ,
ಹಂಚಿಯ ಗುಡಿಯಲ್ಲಿ ಕಂಚಿನ ಕದವಂತೆ
ಬಿಲ್ಲು ಬಾಣವಂತೆ ಬಿಲ್ಲುಗೂಡು ನಿನಗಂತೆ.
ಬೆಳ್ಳಿಯಂಥ ಒಕ್ಕಲು ಸೇರಿಹುದು ನಿನಗೆ
ಭಕ್ತಿಯಿಂದಲಿ ನಾನು ಬಂದಿರುವೆ ನಿನಗೆ,
ಮಲ್ಲಿಗೆ ಬಿಡಿಸಿ ಮಡಿಯಿಂದ ತಂದಿರುವೆ
ಅಕ್ಕಿ ಹುರುಳಿ ಹೊತ್ತು ನಡೆದು ಬಳಲಿಬಂದೆ.
ವೇದಾವತಿ ನದಿಯಲ್ಲಿ ಮಹಾಪೂಜೆ ಮಾಡಿದೆ
ನಿಡುಗಲ್ಲು ಗಿರಿಯ ತವರೂರು ನೋಡಿದೆ,
ದೊಡ್ಡೆಡೆ ತಿರುಗುವೆ ಗೆಜ್ಜೆಗಳ ಚಲ್ಲಿದೆ
ಬೆಲ್ಲ ಬಾಳೆಯಹಣ್ಣು ಹುರುಳಿ ಗುಗ್ಗರಿ ಇಲ್ಲಿ.
ದೇವರೆತ್ತಿನ ಪೂಜೆ ಕಾಸು ಮೀಸಲು ನಿನಗೆ
ನೂರೊಂದು ಹಣ್ಣಿನೆಡೆ ಬಿಲ್ಲುಗೂಡು ನಿನ್ನಯ ಪೂಜೆಗೆ
ನಡೆಮುಡಿ ಹಾಸುವೆ ಓಲಗ ಮಾಡುವೆ
ಜಾಗಟೆ ಬಡಿದು ತಿರುಮಂತ್ರ ಹಾಡುವೆ.

ಶಿವಶರಣೆ

ಶರಣು ಶರಣಮ್ಮ ಶಿವಶರಣೆ ಗೂಲಮ್ಮ
ನಮ್ಮಯ ಮನೆದೇವಿ ಶರಣೆಂಬೆ ಕುಲದೇವಿ ‖ ಪ ‖
ವನರಾಣಿ ಮಹಾರಾಣಿ ಮರಿಕುಂಟೆ ಮಹದೇವಿ
ಸಿರಿಯುಳ್ಳ ಸಿರಿದೇವಿ ನಿಡಗಲ್ಲು ನಿಜದೇವಿ,
ತಪೋಭೂಮಿ ನಾಡಲ್ಲಿ ತುಗ್ಗಲಿ ಮರಹುಟ್ಟಿ
ನಾಡಿಗೆ ಹೆಸರಾಯ್ತು ಮಹಾತಾಯಿ ನೆಲಸಿ.
ಧವಲ ಪತ್ತಲ ಉಟ್ಟು ನಾಗಸಂಪಿಗೆ ಮುಡಿದು
ಓಬಯ್ಯನ ಉಡಿಯಿಕ್ಕಿ ಅರಿಷಿಣ ಕುಂಕುಮ,
ಶನಿವಾರ ಮಹಾಪೂಜೆ ವೇದಾಮಾತೆಯ ಪೂಜೆ
ಸ್ಫಟಿಕ ಸಾಲಿಗ್ರಾಮ ರುದ್ರಾಕ್ಷಿ ಆಭರಣ.
ಬಂಜೆಗೆ ಮಕ್ಕಳು ಕುರುಡಗೆ ಕಂಗಳು
ನಂಬಿದ ಭಕ್ತರಿಗೆ ಇಂಬು ಕೊಡುವವಳೆ,
ಗುಡಿ ಮುಂದೆ ಮಣೇವು ಬೆಲ್ಲ ಬಾಳೆಹಣ್ಣು
ಓಬಯ್ಯ ತಿರುಗ್ಯಾನು ದಿಗಿದಿಗೆ ಕುಣಿದಾನು.

ಗುಗ್ಗರಿ ಹಬ್ಬ

ಜಾತ್ರೆಗಿ ಹೋಗೋಣ
ಕಾಳೆ ಹಬ್ಬವ ಮಾಡೋಣ || ಪ ||
ಅಣ್ಣ ತಮ್ಮಾರು ಸೇರೋಣ
ಗುಗ್ಗರಿ ಹಬ್ಬವ ಮಾಡೋಣ,
ಶಿವ ಶರಣೆಯ ನೆನೆಯೋಣ
ತಾಯಿ ಗೂಲಮ್ಮಗೆ ನಮಿಸೋಣ.
ನಿಡಗಲ್ಲಿಗೆ ನಡೆಯೋಣ
ರಾಮತಿರ್ಥವ ನೋಡೋಣ
ಗಂಗೆ ಪೂಜೆಯ ಮಾಡೋಣ
ಸ್ವಾಮಿ ಓಬಯ್ಯಗೆ ನಮಿಸೋಣ.
ಬಿಲ್ಲುಗೂಡಿಗೆ ಹೋಗೋಣ
ದಾಸರ ಪೂಜೆಯ ನೋಡೋಣ,
ಗುಗ್ಗರಿ ಪ್ರಸಾದ ಪಡೆಯೋಣ
ತಂದೆ ಗೋವಿಂದಗೆ ನಮಿಸೋಣ.
ಕಲ್ಲು ಕಂಭಕೆ ನಮಿಸೋಣ
ತುಪ್ಪ ದೀಪವ ಹಚ್ಚೋಣ,
ಹಣ್ಣಿನ ಆರತಿ ಬೆಳಗೋಣ
ಹರಿ ನರಸಿಂಹಗೆ ನಮಿಸೋಣ.

ಬಡತನ ಸಿರಿತನ

ಬಡತನ ಸಿರಿತನ ನನಗೇಕೆ ನರಸಿಂಹ
ಅಹೋಬಳ ನಾಮದ ಬಲವೊಂದೆ ಸಾಕೆನಗೆ || ಪ ||
ಮರಿಕುಂಟೆ ಕರುನಾಡು ನರಸಿಂಹನ ನೆಲೆಬೀಡು
ಸಿರನಗೆ ಹೊಂಬಾಳೆ ಬಂಗಾರ ನಿನರೂಪ,
ದಿಗಿದಿಗಿ ಕುಣಿಯುವೆ ಗರಗರ ತಿರುಗುವೆ
ಧರೆಗಿಳಿದು ನೀ ಬಾರೋ ಓಬಳ ನೀನಾಗಿ.
ಬಾಗಿದ ಹೊಂಬಾಳೆ ಬೆಳಗಿದ ಪಂಚಕಳಸ
ಬೆಳ್ಳಿ ಬೆತ್ತದ ಕೋಲು ಚಿನ್ನದ ಬವನಾಸಿ,
ಕುರ್ಕಿಗುಡ್ಡದ ಕಂಭ ಎಕ್ಕೆಗೊಂದಿಯ ತಮ್ಮ
ರಾಮತೀರ್ಥದ ಪೂಜೆ ವೇದಾವತಿಯ ಗಂಗೆ.
ಉಕ್ಕು ಕಂಭವ ಸೀಳಿ ಕಂದನ ಪಾಲಿಸಿದೆ
ಯತಿಗಳಿಗೆ ಬೆಳಕಾದೆ ಭಕ್ತರಿಗೆ ವರವಾದೆ,
ನಿಂಬೆಯ ಹಣ್ಣಿನಲ್ಲಿ ಕುಳಿತಿದೆ ನಿನ್ನ ಮಹಿಮೆ
ಸಾಲಿಗ್ರಾಮದಲ್ಲಿ ಅಡಗಿದೆ ನಿನ್ನ ಲೀಲೆ

ಜಯವಾಗಲಿ

ಜಯವಾಗಲಿ ನಿತ್ಯ ಶುಭವಾಗಲಿ
ಅಹೋಬಲ ನರಸಿಂಹ ಕಾಪಾಡಲಿ ‖ ಪ ‖
ನಿಡಗಲ್ಲು ಸಾಮ್ರಾಜ್ಯ ಬೆಳಕಾಗಲಿ
ಮರಿಕುಂಟೆ ಪುರವೆಲ್ಲ ನಲಿದಾಡಲಿ.
ಕುಲದೈವ ನಮ್ಮನ್ನು ಹಾರೈಸಲಿ
ಈ ಕ್ಷೇತ್ರ ಎಂದೆಂದೂ ಚಿರವಾಗಲಿ.
ಕಲ್ಲುಕಂಭದ ಜ್ಯೋತಿ ನಂದದಿರಲಿ
ಭಕ್ತರಿಗೆ ಈ ಕ್ಷೇತ್ರ ವರವಾಗಲಿ.
ಚಿರಕಾಲ ಕರುನಾಡು ಹೆಸರಾಗಲಿ
ಅಮೃತದ ಸುಧೆಯಿಲ್ಲಿ ಹರಿದಾಡಲಿ.
ಅಣ್ಣತಮ್ಮಗಳ ಸಂಬಂಧ ಸ್ಥಿರವಾಗಲಿ
ಶ್ರೀಹರಿ ಗೋವಿಂದ ಕಾಪಾಡಲಿ.

ಮಂಗಳಂ

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಶ್ರೀಹರಿ ನರಸಿಂಹ ಗೋವಿಂದಗೆ || ಪ ||
ಶಿರಬಾಗಿ ವಂದಿಸುವೆ ನರಸಿಂಹಗೆ
ಕರಮುಗಿದು ಬೇಡುವೆ ಮಹಾಸಿಂಹಗೆ.
ಕಲ್ಲುಕಂಭದ ಸ್ವಾಮಿ ಕುಲದೇವಗೆ
ಮರಿಕುಂಟೆ ನರಸಿಂಹ ಮನೆದೇವಗೆ.
ದಿಗಿದಿಗಿ ಕುಣಿಯುವ ನರಸಿಂಹಗೆ
ಗರಗರ ತಿರುಗುವ ಓಬಯ್ಯಗೆ.
ಪುಂಡರೊಳಗೆ ಪುಂಡ ಪ್ರಚಂಡಗೆ
ಗಂಡುಗಲಿಯ ಗಂಡ ಗೋವಿಂದಗೆ.

ವಕ್ತೃ ವಿವರ

ಕ್ರ. ಸಂ.	ಹೆಸರು	ವಯಸ್ಸು	ವೃತ್ತಿ	ವಿಳಾಸ	ಸಂದರ್ಶನದ ದಿನಾಂಕ
೧.	ನಿಂಗಯ್ಯ ಎಂ.	೫೪	ಪ್ರಾಥಮಿಕಶಾಲೆ ಶಿಕ್ಷಕ	ಎಂ.ನಿಂಗಯ್ಯ ತಂದೆ ಎಂ.ಮಟ್ಯೋಬನಾಯಕ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೨.	ತಿಪ್ಪೇಸ್ವಾಮಿ ಎಂ.	೫೨	ವ್ಯವಸಾಯ	ಎಂ.ತಿಪ್ಪೇಸ್ವಾಮಿ ತಂದೆ ಮಟ್ಯೋಬನಾಯಕ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೩.	ಜಯಣ್ಣ ಎಂ.	೪೮	ಕೃಷಿ ವ್ಯವಸಾಯ	ಎಂ.ಜಯಣ್ಣ ತಂದೆ ಮಟ್ಯೋಬನಾಯಕ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೪.	ಗಾದಿರಮ್ಮ ಗೋವಿಂದಪ್ಪ	೭೨	ವ್ಯವಸಾಯ	ಗಾದಿರಮ್ಮ ಗೋವಿಂದಪ್ಪ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೫.	ನಾಗರಾಜ ಇ.	೩೨	ವ್ಯವಸಾಯ	ಇ.ನಾಗರಾಜ ತಂದೆ ಈರೋಬಣ್ಣ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೬.	ಮಹಾಂತೇಶ್ ಕೆ.	೪೦	ವ್ಯವಸಾಯ	ಇ.ಮಾಂತೇಶ್ ತಂದೆ ಈರೋಬನಾಯಕ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೭.	ತಿಪ್ಪೇಸ್ವಾಮಿ ಎಂ.	೫೦	ವ್ಯವಸಾಯ	ಎಂ.ತಿಪ್ಪೇಸ್ವಾಮಿ ತಂದೆ ಎಂ.ಮರಿಕುಂಟ್ಲೆಪ್ಪ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೮.	ನರಸಿಂಹ ಟಿ.	೧೬	ವ್ಯವಸಾಯ	ಟಿ.ನರಸಿಂಹ ತಂದೆ ತಿಪ್ಪೇಸ್ವಾಮಿ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೯	ಚಿಕ್ಕೋಬಣ್ಣ ಕೆ.	೪೫	ವ್ಯವಸಾಯ	ಕೆ.ಚಿಕ್ಕೋಬಣ್ಣ ತಂದೆ ಕುರಿಯೋಬಜ್ಜ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೧೦.	ಮಹಾಂತೇಶ್ ಕೆ.	೪೦	ವ್ಯವಸಾಯ	ಕೆ.ಮಹಾಂತೇಶ್ ತಂದೆ ಕುರಿಯೋಬಜ್ಜ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೧೧.	ಟೈಲರ್ ಗೋವಿಂದಪ್ಪ	೪೦	ವ್ಯವಸಾಯ	ಟೈಲರ್ ಗೋವಿಂದಪ್ಪ ತಂದೆ ಓಬಣ್ಣ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೧೨	ದಾಸ್ರೋಬಣ್ಣ	೭೦	ವ್ಯವಸಾಯ	ದಾಸ್ರೋಬಣ್ಣ ತಂದೆ ದಾಸಜ್ಜ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೧೩	ಸಣ್ಣಓಬಣ್ಣ	೪೦	ವ್ಯವಸಾಯ	ಸಣ್ಣಓಬಣ್ಣ ತಂದೆ ಮರಿಕುಂಟ್ಲಪ್ಪ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩
೧೪	ಓಬಣ್ಣ ಎನ್.	೫೪	ವ್ಯವಸಾಯ	ಎನ್.ಓಬಣ್ಣ ತಂದೆ ನರಸಿಂಹಪ್ಪ, ಸಾಣೇಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೧೧.೧೧.೨೦೦೩

೧೫.	ನರಸಿಂಹಣ್ಣ	೫೬	ವ್ಯವಸಾಯ	ನರಸಿಂಹಣ್ಣ ತಂದೆ ಮರಿಕುಂಟ್ಲಪ್ಪ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೧೬.	ಕರಿಯಮ್ಮ	೬೫	ವ್ಯವಸಾಯ	ಕರಿಯಮ್ಮ ಗಂಡ ದಾಸಪ್ಪ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೧೭.	ನಿಂಗಪ್ಪ ಎನ್.	೪೨	ಜವಾನ	ಎನ್.ನಿಂಗಪ್ಪ ತಂದೆ ನರಸಿಂಹಪ್ಪ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೧೮.	ನಾಗರಾಜ ಎನ್.	೪೦	ವ್ಯವಸಾಯ	ಎನ್.ನಾಗರಾಜ ತಂದೆ ನರಸಿಂಹಪ್ಪ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೧೯	ಗಂಗಮ್ಮ ಎನ್.	೩೦	ವ್ಯವಸಾಯ	ಎನ್.ಗಂಗಮ್ಮ ಗಂಡ ಚಿಪ್ಪೇಸ್ವಾಮಿ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೨೦.	ಏಕಾಂತಪ್ಪ	೩೮	ವ್ಯವಸಾಯ	ಏಕಾಂತಪ್ಪ ತಂದೆ ಈರೋಬಣ್ಣನಾಯಕ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೨೧.	ತಿಪ್ಪೇಸ್ವಾಮಿ ಇ.	೪೦	ವ್ಯವಸಾಯ	ಇ.ತಿಪ್ಪೇಸ್ವಾಮಿ ತಂದೆ ಈರೋಬಣ್ಣನಾಯಕ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೨೨.	ಓಬಣ್ಣ ಡಿ.	೭೫	ವ್ಯವಸಾಯ	ಡಿ.ಓಬಣ್ಣ ತಂದೆ ದಾಸಪ್ಪ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೨೩.	ತಿಪ್ಪೇಸ್ವಾಮಿ	೫೨	ವ್ಯವಸಾಯ	ತಿಪ್ಪೇಸ್ವಾಮಿ ತಂದೆ ದೊಡ್ಡೋಬಜ್ಜ, ಸಾಣೀಕೆರೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೧.೦೧.೨೦೦೩
೨೪.	ರಮೇಶ್	೨೮	ವ್ಯವಸಾಯ	ರಮೇಶ್ ತಂದೆ ಚಿನ್ನಪ್ಪ, ದೇವರ ಮರಿಕುಂಟೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೨.೦೧.೨೦೦೩
೨೫.	ಓಬಣ್ಣ	೩೦	ಗ್ರಾಮಸೇಕ	ಓಬಣ್ಣ ತಂದೆ ಚಿನ್ನೋಬಣ್ಣ ದೇವರ ಮರಿಕುಂಟೆ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೨.೦೧.೨೦೦೩
೨೬.	ಕೆಂಗೋಬಯ್ಯ ಎಸ್.	೭೦	ವ್ಯವಸಾಯ	ಎಸ್.ಕೆಂಗೋಬಯ್ಯ ತಂದೆ ಸಣ್ಣೋಬಯ್ಯ, ವಡೇರಹಳ್ಳಿ, ಚಳ್ಳಕೆರೆ (ತಾ) ಚಿತ್ರದುರ್ಗ (ಜಿ)	೦೨.೦೧.೨೦೦೩
೨೭.	ಚಿದಾನಂದಪ್ಪ	೪೫	ವ್ಯವಸಾಯ	ಚಿದಾನಂದಪ್ಪ ತಂದೆ ನಿಂಗಪ್ಪ, ಹುಚ್ಚವ್ವನಹಳ್ಳಿ, ಹಿರಿಯೂರು (ತಾ) ಚಿತ್ರದುರ್ಗ (ಜಿ)	೦೨.೦೧.೨೦೦೩
೨೮.	ಶಾಂತಪ್ಪ	೪೦	ವ್ಯವಸಾಯ	ಶಾಂತಪ್ಪ ತಂದೆ ನಿಂಗಪ್ಪ, ಹುಚ್ಚವ್ವನಹಳ್ಳಿ, ಹಿರಿಯೂರು (ತಾ) ಚಿತ್ರದುರ್ಗ (ಜಿ)	೦೨. ೦೧. ೨೦೦೩
೨೯.	ಪ್ರೊ.ಸಾಣೀಕೆರೆ ಸಣ್ಣೋಬಯ್ಯ	೩೯	ಉಪನ್ಯಾಸಕರು	ಪ್ರೊ. ಸಾಣೀಕೆರೆ ಸಣ್ಣೋಬಯ್ಯ ತಂದೆ ಕೆಂಗೋಬಯ್ಯ, ಸವದತ್ತಿ (ತಾ) ಚಿತ್ರದುರ್ಗ (ಜಿ)	೧೨. ೦೧. ೨೦೦೩
೩೦.	ಜಿ. ಓಬಣ್ಣ	೫೦	ಸೀನಿಯರ್ ಆಡಿಟರ್	ಜಿ. ಓಬಣ್ಣ ತಂದೆ ಗೋವಿಂದಪ್ಪ, ಬೆಂಗಳೂರು	೧೬.೦೨.೨೦೦೩

(ಪ್ರಶ್ನಾವಳಿ)

I. ಸಾಮಾನ್ಯ ಮಾಹಿತಿ

ಅ) ಸಮೀಕ್ಷೆಯ ದಿನಾಂಕ :
ಆ) ವಾಸಸ್ಥಾನ/ಗ್ರಾಮ :
ಇ) ಹೋಬಳಿ :
ಈ) ತಾಲ್ಲೂಕು :
ಉ) ಬುಡಕಟ್ಟು : ಮ್ಯಾಸಬೇಡರು / ಕಾಡುಗೊಲ್ಲರು
ಊ) ಮಾತೃಭಾಷೆ :

ಋ) ಮನೆ ದೇವರು :
ೠ) ಗೋತ್ರ / ಬೆಡಗು / ಬಳಿ :
ಎ) ಮನೆತನದ ಹೆಸರು :
ಏ) ಕುಲ ಚಿನ್ಹೆ :
ಐ) ಭೂ ಹಿಡುವಳಿ(ಎಕರೆಗಳಲ್ಲಿ)
೧) ಒಣ...
೨) ನೀರಾವರಿ ....

ಒ) ಪಶು ಸಂಪತ್ತು (ಸಂಖ್ಯೆಗಳಲ್ಲಿ)
೧) ಎತ್ತು :
೨) ಆಕಳು :
೩) ಎಮ್ಮೆ :
೪) ಕೋಣ :
೫) ಕುರಿ :
೬) ಮೇಕೆ :
೭) ಕೋಳಿ :
೮)

II. ವೈಯಕ್ತಿಕ ಮಾಹಿತಿ

ಜಿಲ್ಲೆ: ಚಿತ್ರದುರ್ಗ

ಕ್ರ. ಸಂ	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ವೈವಾಹಿಕ ಸ್ಥಾನಮಾನ	ವಿವಾಹಿತಳ ಬೆಡಗು/ಜಾತಿ	ಶೈಕ್ಷಣಿಕ ಮಟ್ಟ	ಕಸುಬು	ಕುಟುಂಬ ಯೋಜನೆ (✓)	ಸರಕಾರಿ ಸೌಲಭ್ಯಗಳು (✓) ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ
I	II	III	IV	V	VI	VII	VIII	IX	X	XI	XII	XIII	XIV
೦೧		ಮುಖ್ಯಸ್ಥ/ ಳು											
೦೨													
೦೩													
೦೪													
೦೫													
೦೬													
೦೭													
೦೮													
೦೯													
೧೦													
೧೧													
೧೨													
೧೩													
೧೪													

ಓ) ಮನೆ ಮಾದರಿ ☑
೧) ಗುಡಿಸಲು ☐
೨) ಮಾಳಿಗೆ ಮನೆ ☐
೩) ಹೆಂಚಿನ ಮನೆ ☐
೪) ಆರ್.ಸಿ.ಸಿ. ಮನೆ ☐
೫) ಕೊಟ್ಟಿಗೆ ಮನೆ ☐
೬) ಟಿನ್ ಮನೆ ☐
೭)

ಔ) ಸೌಲಭ್ಯಗಳು ☑
೧) ಪಡಿತರ ಚೀಟಿ ☐
೨) ಮನೆ (ಸ್ವ ☐ / ಸ ☐)*
೩) ನಿವೇಶನ (ಸ್ವ ☐ / ಸ ☐)*
೪) ವಿದ್ಯುತ್ ದೀಪ (ಸ್ವ ☐ / ಸ ☐
೫) ಬಂಡಿ / ಎತ್ತಿನಗಾಡಿ ☐
೬) ಸೈಕಲ್ ☐
೭) ಸ್ಕೂಟರ್ ☐
೮) ಆಟೋ ರಿಕ್ಷಾ ☐
೯) ರಿಕ್ಷಾ ☐
೧೦) ಜೀಪ್ ☐
೧೧) ಕಾರು ☐
೧೨) ಟ್ರಾಕ್ಟರ್ ☐
೧೩) ಲಾರಿ ☐
೧೪) ರೇಡಿಯೋ ☐
೧೫) ಟೇಪ್ ರಿಕಾರ್ಡರ್ ☐
೧೬) ಟಿ.ವಿ. ☐
೧೭) ವಿ.ಸಿ.ಆರ್ ☐
೧೮) ವಿ.ಸಿ.ಪಿ ☐
೧೯) ಟೆಲಿಫೋನ್ ☐
೨೦) ಫ್ರಿಜ್ ☐
೨೧) ಶೌಚಾಲಯ ☐
೨೨) ಸ್ನಾನದ ಕೋಣೆ ☐
೨೩)
೨೪)

೧೭. ಭೈರಪ್ಪ ಕೆ. ಸಮಾಜಶಾಸ್ತ್ರ ಮೂಲತತ್ವಗಳು, ಸುರೇಶ್ ಪಬ್ಲಿಕೇಶನ್ಸ್, ಗದಗ, ೧೯೯೫

೧೮. ಭೈರಪ್ಪ ಕೆ. ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು, ಗುಲ್ಬರ್ಗಾ, ೧೯೯೭

೧೯. ಮೈತ್ರಿ ಕೆ. ಬುಡಕಟ್ಟುಗಳ ಕುಲಕಸುಬು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೦. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೧. ವಿರೂಪಾಕ್ಷಿ ಪೂಜಾರಹಳ್ಳಿ, ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಬೇಟೆ ಮತ್ತು ಬೇಡರ ಸಂದರ್ಭಗಳು, ಪಿಎಚ್.ಡಿ. ಮಹಾಪ್ರಬಂಧ.

೨೨. ವಿರುಪಾಕ್ಷಿ ಪೂಜಾರಹಳ್ಳಿ, ಗಾದರಿ ಪಾಲನಾಯಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೩. ವೀಣಾ ಎಂ.ಪಿ. ಮನೆ, ಸಮಾಜ ಮತ್ತು ಸಂಸ್ಕೃತಿ, ನೆಲಮನೆ ಪ್ರಕಾಶನ, ಬೆಂಗಳೂರು, ೨೦೦೧

೨೪. ಶಂಕರನಾರಾಯಣ ತೀ.ನಂ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆ, ೧೯೮೨

೨೫. ಶಂಕರರಾವ್ ಚ.ನ. ಭಾರತೀಯ ಸಮಾಜ, ಜೈಭಾರತ ಪ್ರಕಾಶನ, ಮಂಗಳೂರು, ೧೯೯೫

೨೬. ಶಂಕರರಾವ್ ಚ.ನ. ಭಾರತದ ಸಾಮಾಜಿಕ ಸಮಸ್ಯೆಗಳು, ಜೈಭಾರತ ಪ್ರಕಾಶನ, ಮಂಗಳೂರು, ೧೯೯೫

೨೭. ಸಾಣೇಕೆರೆ ಸಣ್ಣೋಬಯ್ಯ, ಮ್ಯಾಸಬೇಡರ ವಸತಿ ಕೇಂದ್ರ ಅಡ್ಲಟ್ಟಿ, ವಾಲ್ಮೀಕಿ ಕರ್ನಾಕಟ ಮಾಸಪತ್ರಿಕೆ, ಬೆಂಗಳೂರು - ೫೮. ಏಪ್ರಿಲ್ - ೨೦೦೩

೨೮. ಸಾಣೇಕೆರೆ ಸಣ್ಣೋಬಯ್ಯ, ದೈವ ಸಂಗಮ (ಅಪ್ರಕಟಿತ ಹಸ್ತಪ್ರತಿ), ಸಾಣೇಕೆರೆ, ಚಳ್ಳಕೆರೆ ತಾಲೂಕು, ಚಿತ್ರದುರ್ಗ ಜಿಲ್ಲೆ

೨೯. ಹಿರೇಮಠ ಎಸ್.ಎಸ್. ಕರ್ನಾಟಕದಲ್ಲಿ ದಲಿತ ಸಂಸ್ಕೃತಿ ಪರಂಪರೆ ಭಾಗ - ೨, ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ

ಪತ್ರಿಕೆಗಳು

೧. ಪ್ರಜಾವಾಣಿ ವಿಶೇಷಾಂಕ, ೨೦೦೨

೨. ವಾಲ್ಮೀಕಿ ವಾಣಿ

ಆಂಗ್ಲ ಗ್ರಂಥಗಳು

1. Principles of Sociology, Bharma R.M, Publishers Pvt. Ltd, Bombay, 1968

2. Thurston, Eduger and Rangachari K, Castes and tribes of southern India, 7 Vol. Madras Government Press, 1909